ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper ಸಂಪಾದಕರು: ರಮೇಶರೆಡ್ಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

| VOLUME-ಸಂಪುಟ:12 | ISSUE- ಸಂಚಿಕೆ: 344 | PAGE- ಪುಟ 8 | ಬುಧುವಾರ 15.01.2025 ಬೀದರ | RNI NO:KARKAN/2011/48371 | RS.ಬೆಲೆ 2/- |
|---|---|---|---|---|---|



ಹುಮನಾಬಾದ್:.ಶ್ರೀ ವೀರಭದ್ರೇಶ್ವರ ಜಾತ್ರೆಯು ಸಂಕ್ರಾಂತಿ ಹಬ್ಬದ ದಿನದಂದು ಅಧಿಕೃತವಾಗಿ ಚಾಲನೆಯಾಗಿದ್ದು. ಮಂಗಳವಾರ ಇಲ್ಲಿನ ಹಿರೇಮಠ ಸಂಸ್ಥಾನ ಶ್ರೀಗಳಾದ ಶ್ರೀ ರೇಣುಕಾ ಗಂಗಾಧರ, ಮಾಜಿ ಸಚಿವರು.ಹಾಲಿ ಶಾಸಕರುಗಳು. ದೇವರ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು.

## ಲಕ್ಷ್ಮಿ ಹೆಬ್ಬಾಳ್ಕರ್ ಪ್ರಯಾಣಿಸುತ್ತಿದ್ದ ಕಾರು ಅಪಘಾತ:

# ಪ್ರಾಣಾಪಾಯದಿಂದ ಸಚಿವೆ ಪಾರು

ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ:ಜ.14: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತೆರಳುತ್ತಿದ್ದ ಕಾರ್ ಅಪಘಾತಕ್ಕೀಡಾಗಿದೆ. ಅಂಬಡಗಟ್ಟಿಯ ಸಮೀಪ ಕಾರು ಅಪಘಾತಕ್ಕೀಡಾಗಿದ್ದು, ಅದೃಷ್ಟವಶಾತ್ ಲಕ್ಷ್ಮಿ ಹೆಬ್ಬಾಳ್ಕರ್ ಪ್ರಾಣಾಪಾಯದಿಂದಪಾರಾಗಿದ್ದಾರೆ.



ಕಾರು ಅಪಘಾತದಲ್ಲಿ ಗಾಯಗೊಂಡಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಬೆಳಗಾವಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.ಲಕ್ಷ್ಮೀಹೆಬ್ಬಾಳ್ಕರ್ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯ ಮಾತನಾಡಿ, ಲಕ್ಷ್ಮೀ ಹೆಬ್ಬಾಳ್ಕರ್ ಅವರ ಬೆನ್ನಿನ ಎಲ್ 1 ಮತ್ತು ಎಲ್ 4 ಮೂಳೆ ಮುರಿತವಾಗಿದೆ.ಕುತ್ತಿಗೆಗೆ ಪೆಟ್ಟಿಗೆ ಬಿದ್ದಿದೆ. ಮೆದುಳು ಬಾವು ಬಂದಿದೆ. ಹೀಗಾಗಿ ಚಿಕಿತ್ಸೆ ನೀಡುತ್ತಿದ್ದೇವೆ. ಶೀಘ್ರದಲ್ಲೇ ಗುಣಮುಖರಾಗುತ್ತಾರೆ ಎಂದು ಹೇಳಿದರು.

ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನ ಅಂಬಡಗಟ್ಟಿ ಬಳಿ ಮರಕ್ಕೆ ಕಾರು ಗುದ್ದಿ ಈ ಅಪಘಾತ ಸಂಭವಿಸಿದೆ.

ಕಾರಿನಲ್ಲಿದ್ದ ಲಕ್ಷ್ಮಿ ಹೆಬ್ಬಾಳ್ಕರ್ ಮತ್ತು ಅವರ ಸೋದರ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅಪಾಯದಿಂದ ಪಾರಾಗಿದ್ದಾರೆ.

ನಾಯಿಅಡ್ಡಬಂದಹಿನ್ನೆಲೆಯಲ್ಲಿ ಅದನ್ನು ತಪ್ಪಿಸಲು ಹೋಗಿ ಕಾರು ಅಪಘಾತಕ್ಕೀಡಾಗಿದೆ. ನಾಯಿಗೆ ಡಿಕ್ಕಿ ತಪ್ಪಿಸಲು ಹೋಗಿ ನಿಯಂತ್ರಣ ತಪ್ಪಿದ ಕಾರು ಮರಕ್ಕೆ ಡಿಕ್ಕಿ ಹೊಡೆದಿದೆ.ಬೆಳಗ್ಗೆ ಆರು ಘಂಟೆಯ ಸಮಯದಲ್ಲಿ ಕಾರು ಅಪಘಾತವಾಗಿದೆ.

ಡಿಕ್ಕಿಯ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಬೆಳಗಾವಿ ಖಾಸಗಿ ಆಸ್ಪತ್ರೆಗೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ದಾಖಲಾಗಿದ್ದಾರೆ. ಸಿಎಲ್ ಪಿ ಸಭೆ ಮುಗಿಸಿ ನಿನ್ನೆ ತಡರಾತ್ರಿ ಬೆಂಗಳೂರಿನಿಂದ ಬೆಳಗಾವಿಗೆ ಹೊರಟ್ಟಿದ್ದ ಲಕ್ಷ್ಮೀ ಹೆಬ್ಬಾಳಕರ್ ರಸ್ತೆ ಮಾರ್ಗದ

(2ನೇ ಪುಟ ನೋಡಿ)



ಹುಮನಾಬಾದ್:ಗ್ರಾಮ ದೇವತೆ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿಂದು ಸಂಕ್ರಾಂತಿ ಹಾಗೂ ಜಾತ್ರೆಯಂಗವಾಗಿ ನಡೆದ ದೇವರ ಪಲ್ಲಕ್ಕಿ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀ ಗಂಗಾಧರ ಶ್ರೀ.,ಮಾಜಿ ಸಚಿವ ರಾಜಶೇಖರ ಪಾಟೀಲರೊಂದಿಗೆ ಆರುಶ ರಮೇಶರಡ್ಡಿಯನ್ನು ಕಾಣಬಹುದು.

# ಕೆಯುಡಬ್ಲ್ಯೂಜೆ

## ವಾರ್ಷಿಕ ಪ್ರಶಸ್ತಿ ಪ್ರಕಟ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಜ.14:ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ(ಕೆಯುಡಬ್ಲ್ಯೂಜೆ)ದ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು,ತುಮಕೂರಿನಲ್ಲಿ ಜನವರಿ 18 ಮತ್ತು 19 ರಂದು ನಡೆಯಲಿರುವ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಅವರು ತಿಳಿಸಿದ್ದಾರೆ.

ಪ್ರಶಸ್ತಿಗಳ ವಿವರ ಇಂತಿದೆ:1. ಜಿ.ನಾರಾಯಣಸ್ವಾಮಿ ಪ್ರಶಸ್ತಿ (ಅತ್ಯುತ್ತಮಗ್ರಾಮಾಂತರವರದಿಗೆ) ಚಂದ್ರಶೇಖರ ಮುಕ್ಕುಂದಿ, ವಿಜಯಕರ್ನಾಟಕ,ಗಂಗಾವತಿ

ದಿಗಂಬರ ಮುರುಳೀಧರ ಪೂಜಾರ್, ಸಂಯುಕ್ತ ಕರ್ನಾಟಕ, ಗದಗ

2.ಪಟೇಲ್ ಭೈರಹನುಮಯ್ಯ ಪ್ರಶಸ್ತಿ(ಅತ್ಯುತ್ತಮ ಮಾನವೀಯ ವರದಿಗೆ)

ಪ್ರಸನ್ನಮನೋಹರಕುಲಕರ್ಣಿ, ಡೆಕ್ಕನ್ ಹೆರಾಲ್ಡ್, ಖಾನಾಪುರ.

ರವಿರಾಜ್ ಆರ್ ಗಲಗಲಿ, ವಿಜಯಕರ್ನಾಟಕ,ಬಾಗಲಕೋಟೆ

3.ಗಿರಿಧರ್ ಪ್ರಶಸ್ತಿ(ಅತ್ಯುತ್ತಮ ಅಪರಾಧ ವರದಿಗೆ)

ಮಂಜುನಾಥ್.ಕೆ.,ವಿಜಯವಾಣಿ, ಬೆಂಗಳೂರು

ಶಕೀಲ ಚೌದರಿ,ಅಫಜಲಪುರ, ಕಲಬುರಗಿ

4. ಬಿ. ಎಸ್. ವೆಂಕಟರಾಂ ಪ್ರಶಸ್ತಿ (ಅತ್ಯುತ್ತಮ ಸ್ಕೂಪ್ ವರದಿಗೆ)

(2ನೇ ಪುಟ ನೋಡಿ)

# ಅಹಂಕಾರ ಮುಕ್ತಮಾಡಲೆಂದೆ

## ಶ್ರೀ ವೀರಭದ್ರೇಶ್ವರ ದೇವರ ಜನ್ಮ : ಡಾ.ಜ್ಞಾನರಾಜ ಪ್ರಭು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಜ.14: ಅಹಂಕಾರಮುಕ್ತಮಾಡಲೇಂದೆ ಶ್ರೀ ವೀರಭದ್ರೇಶ್ವರ ದೇವರು ಜನ್ಮತಾಳಿದ್ದಾರೆ ಎಂದು ಮಾಣಿಕನಗರದಡಾ.ಜ್ಞಾನರಾಜ ಪ್ರಭುಗಳು ತಿಳಿಸಿದರು.

ಮಕರಸಂಕ್ರಾಂತಿಹಬ್ಬದಂದು ಜನವರಿ. 14 2025 ಕ್ಕೆ ಹುಮನಾಬಾದ್ ಸ್ಥಾಪನೆಯಾಗಿ 300 ವರ್ಷ ಆಗಿರುವುದರಿಂದ. ಮಾಣಿಕನಗರದಿಂದ ಹುಮನಾಬಾದ್ ಪ್ರಮುಖ ಬೀದಿಗಳ ಮುಖಾಂತರ ಗ್ರಾಮ ದೇವರಾದ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಮೆರವಣಿಗೆ ಮುಖಾಂತರ ತೆರಳಿ. ದೇವರಿಗೆ ವಿಶೇಷ ಪೂಜೆ ನೆರವೇರಿಸಿ ಭಕ್ತರನ್ನುದ್ದೇಶಿಸಿ ಮಂಗಳವಾರ ಮಾತನಾಡಿದರು.

ಮನುಷ್ಯನಲ್ಲಿ ಅಸೂಯೆ, ನಾನು ಎಂಬ ಅಹಂಕಾರ ಬರಬಾರದು. ಸರಳತೆಯಿಂದ ಜೀವನ ನಡೆಸಬೇಕು ಎಂದು ಕರೆ ನೀಡಿದರು.

ಮಾಣಿಕನಗರ ಹಾಗೂ ಹುಮನಾಬಾದ್ ಇವೆರೆಡು

(2ನೇ ಪುಟ ನೋಡಿ)

## ಜಿಲ್ಲಾಡಳಿತದ ನಿಷೇಧದ ಮಧ್ಯೆ

### ಪಲ್ಲಕ್ಕಿ ಮೇಲೆ ಕುರಿಮರಿ ಎಸೆದ ಭಕ್ತರು



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಜ.14:ಜಿಲ್ಲಾಡಳಿತ ಹೇರಿರುವ ನಿಷೇಧದ ನಡುವೆಯೂ ಮಂಗಳವಾರ ನಡೆದ ಪಲ್ಲಕ್ಕಿ ಉತ್ಸವದಲ್ಲಿ ಭಕ್ತರು ಕುರಿಮರಿಗಳನ್ನು ಎಸೆದು ತಮ್ಮ ಹರಕೆಯನ್ನು ತೀರಿಸಿದ ಘಟನೆ ಯಾದಗಿರಿ ತಾಲೂಕಿನ ಮೈಲಾಪುರ ಮೈಲಾರಲಿಂಗೇಶ್ವರ ಜಾತ್ರೆ ವೇಳೆ ನಡೆದಿದೆ.

ದೇವರಹೆಸರಿನಲ್ಲಿನಡೆಯುವ ಮೌಢ್ಯದ ಬಗ್ಗೆ ಬಹಳಷ್ಟು ಆಚರಣೆ ಹಾಗೂ ಪ್ರಾಣಿ

(2ನೇ ಪುಟ ನೋಡಿ)

# ರೈಲ್ವೆ ಯೋಜನೆಗಳಿಗೆ

## ಹೆಚ್ಚಿನ ಒತ್ತು: ಸಚಿವ ವಿ.ಸೋಮಣ್ಣ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.14: ರೈಲ್ವೆ ಇಲಾಖೆಯಿಂದ ಕಲ್ಯಾಣ ಕರ್ನಾಟಕ,ಮುಂಬೈಕರ್ನಾಟಕ, ಮಧ್ಯಕರ್ನಾಟ ಭಾಗದ ರೈಲ್ವೆ ಯೋಜನೆಗಳಿಗೆ ಹೆಚ್ಚಿನ ಒತ್ತು ಕೊಡಲಾಗುತ್ತಿದೆ ಎಂದು ಜಲ ಶಕ್ತಿ ಮತ್ತು ರೈಲ್ವೆ ಖಾತೆಯ ರಾಜ್ಯಸಚಿವರಾದ ವಿ.ಸೋಮಣ್ಣ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರದ ಕುಷ್ಟಗಿ ರಸ್ತೆಯಲ್ಲಿ ನೈಋತ್ಯ ರೈಲ್ವೆ ವತಿಯಿಂದ ಆಯೋಜಿಸಲಾಗಿದ್ದ ರೈಲ್ವೆ ಮೇಲ್ಸೇತುವೆಯ ಉದ್ಘಾಟನೆ ಕಾರ್ಯಕ್ರಮವನ್ನು ನೆರವೇರಿಸಿ ಮಾತನಡಿದರು.

ದೇಶದ ವಿವಿಧೆಡೆ 10, 15, 20 ವರ್ಷದ ಬಹುತೇಕ ರೈಲ್ವೆ ಕಾಮಗಾರಿಗಳು ನೆನಗುದಿಗೆ ಬಿದ್ದಿದ್ದವು. ನರೇಂದ್ರ ಮೋದಿಜಿಯವರು ಪ್ರಧಾನ ಮಂತ್ರಿಗಳಾದ ಬಳಿಕ ಎಲ್ಲಾ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳ್ಳುವುದಲ್ಲದೇ ಅನೇಕ ಹೊಸ-ಹೊಸ ಯೋಜನೆ ಮತ್ತು ಕಾಮಗಾರಿಗಳು ಲೋಕಾರ್ಪಣೆಯಾಗಿ ಜಾರಿಯಾಗುತ್ತಿವೆ. ರೈಲ್ವೆ ಇಲಾಖೆಯ ನೇಮಕಾತಿ ಪರೀಕ್ಷೆಯನ್ನು ಕನ್ನಡದಲ್ಲಿ

(2ನೇ ಪುಟ ನೋಡಿ)

## ಕಟ್ಟಡ ಪೂರ್ಣಗೊಂಡು ಎರಡು ವರ್ಷವಾದರೂ ಉದ್ಘಾಟನೆ ಭಾಗ್ಯ ಕಾಣದ ವಸತಿ ನಿಲಯ; ವಿದ್ಯಾರ್ಥಿಗಳ ಶಿಕ್ಷಣಕ್ಕೆ ಕುತ್ತು

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 14: ನಗರದಿಂದ ಸುಮಾರು 10 ಕಿ. ಮೀ. ದೂರ ಇರುವ ಘೋಡಂಪಳ್ಳಿ ಗ್ರಾಮದಲ್ಲಿ ನಿರ್ಮಾಣವಾದ ಸುಸಜ್ಜಿತವಾದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಸತಿ ನಿಲಯದ ಕಟ್ಟಡ ಪೂರ್ಣಗೊಂಡು ಎರಡು ವರ್ಷ ಕಳೆದರೂ ಉದ್ಘಾಟನೆಯಾಗದೆ ಪಾಳು ಬಿದ್ದಿದೆ.

ಹಳ್ಳಿ ವಿದ್ಯಾರ್ಥಿಗಳಿಗೆ ಉಪಯೋಗವಾಗಲೆಂದು ಸರಕಾರ ಈ ವಸತಿ ಕಾಲೇಜು ಪ್ರಾರಂಭ ಮಾಡಿದೆ.

ಕಾಲೇಜು ಪ್ರಾರಂಭವಾಗಿ ನಾಲ್ಕು ವರ್ಷ ಕಳೆದಿವೆ.



ಕಾಲೇಜು ಮತ್ತು ವಸತಿ ನಿಲಯದ ಹೊಸ ಕಟ್ಟಡ ನಿರ್ಮಾಣವಾಗಿ ಎರಡು ವರ್ಷ ಕಳೆದಿದೆ. ಆದರೆ ಹೊಸ ಕಟ್ಟಡದಲ್ಲಿ ಕಾಲೇಜು ಪ್ರಾರಂಭವಾದರೂ ಸಹ ವಸತಿ ನಿಲಯ ಪ್ರಾರಂಭವಾಗದೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೆ-ಊಂದರೆಯಾಗಿದೆ. ಕಟ್ಟಡದಲ್ಲಿ ನೀರಿನ ವ್ಯವಸ್ಥೆ, ಕಂಪ್ಯೂಟರ್ ವ್ಯವಸ್ಥೆ ಹಾಗೂ ಕಟ್ಟಡ ವ್ಯವಸ್ಥೆ ಎಲ್ಲವೂ ಇದ್ದರೂ ಉಪಯೋಗಕ್ಕೆ ಬಾರದಂತಾಗಿದೆ.

ಈ ಕಾಲೇಜು ಮತ್ತು ವಸತಿ ನಿಲಯದ ಕಟ್ಟಡ ಸುಮಾರು 10 ಎಕರೆ ಭೂ ಪ್ರದೇಶದಲ್ಲಿ ಕೋಟ್ಯಾಂತರ ದುಡ್ಡಿನಿಂದ ನಿರ್ಮಾಣಗೊಂಡಿದೆ. ಇಲ್ಲಿ ಬಿ. ಎ, ಬಿ.ಎಸ್ಸಿ ಹಾಗೂ ಬಿ.ಕಾಂ ಪದವಿ ಕೋರ್ಸ್‌ಗಳಿವೆ. ಪ್ರಸ್ತುತ ಕಾಲೇಜಿನಲ್ಲಿ 10 ಖಾಯಂ ಉಪನ್ಯಾಸಕರು ಹಾಗೂ 12 ಅತಿಥಿ ಉಪನ್ಯಾಸಕರಿದ್ದಾರೆ.

ಕಾಲೇಜಿಗೆ ಸರಿಯಾದ ರಸ್ತೆ ನಿರ್ಮಾಣವಾಗಿಲ್ಲ. ಬೀದರ್

(2ನೇ ಪುಟ ನೋಡಿ)

## ಒಂದನೇ ಪುಟದಿಂದ

### ಶ್ರೀ ವೀರಭದ್ರೇಶ್ವರ ದೇವರ ಜನ್ಮ : ಡಾ.ಜ್ಞಾನರಾಜ ಪ್ರಭು

ಗ್ರಾಮಗಳಿಗೆ ಹಿಂದಿನಿಂದಲೂ ಉತ್ತಮ ಸಂಬಂಧವಿದೆ. ಇದರ ಹಿಂದೆ ಇತಿಹಾಸವಿದೆ ಎಂದರು. ಇಲ್ಲಿ ಕೇವಲ ಶ್ರೀ ವೀರಭದ್ರೇಶ್ವರ ಮೂರ್ತಿ ಇಲ್ಲ. ಸಾಕ್ಷಾತ ಶ್ರೀ ವೀರಭದ್ರೇಶ್ವರ ದೇವರು ಇಲ್ಲಿ ನೆಲೆಸಿದ್ದಾರೆ. ಇಲ್ಲಿ ಶಕ್ತಿ ಇದೆ ಎಂದರು.

ಡಾ ಜ್ಞಾನರಾಜ ಪ್ರಭುಗಳ ಯಾತ್ರೆಗೆ ಹುಮನಾಬಾದ್ ನಲ್ಲಿ ಭಕ್ತರು ಭವ್ಯ ಸ್ವಾಗತ ನೀಡಿದರು. ಜೈಘೋಷಗಳ ಮೂಲಕ ಯಾತ್ರೆಗೆ ಸ್ವಾಗತಿಸಿದರು. ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ. ರವರ ಪರಿವಾರದಿಂದ ಶ್ರೀ ಗಳಿಗೆ ವಿಶೇಷ ವಾಗಿ ಸನ್ಮಾನಿಸಿ ಗೌರವಿಸಲಾಯಿತು. ಹುಮನಾಬಾದ್ ನಗರದ ಪ್ರಮುಖ ಬೀದಿಗಳಲ್ಲಿ ಶ್ರೀ ಗಳಿಗೆ ರಂಗೋಲಿ. ಬಿಡಿಸುವುದರ ಮೂಲಕ, ಹಾಗೂ ಹೂಗಳ ಮಾಲೆಗಳನ್ನು ಹಾಕುವುದರ ಮೂಲಕ ಭವ್ಯ ಸ್ವಾಗತ ನೀಡಿದರು.

ಈ ಸಂದರ್ಭದಲ್ಲಿ ಶಾಸಕ ಸಿದ್ದಲಿಂಗಪ್ಪಾ ಪಾಟೀಲ. ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ವೀರಣ್ಣ ಪಾಟೀಲ, ಆನಂದರಾಜ ಪ್ರಭುಗಳು, ಮಲ್ಲಿಕಾರ್ಜುನ ಮಾಶಟ್ಟಿ, ಸೋಮಶೇಖರ್ ಬುಳ್ಳಾ, ಮಹೇಶ ಅಗಡಿ, ದತ್ತಕುಮಾರ ಚಿದ್ರಿ, ಸೇರಿದಂತೆ ಇತರರಿದ್ದರು. ವಿಶೇಷವಾಗಿ ಹಿರೇಮಠ ಶ್ರೀ ರೇಣುಕಾಗಂಗಾಧರ ಶ್ರೀ ಗಳು ಶ್ರೀ ಡಾ.ಜ್ಞಾನರಾಜ ಶ್ರೀ ಗಳಿಗೆ ಸ್ವಾಗತಿಸಿ. ಸನ್ಮಾನಿಸಿ ಗೌರವಿಸಿದರು.

## ಹೆಚ್ಚಿನ ಒತ್ತು: ಸಚಿವ ವಿ.ಸೋಮಣ್ಣ

ಬರೆಯಲು ಅವಕಾಶ ಕೊಡಬೇಕೆಂಬ ಸುಮಾರು 50 ವರ್ಷಗಳ ಬೇಡಿಕೆಯನ್ನು ಪ್ರಧಾನಿ ನರೇಂದ್ರ ಮೋದಿಜಿ ರವರು ಈಡೇರಿಸಿದ್ದು, ದೇಶದ 10 ರಾಜ್ಯ ಭಾಷೆಗಳಲ್ಲಿ ರೈಲ್ವೆ ಪರೀಕ್ಷೆ ಬರೆಯಬಹುದಾಗಿದೆ. ಕೇಂದ್ರ ಸರ್ಕಾರವು 25 ಸಾವಿರ ಕೋಟಿ ರೂ. ವೆಚ್ಚದಲ್ಲಿ ದೇಶದ ಅನೇಕ ರೈಲು ನಿಲ್ದಾಣಗಳ ಅಭಿವೃದ್ಧಿ ಮಾಡುತ್ತಿದ್ದೇವೆ. ಇದರಲ್ಲಿ ನಮ್ಮ ರಾಜ್ಯಕ್ಕೆ 2000 ಕೋಟಿ ರೂ.ಗಳನ್ನು ರೈಲು ನಿಲ್ದಾಣಗಳ ಅಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ. ಸಾಮಾನ್ಯ ಜನರು ಓಡಾಡುವ ರೈಲು ನಿಲ್ದಾಣಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಅವುಗಳಲ್ಲಿ ಅಗತ್ಯ ಕುಡಿಯುವ ನೀರು, ಶೌಚಾಲಯ, ನಿರೀಕ್ಷಣಾ ಕೊಠಡಿ, ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಸೇರಿದಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕೆಂಬ ಉದ್ದೇಶದಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ ಎಂದರು.

ರಾಯದುರ್ಗಾ–ತುಮಕೂರು, ತುಮಕೂರು–ಚಿತ್ರದುರ್ಗಾ–ದಾವಣಗೇರೆ, ಗದಗ–ವಾಡಿ, ತುಮಕೂರು–ಚಿತ್ರದುರ್ಗಾ, ಕಡೂರು–ಚಿಕ್ಕಮಂಗಳೂರು–ಬೇಲೂರು ಸೇರಿದಂತೆ ರಾಜ್ಯದ ವಿವಿಧ ರೈಲು ಮಾರ್ಗಗಳಿಗಾಗಿ 29 ಸಾವಿರ ಕೋಟಿ ರೂ.ಗಳನ್ನು ಕೇಂದ್ರ ಸರ್ಕಾವು ನೀಡಿದ್ದು, ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಈ ಕೆಲಸಗಳು ಪೂರ್ಣಗೊಳಿಸುತ್ತೇವೆ. ರೈಲ್ವೆ ಸಂಪರ್ಕದಿಂದ ಕರ್ನಾಟಕದಲ್ಲಿ ಹೊಸ ಯುಗ ನಿರ್ಮಾಣವಾಗಲಿದೆ ಎಂದು ಹೇಳಿದರು.

ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ ಅವರು ಮಾತನಾಡಿ, ಕುಷ್ಟಗಿ ರಸ್ತೆಯ ರೈಲ್ವೆ ಮೇಲ್ಸೇತುವೆಯು ಅತ್ಯವಶ್ಯಕವಾಗಿತ್ತು. ಇದರ ಉದ್ಘಾಟನೆಯಿಂದ ದಕ್ಷಿಣ ಭಾರತ ಕುಂಭಮೇಳ ಎಂದು ಹೆಸರಾದ ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಆಗಮಿಸುವ ಭಕ್ತಾದಿಗಳ ಸಂಚಾರಕ್ಕೂ ಅನುಕೂಲವಾಗಿದೆ. ಈ ಸೇತುವೇ ನಿರ್ಮಾಣಕ್ಕಾಗಿ ಮಾಜಿ ಸಂಸದರಾದ ಕರಡಿ ಸಂಗಣ್ಣನವರ ಪ್ರಯತ್ನ ಬಹಳಷ್ಟಿದೆ. ಈ ಸೇತುವೆಗೆ ವೀರರಾಣಿ ಕಿತ್ತೂರು ಚೆನ್ನಮ್ಮನವರ ಹೆಸರಿಡಬೇಕೆಂಬುದು ಬಹು ಜನರ ಬೇಡಿಕೆಯಾಗಿದ್ದು, ಇದಕ್ಕೆ ಅನುಕೂಲ ಮಾಡಿಕೊಡಬೇಕು. ಬಾಗಲಕೋಟೆ–ಗಂಗಾವತಿ ಮತ್ತು ಗಂಗಾವತಿ–ದರೋಜಿ ರೈಲು ಮಾರ್ಗಗಳನ್ನು ಮಂಜೂರು ಮಾಡಿಕೊಡಬೇಕು. ಕೊಪ್ಪಳ ನಗರದ ಗಂಗಾವತಿ ರಸ್ತೆಯ ಮೆಡಿಕಲ್ ಕಾಲೇಜು ಹತ್ತಿರದ ಕಿಡಿದಾಳ ಗೇಟ್‌ನಲ್ಲಿ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಆರಂಭಿಸಿದರೆ, ಜನರಿಗೆ ಅನುಕೂಲವಾಗುತ್ತದೆ. ಹನುಮನ ಜನ್ಮಸ್ಥಳವಾದ ಅಂಜನಾದ್ರಿಯಿಂದ ಅಯೋಧ್ಯೆಗೆ ವಂದೇ ಭಾರತ್ ರೈಲಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಿದರು.

ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾಜಿ ಸಚಿವ ಹಾಲಪ್ಪ ಆಚಾರ, ಸಿವಿ ಚಂದ್ರಶೇಖರ, ಡಾ. ಬಸವರಾಜ ಕ್ಯಾ ವಟರ, ಹಾಗೂ ಇತರರು ಇದ್ದರು.

ಮುಂಚೆ ಶ್ರೀ ಗವಿಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿದರು. ಕಾರ್ಯಕ್ರಮದ ನಂತರ ಕೊಪ್ಪಳ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಮೃತ ಭಾರತ್ ಸ್ಟೇಶನ್ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮಜದ್ ಪಟೇಲ್, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಮಾಜಿ ಸಂಸದ ಶಿವರಾಮೆಗೌಡ, ನೈರುತ್ಯ ರೈಲ್ವೆ ಹುಬ್ಬಳ್ಳಿಯ ವಿಭಾಗೀಯ ವ್ಯವಸ್ಥಾಪಕರಾದ ಬೇಲಾ ಮೀನಾ, ಕನ್ಸ್ಟ್ರಕ್ಷನ್ ಸಿಇಓ ಬೆಂಗಳೂರಿನ ಅಜಯ್ ಶರ್ಮಾ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ರೈಲ್ವೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಪಲ್ಲಕ್ಕಿ ಮೇಲೆ ಕುರಿಮರಿ ಎಸೆದ ಭಕ್ತರು

ಹಿಂಸೆಯನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕುರಿಮರಿಗಳನ್ನು ಹಾರಿಸದಂತೆ ಎಲ್ಲ ರೀತಿಯ ಮುಂಜಾಗ್ರತಾ ಕ್ರಮವನ್ನು ಕೈಗೊಂಡಿತ್ತು. ಆದರೂ ಅಧಿಕಾರಿಗಳ ಕಣ್ತಪ್ಪಿಸಿದ ಇಲ್ಲಿನ ಭಕ್ತರು ಕುರಿಮರಿ ಹಾರಿಸಿದ್ದಾರೆ.ಕುರಿಮರಿಗಳ ಮೇಲೆ ತೀವ್ರ ನಿಗಾ ವಹಿಸಿದ್ದ ಜಿಲ್ಲಾಡಳಿತ, ಮುಂಜಾಗ್ರತಾ ಕ್ರಮವಾಗಿ ದೇವಸ್ಥಾನಕ್ಕೆ ತೆರಳುವ ಎಲ್ಲಾ ಪ್ರಮುಖ ಮಾರ್ಗಗಳಲ್ಲಿ ಎರಡು ಮೂರು ದಿನಗಳ ಮುಂಚೆಯೇ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿತ್ತು.

ಈ ಜಾತ್ರೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತುಜೊತೆಗೆ ಕಂದಾಯ, ಪಶು ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜನೆ ಮಾಡಿತ್ತು. ಆದರೆ ಅದು ಸಂಪೂರ್ಣವಾಗಿ ವಿಫಲವಾಗಿದೆ. ಹೊರ ರಾಜ್ಯಗಳಿಂದ ಮತ್ತು ಪಕ್ಕದ ಜಿಲ್ಲೆಗಳಿಂದ ಭಕ್ತರು ಬರುವ ಪ್ರತಿ ವಾಹವನ್ನು ತಪಾಸಣೆ ಮಾಡಿ ಕುರಿ ಮರಿಗಳು ಕಂಡು ಬಂದಲ್ಲಿ ಅವುಗಳನ್ನು ವಶಕ್ಕೆ ಪಡೆದು ಪೋಷಣಾ ಕೇಂದ್ರಕ್ಕೆ ಕಳುಹಿಸಿ ಸೂಕ್ತ ಆರೈಕೆ ಮಾಡಲಾಗುತ್ತಿದೆ. ಇಷ್ಟೆಲ್ಲಾ ಸಿದ್ಧತೆಯ ಮಧ್ಯೆಯೂ ಭಕ್ತರು ಕುರಿಮರಿಗಳನ್ನು ಪಲ್ಲಕ್ಕಿಯ ಮೇಲೆ ಹಾರಿಸಿದ್ದು, ಜಿಲ್ಲಾಡಳಿತಕ್ಕೆ ಸದ್ಯ ನುಂಗಲಾರದ ಬಿಸಿ ತುಪ್ಪವಾಗಿದೆ.

## ಪ್ರಾಣಾಪಾಯದಿಂದ ಸಚಿವೆ ಪಾರು

ಮೂಲಕ ಬರುತ್ತಿದ್ದರು. ಅಂಬಡಗಟ್ಟಿ ಗ್ರಾಮದ ಬಳಿ ಅಡ್ಡಬಂದ ನಾಯಿ ತಪ್ಪಿಸಲು ಹೋಗಿ ಮರಕ್ಕೆ ಕಾರು ಡಿಕ್ಕಿಯಾಗಿದೆ.

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬೆನ್ನು, ಮುಖಕ್ಕೆ ಸಣ್ಣಪುಟ್ಟ ಗಾಯವಾಗಿದ್ದು, ಎಂಎಲ್?ಸಿ ಚೆನ್ನರಾಜ ಹಟ್ಟಿಹೊಳಿ ತಲೆಗೆ ಗಾಯಯಾಗಿದೆ. ಸಚಿವೆ ಲಕ್ಷ್ಮೀ ಹೆಬ್ಬಾಳಕರ್?ಗೆ ಬೆಳಗಾವಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

## ವಿಜ್ಞಾನ ವಸ್ತು ಪ್ರದರ್ಶನ

ಬೀದರ್:ಜ.14: ದತ್ತಗಿರಿ ಮಹಾರಾಜ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ನಗರದ ದತ್ತಗಿರಿ ಮಹಾರಾಜ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಇತ್ತೀಚೆಗೆ ರೆಡ್–ಡೇ, ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನ ನಡೆಯಿತು.

ಸಂಸ್ಥೆಯ ಗೌರವ ಅಧ್ಯಕ್ಷ ಅವಧೂತಗಿರಿ ಮಹಾರಾಜ ಉದ್ಘಾಟಿಸಿದರು.ಸಂಸ್ಥೆಯ ಅಧ್ಯಕ್ಷ ಮಲ್ಲಿಕಾರ್ಜುನ ಹತ್ತಿ, ಉಪಾಧ್ಯಕ್ಷ ರಮೇಶ ಜಿ. ದುಕಾನದಾರ , ಕಾರ್ಯದರ್ಶಿ ಶಿವರಾಜ ಪಾಟೀಲ, ಕೋಶಾಧ್ಯಕ್ಷ ಪ್ರಭಾಕರ ಮೈಲಾಪೂರೆ, ಸದಸ್ಯರಾದ ನವೀನ್ ದುಕಾನದಾರ, ಪ್ರಾಚಾರ್ಯೆ ಜಯದೇವಿ ಆರ್. ಯದಲಾಪೂರೆ ಹಾಜರಿದ್ದರು. ಶಾಲಾ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನ, ಕಸೂತಿ ಕಲೆಗಳು ಗಮನ ಸೆಳೆದವು.

## ಉದ್ಘಾಟನೆ ಭಾಗ್ಯ ಕಾಣದ ವಸತಿ ನಿಲಯ; ವಿದ್ಯಾರ್ಥಿಗಳ ಶಿಕ್ಷಣಕ್ಕೆ ಕುತ್ತು

ನಗರದಿಂದ ಸುಮಾರು 10 ಕಿ. ಮೀ ದೂರ ಇರುವ ಈ ಕಾಲೇಜಿಗೆ ಬಸ್ಸಿನ ವ್ಯವಸ್ಥೆಯು ಇಲ್ಲದಾಗಿದೆ. ಅತ್ತ ಬಸ್ಸಿನ ವ್ಯವಸ್ಥೆಯು ಇಲ್ಲ, ಇತ್ತ ವಸತಿ ನಿಲಯದ ಉದ್ಘಾಟನೆಯು ಕಾಣದ ಕಾರಣದಿಂದಾಗಿ ಈ ಕಾಲೇಜಿಗೆ ವಿದ್ಯಾರ್ಥಿಗಳು ಬರುದಾದರೂ ಹೇಗೆ?

ಘೋಡಂಪಳ್ಳಿಯಲ್ಲಿ ನೂತನ ಕಟ್ಟಡ ನಿರ್ಮಾಣವಾಗುವುಕ್ಕಿಂತ ಮೊದಲ ಎರಡು ವರ್ಷ ನೌಬಾದ್ ನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಸಲಾಗಿತ್ತು. ಆವಾಗ ಈ ಕಾಲೇಜಿನಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಆದರೆ ಎರಡು ವರ್ಷದಿಂದ ಘೋಡಂಪಳ್ಳಿಯಲ್ಲಿ ನಿರ್ಮಾಣವಾದ ನೂತನ ಕಟ್ಟಡಕ್ಕೆ ಕಾಲೇಜು ಸ್ಥಳಾಂತರಗೊಂಡಿದ್ದರಿಂದಾಗಿ ಅಲ್ಲಿ ವಸತಿ ನಿಲಯ ಹಾಗೂ ಬಸ್ಸಿನ ವ್ಯವಸ್ಥೆ ಇಲ್ಲದ ಕಾರಣ ವಿದ್ಯಾರ್ಥಿಗಳ ಸಂಖ್ಯೆ ಸಂಪೂರ್ಣವಾಗಿ ಇಳಿಮುಖವಾಗಿದ್ದು, ಸುಮಾರು 250 ಕ್ಕೆ ಬಂದು ತಲುಪಿದೆ.ಜಿಲ್ಲೆಯ ಬಸವಕಲ್ಯಾಣ, ಭಾಲ್ಕಿ, ಹುಮನಾಬಾದ್ ಹಾಗೂ ಔರಾದ್ ತಾಲ್ಲೂಕಿನ ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಾರೆ. ದಿನಾಲು ವಿದ್ಯಾರ್ಥಿಗಳು ಅವರ ಊರಿನಿಂದ ಕಾಲೇಜಿಗೆ ಅಷ್ಟೊಂದು ದೂರದಿಂದ ಬರುವುದು ಅಸಾಧ್ಯವಾಗಿದೆ. ಕಾರಣ ಬಸ್ಸಿನ ಕೊರತೆ. ಹಾಗೆಯೇ ಹಳ್ಳಿಯಿಂದ ಇಲ್ಲಿವರೆಗೆ ಸಮಯಕ್ಕೆ ಬರಬೇಕು ಎಂದರೆ ಆಗುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಪರೀಕ್ಷೆ ಇದ್ದಾಗ ಮಾತ್ರ ಬಂದು, ಪರೀಕ್ಷೆ ಬರೆದು ತೆರಳುವ ದುಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಅವರ ಶಿಕ್ಷಣದ ಗತಿ ಏನಾಗಿರಬೇಕು? ವಸತಿ ನಿಲಯ ಉದ್ಘಾಟನೆಯಾಗದಿದ್ದರೆ ಮುಂದಿನ ದಿನಗಳಲ್ಲಿ ಯಾವ ವಿದ್ಯಾರ್ಥಿಯು ಇತ್ತ ಸುಳಿಯದೆ, ಕಾಲೇಜು ಮುಚ್ಚುವ ಪರಿಸ್ಥಿತಿ ಬಂದೇ ಬರುತ್ತದೆ ಎಂದು ಹೇಳಬಹುದು.

ಒಟ್ಟು 600 ವಿದ್ಯಾರ್ಥಿಗಳ ಸಾಮರ್ಥ್ಯವಿರುವ (ಬಾಲಕಿಯರ ವಸತಿ ನಿಲಯವು 300 ಹಾಗೂ ಬಾಲಕರ ವಸತಿ ನಿಲಯದಲ್ಲಿ 300) ವಸತಿ ನಿಲಯವು ಸಂಪೂರ್ಣವಾಗಿ ಪಾಳು ಬಿದ್ದಿರುವ ಪರಿಸ್ಥಿತಿಯಲ್ಲಿ ಕಂಡು ಬರುತ್ತಿದೆ. ಕಟ್ಟಡದ ಕಿಟಕಿಗಳು ಒಡೆದು ಹೋಗಿದ್ದು, ಇಡೀ ಕಟ್ಟಡ ನಾಶವಾಗುವ ಹಂತಕ್ಕೆ ತಲುಪುತ್ತಿದೆ. ನಗರದ ಗುಂಪಾವರೆಗೆ ಬರುವ ಬಸ್ಸುಗಳು ಈ ಕಾಲೇಜಿನವರೆಗೂ ಬರಬೇಕು ಎಂದು ಬಸ್ ಡಿಪೋದಲ್ಲಿ ಮನವಿ ಪತ್ರ ಸಲ್ಲಿಸಲಾಗಿದೆ. ಆದರೆ ಬಸ್ಸಿನ ಡ್ರೈವರ್ ಹಾಗೂ ಕಂಡಕ್ಟರ್ ಗಳ ಕೊರತೆ ಇರುವುದರಿಂದ ಅಲ್ಲಿವರೆಗೆ ಬಸ್ಸು ಓಡಿಸಲು ಸಾಧ್ಯವಿಲ್ಲ ಎಂದು ಬಸ್ ಡಿಪೋದವರು ಹೇಳುತ್ತಿದ್ದಾರೆ. ಕಾಲೇಜಿನವರೆಗೆ ರಸ್ತೆ ನಿರ್ಮಿಸುವುದಕ್ಕಾಗಿ ಮನವಿ ಪತ್ರ ಸಲ್ಲಿಸಿದರೂ ಸಮಸ್ಯೆ ಬಗೆಹರಿಯುತ್ತಿಲ್ಲ. ಇವಾಗ ಪ್ರೈವೇಟ್ ಲೇಔಟ್ ನ ಒಳಗಡೆಯಿಂದ ಬರಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರು ಹೇಳುತ್ತಿದ್ದಾರೆ. ಸರಕಾರ ಇತ್ತ ಗಮನ ಹರಿಸದೇ ಇದ್ದರೆ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಹಾಳಾಗುವಲ್ಲಿ ಯಾವುದೇ ಸಂಶಯವಿಲ್ಲ. ಕೋಟ್ಯಂತರ ದುಡ್ಡು ಸುರಿದು ಕಟ್ಟಿದ ಕಾಲೇಜು, ವಸತಿ ನಿಲಯದ ಕಟ್ಟಡ ಸಂಪೂರ್ಣವಾಗಿ ನಾಶವಾಗುತ್ತದೆ. ಹಾಗಾಗಿ ಸರಕಾರ ಆದಷ್ಟು ಬೇಗ ವಸತಿ ನಿಲಯ ಪ್ರಾರಂಭ ಮಾಡಿ ವಿದ್ಯಾರ್ಥಿಗಳ ಉತ್ತಮವಾದ ಶಿಕ್ಷಣಕ್ಕೆ ಅನುವು ಮಾಡಿಕೊಡಬೇಕು.

ವಸತಿ ನಿಲಯದ ಕಟ್ಟಡ ನಿರ್ಮಾಣವಾಗಿ ವರ್ಷಗಳೇ ಕಳೆದರೂ ಉಪಯೋಗಕ್ಕೆ ಬಾರದಾಗಿದೆ. ಹೆಸರಿಗೆ ಮಾತ್ರ ಇದು ವಸತಿಯುಕ್ತ ಕಾಲೇಜು. ಇಲ್ಲಿ ವಸತಿಯ ವ್ಯವಸ್ಥೆ ಇಲ್ಲ. ಜಿಲ್ಲೆಯ ಬೇರೆ ಬೇರೆ ತಾಲ್ಲೂಕಿನಿಂದ ಬರುವ ನಮಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಸಮಯಕ್ಕೆ ಸರಿಯಾಗಿ ಬಸ್ಸಿನ ವ್ಯವಸ್ಥೆಯೂ ಇಲ್ಲ. ಇದರಿಂದಾಗಿ ನಮ್ಮ ಪದವಿ ಶಿಕ್ಷಣವೇ ಹಾಳಾಗುತ್ತಿದೆ. ಹಾಗಾಗಿ ಸರಕಾರ ಆದಷ್ಟು ಬೇಗ ವಸತಿ ನಿಲಯ ಪ್ರಾರಂಭ ಮಾಡಬೇಕು.

**ಬಾಲಾಜಿ, 5ನೇ ಸೆಮಿಸ್ಟರ್ ವಿದ್ಯಾರ್ಥಿ.**ಬೀದರ್ ನಗರದಿಂದ 9–10 ಕಿ. ಮೀ ದೂರವಿರುವ ಈ ಕಾಲೇಜು ಸಂಪೂರ್ಣವಾಗಿ ವಸತಿ ನಿಲಯದ ಮೇಲೆ ಅವಲಂಬಿತವಾಗಿದೆ. ವಸತಿ ನಿಲಯದ ಕಟ್ಟಡವಿದ್ದರೂ ಅದನ್ನು ಪ್ರಾರಂಭ ಮಾಡದ ಕಾರಣ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದು ಪ್ರಾರಂಭ ಮಾಡಬೇಕಾದರೆ ನಮ್ಮ ಕೈಯಲ್ಲಿ ಏನೂ ಇಲ್ಲ. ಎಲ್ಲವೂ ಸರಕಾರದ ಕೈಯಲ್ಲಿದೆ. ಸರಕಾರ ಆದಷ್ಟು ಬೇಗ ವಸತಿ ನಿಲಯ ಪ್ರಾರಂಭ ಮಾಡಿ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಬೇಕು.– **ವೇದಪ್ರಕಾಶ್ ಆರ್ಯ, ಪ್ರಾಂಶುಪಾಲರು.**

## ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿ ಪ್ರಕಟ

ಕೆ.ಓಂಕಾರಮೂರ್ತಿ, ಪ್ರಜಾವಾಣಿ, ಕೋಲಾರಸಿದ್ದು ಆರ್ ಜಿ ಹಳ್ಳಿ, ಪ್ರಜಾವಾಣಿ, ಮಂಡ್ಯ5. ಕೆ. ಎ. ನೆಟ್ಟಕಲಪ್ಪ ಪ್ರಶಸ್ತಿ (ಅತ್ಯುತ್ತಮ ಕ್ರೀಡಾ ವರದಿಗೆ)

ಕಾಯಪಂಡ ಶಶಿ ಸೋಮಯ್ಯ, ಶಕ್ತಿ ಪತ್ರಿಕೆ, ಕೊಡಗುಪುನೀತ್ ಸಿ.ಟಿ., ವಿಜಯವಾಣಿ ಪಿರಿಯಾಪಟ್ಟಣ6. ಖಾದ್ರಿ ಶಾಮಣ್ಣ ಪ್ರಶಸ್ತಿ (ಅತ್ಯುತ್ತಮ ರಾಜಕೀಯ ವಿಮರ್ಶಾತ್ಮಕ ವರದಿ)ಅಪ್ಪಾರಾವ್ ಸೌದಿ, ಕನ್ನಡಪ್ರಭ, ಬೀದರ್.ರಮೇಶ್ ದೊಡ್ಡಪುರ, ಹಿರಿಯ ಪತ್ರಕರ್ತರು7. ಮಂಗಳ ಎಂ. ಸಿ. ವರ್ಗಿಸ್ ಪ್ರಶಸ್ತಿ (ವಾರ ಪತ್ರಿಕೆಯಲ್ಲಿ ಪ್ರಕಟವಾದ ಚಿತ್ರ ಲೇಖನಕ್ಕೆ)ಕೋಡಿಬೆಟ್ಟು ರಾಜಲಕ್ಷ್ಮಿ, ಸುಧಾ, ಮಂಗಳೂರು.ನಾರಾಯಣ ರೈ ಕುಕ್ಕುವಳ್ಳಿ, ಮಧುಪ್ರಪಂಚ, ಧರ್ಮಸ್ಥಳ

8) ತಗಡೂರು ಕಮಲಮ್ಮ ವೀರೇಗೌಡ ಪ್ರಶಸ್ತಿ (ರೈತಾಪಿ ಜನರ ಸಮಸ್ಯೆ ವರದಿಗಾಗಿ)ಪುಟ್ಟರಾಜು, ಸಂಯುಕ್ತ ಕರ್ನಾಟಕ, ದಿಡಗ, ಚನ್ನರಾಯಪಟ್ಟಣ

ಮರಿದೇವರು ಹೂಗಾರ್, ವಿಜಯವಾಣಿ, ಹುಬ್ಬಳ್ಳಿ.9) ಆರ್.ಎಲ್.ವಾಸುದೇವರಾವ್ ಪ್ರಶಸ್ತಿ (ಅರಣ್ಯ ಅತ್ಯುತ್ತಮ ವರದಿ)

ಗುರುಪ್ರಸಾದ್ ತುಂಬಸೋಗೆ, ಪ್ರತಿನಿಧಿ, ಮೈಸೂರುಹರಿಪ್ರಸಾದ್ ನಂದಳಿಕೆ, ಕಾರ್ಕಳ, ಉಡುಪಿ10. ಆರ್.ಎಲ್. ವಾಸುದೇವರಾವ್ ಪ್ರಶಸ್ತಿ (ವನ್ಯ ಪ್ರಾಣಿಗಳ ಅತ್ಯುತ್ತಮ ವರದಿ)ರೇಣುಕೇಶ್, ಎಂ., ಹೊಸದಿಗಂತ, ಚಾಮರಾಜನಗರಶಿವು ಹುಣಸೂರು, ವಿಜಯವಾಣಿ, ಹುಣಸೂರು.

11. ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ (ಆರ್ಥಿಕ ದುರ್ಬಲ ವರ್ಗದವರ ಅತ್ಯುತ್ತಮ ವರದಿಗೆ) ಡಿ.ಎನ್.ತಿಪ್ಪೇಸ್ವಾಮಿ, ವಿಜಯವಾಣಿ, ಗಂಗಾವತಿ

ನಜೀರ್ ಅಹಮದ್, ಆಂದೋಲನ, ಮೈಸೂರು12. ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿ (ಗ್ರಾಮೀಣ ಜನ–ಜೀವನದ ಅತ್ಯುತ್ತಮ ವರದಿಗೆ)ರವಿ ಬಿದನೂರು, ಹೊಸನಗರ, ಶಿವಮೊಗ್ಗಸಿದ್ಧನಗೌಡ ಎಚ್ ಪಾಟೀಲ್, ಸಂಯುಕ್ತ ಕರ್ನಾಟಕ, ಹಟ್ಟಿ, ರಾಯಚೂರು.13. ನಾಡಪ್ರಭು ಕೆಂಪೇಗೌಡ ಸ್ಮಾರಕ ಪ್ರಶಸ್ತಿ (ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ)ಡಿ.ಬಿ.ಬಸವರಾಜು, ಉದಯಕಾಲ., ಶಿವಾನಂದ, ಸೂರ್ಯವಂಶ.

ಮುತ್ತುರಾಜ್, ಪ್ರಜಾ ಟಿವಿ., ಕೆ.ಎಸ್.ನಾಗರಾಜ್, ನಂದೀಶ್ ದುಗಡಿ.,14, ಯಜಮಾನ್ ಟಿ. ನಾರಾಯಣಪ್ಪ ಸ್ಮಾರಕ ಪ್ರಶಸ್ತಿ (ಜಿಲ್ಲಾ ಮಟ್ಟದ ಅತ್ಯುತ್ತಮ ಕೃಷಿ ವರದಿ)ಹುಡೇಂ ಕೃಷ್ಣಮೂರ್ತಿ, ವಿಜಯ ಕರ್ನಾಟಕ, ಕೂಡ್ಲಿಗಿ, ವಿಜಯನಗರ.ವಿಜಯ ಬಾಸ್ಕರರೆಡ್ಡಿ, ಉದಯವಾಣಿ, ಯಾದಗಿರಿ

ಜಯಂತಿ ಯು.ಎಂ., ಜನಮಿತ್ರ, ಕೊಡಗು15. ನಾಡಿಗೇರ ಕೃಷ್ಣರಾಯರ ಪ್ರಶಸ್ತಿ (ಅತ್ಯುತ್ತಮ ವಿಡಂಬನಾತ್ಮಕ ಲೇಖನಕ್ಕೆ)ಸಿದ್ದಯ್ಯ ಹಿರೇಮಠ, ಪ್ರಜಾವಾಣಿ, ದಾವಣಗೆರೆ16. ಅತ್ಯುತ್ತಮ ಪುಟ ವಿನ್ಯಾಸಗಾರರಿಗೆ (ಡೆಸ್ಕ್‌ನಲ್ಲಿ ಕೆಲಸ ಮಾಡುವವರು)ಜನಾರ್ಧನ, ಉದಯವಾಣಿ, ಬೆಂಗಳೂರು

ವಿಜಯಕುಮಾರ್, ವಿಜಯವಾಣಿ, ಬೆಂಗಳೂರು.17. ನ್ಯಾಯಾಲಯದ (ಕೋರ್ಟ್ ಬೀಟ್) ಅತ್ಯುತ್ತಮ ವರದಿಗಾಗಿ.ಷಣ್ಮುಖಪ್ಪ, ಪ್ರಜಾವಾಣಿ, ಬೆಂಗಳೂರು.

18. ಸುಣ್ಣುವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ. (ಅತ್ಯುತ್ತಮ ಸೇನಾ ವರದಿಗೆ)ವಿಶ್ವಕುಮಾರ್, ಇ.ಆರ್., ಚಿತ್ತಾರ, ಕೊಡಗು.

19. ಕೆ.ಎನ್.ಸುಬ್ರಮಣ್ಯ ಪ್ರಶಸ್ತಿ ( ಇಂಗ್ಲೀಷ್ ಪತ್ರಿಕೆ ವರದಿ) ಪಿ.ಶಿಲ್ಪ, ಡೆಕನ್ ಹೆರಾಲ್ಡ್, ಮೈಸೂರುಅಕ್ಷಯ ಪಿ.ವಿ., ಸ್ಟಾರ್ ಆಫ್ ಮೈಸೂರು

20. ಮಲಗೊಂಡ ಪ್ರಶಸ್ತಿ (ಅತ್ಯುತ್ತಮ ತನಿಖಾ ವರದಿ) ಶರಣ ಬಸವ ನೀರ ಮಾನ್ವಿ, ವಿಜಯವಾಣಿ, ಮಾನ್ವಿಪಿ.ರಾಮಸ್ವಾಮಿ ಕಣ್ವ, ಈ ಸಂಜೆ., ಬೆಂಗಳೂರು.

21. ನಟ, ನಿರ್ದೇಶಕ ದ್ವಾರಕೀಶ್ ಸ್ಮಾರಕ ಪ್ರಶಸ್ತಿ (ಚಲನ ಚಿತ್ರ ವಿಭಾಗ)ಕೆ.ಎಸ್.ವಾಸು, ಹಿರಿಯ ಪತ್ರಕರ್ತರು,


22.ಅಭಿಮಾನಿ ಪ್ರಕಾಶನ ಪ್ರಶಸ್ತಿರವಿರಾಜ ಗಲಗಲಿ. ವಿಜಯ ಕರ್ನಾಟಕ, ಬಾಗಲಕೋಟೆ.ಮಾಲತೇಶ ಅರಸು, ಈ ನಗರವಾಣಿ, ಚಿತ್ರದುರ್ಗ.

23.ಸುದ್ದಿಚಿತ್ರ(ಛಾಯಾಚಿತ್ರ ಸಹಿತಿ ವರದಿ)ಡಿ.ಜೆ.ಮಲ್ಲಿಕಾಜುನ, ಪ್ರಜಾವಾಣಿ, ಶಿಡ್ಲಘಟ್ಟನಂದನ್ ಪುಟ್ಟಣ್ಣ, ಕನ್ನಡಪ್ರಭ, ಚನ್ನರಾಯಪಟ್ಟಣ.

24. ಫೋಟೋಗ್ರಫಿಅತೀಖುರ್ ರೆಹಮಾನ್, ಹಾಸನಎಸ್.ಚರಣ್ ಬಿಳಿಗಿರಿ, ಚಾಮರಾಜನಗರವಿದ್ಯುನ್ಮಾನ (ಟಿವಿ)ವಿಭಾಗ:ಅತ್ಯುತ್ತಮ ರಾಜಕೀಯ ವಿಶ್ಲೇಷಣೆ :ಅಜಿತ್ ಹನುಮಕ್ಕನವರ್, ಸುವರ್ಣ ಟಿವಿ.ಸಾಮಾಜಿಕ, ಮಾನವೀಯ ವರದಿ:ಕೆ.ಪಿ.ನಾಗರಾಜ್, ಪಬ್ಲಿಕ್ ಟಿ.ವಿ., ಮೈಸೂರು.

ವಿದ್ಯುನ್ಮಾನ ವಿಭಾಗ:ವಿಜಯ್ ಜೆ.ಆರ್., ಆರ್ ಕನ್ನಡ,ಸತೀಶ್ ಕುಮಾರ್ ಎಂ., ಟಿವಿ 5,ಮಂಜುನಾಥ್ ಕೆ.ಬಿ., ಟಿವಿ 9.ರಶ್ಮಿ ಶ್ರೀನಿವಾಸ ಹಳಕಟ್ಟಿ ರಾಜ್ ನ್ಯೂಸ್‌ಕೆಯುಡಬ್ಲ್ಯೂಜೆ ವಿಶೇಷ ಪ್ರಶಸ್ತಿ:ಮುರುಳೀಧರ್ ಡಿ.ಪಿ.,ಪದ್ಮ ನಾಗರಾಜ್,ಮುಮ್ತಾಜ್ ಅಲೀಂ,ಕೆ.ಆರ್.ರೇಣು– ನವದೆಹಲಿ,ವೇಣುಗೋಪಾಲ್ –ಕಾಸರಗೋಡು,ರೋನ್ಸ್ ಬಂಟ್ವಾಳ–ಮುಂಬಯಿ,ಶರಣಬಸಪ್ಪ ಜಿಡಗ– ಕಲಬುರ್ಗಿ,ಅಲ್ಲಮಪ್ರಭ ಮಲ್ಲಿಕಾರ್ಜುನ– ವಿಜಯಪುರ,ಮೊಹಮದ್ ಯೂನಸ್–ಕೋಲಾರ,ಎಸ್.ಕೆ.ಒಡೆಯರ್ –ದಾವಣಗೆರೆ,ಗುರುರಾಜ ಹೂಗಾರ್– ಹುಬ್ಬಳ್ಳಿ ಆಯ್ಕೆಯಾಗಿದ್ದಾರೆಂದು ತಿಳಿಸಿದ್ದಾರೆ.

## ಶಿವಯೋಗಿ ಸಿದ್ದರಾಮೇಶ್ವರರರು ಪ್ರಮುಖ ವಚನಕಾರರು:ಡಾ. ಅಜಯಸಿಂಗ್



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಜ.14: 12 ನೇ ಶತಮಾನದ ಬಸವಣ್ಣವರ ಕಾಲದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರರವರು ಪ್ರಮುಖವಚನಕಾರರಾಗಿದ್ದರು ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ.ಅಜಯಸಿಂಗ್ ಅವರು ಹೇಳಿದರು.

ಮಂಗಳವಾರದಂದು ಎಸ್.ಎಂ.ಪಂಡಿತರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವರುಗಳು ಸಂಯುಕ್ತಾಶ್ರಯದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು

ಸಿದ್ದರಾಮೇಶ್ವರರರು ಮಹಾರಾಷ್ಟ್ರದ ಸೊನ್ನಲಿಗೆಯಲ್ಲಿ ಜನಿಸಿದರು.ತಂದೆಮುದ್ದುಗೌಡ, ತಾಯಿ ಸುಗ್ಗವ್ವೆ ಮನೆದೈವ –ದೂಳಿಮಾಕಾಳ,ರೇವಣಸಿದ್ದನ ವರದಿಂದ ಹುಟ್ಟಿದ ಎಂದು ಅವರು ಹೇಳಿದರು.

ಸಿದ್ದರಾಮೇಶ್ವರ ಕಾಯಕಯೋಗಿಯಾಗಿದ್ದರು ಅನೇಕ ಕೆರೆ ನಿರ್ಮಾಣ ಮಾಡಿ ಜನರಿಗೆ ನೀರು ನೀಡಿ ಅನೇಕ ಕೆಲಸ ಕಾರ್ಯಗಳನ್ನು ಮಾಡಿದರು ಎಂದು ಹೇಳಿದರು.

ಸಿದ್ದಾರಾಮೇಶ್ವರ ಒಂದೇ ಜಾತಿಗೆ ಸಿಮಿತವಾಗದೆ ಎಲ್ಲರೂ ಮನಸ್ಸುಗಳನ್ನು ಗೆದ್ದುಕೊಂಡಿದ್ದರು ಎಂದರು.

ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮ್ ಪ್ರಭು ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಸೋಲಾಪೂರದಲ್ಲಿನೀರಿನತೊಂದರೆ ಜನರು ಅನುಭವಿಸುತ್ತಿದ್ದನ್ನು ಕಂಡು ನೀರಿನ ಕೆರೆ ಕಟ್ಟೆಗಳನ್ನು ನಿರ್ಮಿಸಿ ಜನರಿಗೆ ಅನುಕೂಲ ಮಾಡಿಕೊಟ್ಟರು ಎಂದರು

ಗ್ರಾಮೀಣ ಶಾಸಕರಾದ ಬಸವರಾಜ ಮತ್ತಿಮೂಡು,ಎಂ.ಎಲ್.ಸಿ ಸುನೀಲ ವಲ್ಯಾಪೂರೆ, ಜಿಲ್ಲಾ ಭೋವಿ ವಡ್ಡರ ಸಮಾಜ ಜಿಲ್ಲಾಧ್ಯಕ್ಷ ಗುಂಡಪ್ಪ ಸಾಳಂಕೆ ಮಾತನಾಡಿದರು.

ಚಿಣಮಗೇರ ಮಹಾಂತೇಶ್ವರ ಮಠ ಶ್ರೀ ಸ.ಬ್ರ.ವೀರಮಹಾಂತ ಶಿವಾಚಾರ್ಯರರು ದಿವ್ಯಸಾನಿಧ್ಯ ವಹಿಸಿ ಮಾತನಾಡಿ, ಭೋವಿ ಸಮಾಜದ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡಿದರೆ ಮಾತ್ರ ಸಮಾಜ ಸುಧಾರಣೆಯಾಗಲು ಸಾಧ್ಯ ಎಂದರು.

ಕಮಲಾಪೂರದ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕರು ಡಾ.ಗಿರೀಶ ಯಡ್ರಾಮಿ ವಿಶೇಷ ಉಪನ್ಯಾಸ ನೀಡಿದರು

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕ್ರೈಂ ಬ್ರಾಂಚಿನ ಡಿಸಿಪಿ ಪ್ರವಿಣ್ ನಾಯಕ್ , ಜಿಲ್ಲಾಪಂಚಾಯತ್ ಪಿ.ಡಿ. ಜಗದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರು, ಸೇರಿದಂತೆ ಅಧಿಕಾರಿಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.

ಮುಂಬರುವ ಆರ್ಥಿಕ ಸಾಲಿನ ಆಯವ್ಯದಲ್ಲಿ ಅವಶ್ಯಕವಾದ

## ವಿಷಯಗಳ ಬಗ್ಗೆ ಆಯೋಗದ ಅಧ್ಯಕ್ಷರೊಂದಿಗೆ ಮುಖಂಡರು ಚರ್ಚೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜನವರಿ14–ಮುಂಬರುವ ಆರ್ಥಿಕಸಾಲಿನಆಯವ್ಯಯದಲ್ಲಿ ಅವಶ್ಯಕವಾದ, ಬೌದ್ಧ ಜ್ಞಾನ ಮಂದಿರ, ಹಳೆಯ ಸ್ಮಾರಕಗಳ ರಕ್ಷಣೆ, ಚರ್ಚಗಳ ದುರಸ್ಥಿಕರಣ ಕ್ರಿಶ್ಚನರ್ ಪ್ರವರ್ಗ–1 ರ ಪತ್ರ ನೀಡುವ ಕುರಿತು ಅನೇಕ ವಿಷಯಗಳ ಬಗ್ಗೆ ಆಯಾ ಸಮುದಾಯದಮುಖಂಡರಿಂದ ಅವಹಾಲು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷಯು. ನಿಸಾರ್ ಅಹಮದ್ ಸ್ವೀಕರಿಸಿದರು.

ಸೋಮವಾರದಂದುಹಳೆಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಸಿಗೆ ನೀರೆರೆಯುವ ಮೂಲಕ ಸಮುದಾಯದ ಮುಖಂಡರು ಹಾಗೂ ಧರ್ಮಗುರುಗಳ ಜೊತೆಯಲ್ಲಿ ಉದ್ಘಾಟಿಸಿದರು.

ಬೀದರ್,ಯಾದಗಿರಿ,ಕೊಪ್ಪಳ ',ರಾಯಚೂರು,ಬಳ್ಳಾರಿ,ವಿಜಂ ಯನಗರ ಹಾಗೂ ಕಲಬುರಗಿ ಜಿಲ್ಲೆಗಳಿಂದಎಲ್ಲಾಅಲ್ಪಸಂಖ್ಯಾತರ ಸಮುದಾಯಗಳ ಮುಸ್ಲಿಂ, ಕ್ರಿಶ್ಚಿಯನ್, ಸಿಖ್,ಬೌದ್,ಜೈನ್ ಹಾಗೂ ಪಾರ್ಸಿ ಸಮುದಾಯದ ಮುಖಂಡರುಸಭೆಯಲ್ಲಿಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ಅಧ್ಯಕ್ಷರ ಮುಂದೆ ತಿಳಿಸಿದರು.

ಆರ್ಥಿಕ ಸಾಲಿನ ಆಯವ್ಯಯದಲ್ಲಿ ಅವಶ್ಯಕವಾದ ಸುಸರ್ಜಿತ ಆಸ್ಪತ್ರೆ, ಒಂದನೆ ತರಗತಿಯಿಂದಆಂಗ್ಲಮಾಧ್ಯಮದಲ್ಲಿ ಮೌಲಾನಾ ಆಜಾದ ಮಾದರಿ ಶಾಲೆಗಳಲ್ಲಿತರಗತಿ ಪ್ರಾರಂಭಿಸುವ ಈ ಭಾಗದ ಕುರಿತು ಹಲವು ವಿಷಯಗಳ ಬಗ್ಗೆ ಆಯಾ ಸಮುದಾಯದ ಮುಖಂಡರಿಂದ ಐ.ಎ.ಎಸ್. ಕೋಚಿಂಗ್ ಸೆಂಟರ್ ಬಗ್ಗೆಹಲವಾರು ಸ್ಕೀಮ್‌ಗಳ ಬಗ್ಗೆ ತರಬೇತಿಗಳ ಬಗ್ಗೆ ಚರ್ಚಿಸಿದರು.

ವೇದಿಕೆ ಮೇಲೆ ಅಲ್ಪಸಂಖ್ಯಾತರ ಬೆಂಗಳೂರಿನ ಆಯೋಗದ ವಿಶೇಷಾಧಿಕಾರಿ ಮುಜಿಬುಲ್ಲಾ ಜಫಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಶ್ರೀ.ಜಾವಿದ್ ಕೆ ಕರಂಗಿ ವಕ್ಫ್ ಅಧಿಕಾರಿ ಹಜರತ್ ಅಲಿ, ಕೆಎಮ್‌ಡಿಸಿ ಅಧಿಕಾರಿ ರವಿ ಬೆಹರೆ ಸೇರಿದಂತೆ ಕಲಬುರಗಿ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಜಿಲ್ಲಾ ವಕ್ಫ್ ಅಧಿಕಾರಿಗಳು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಎಲ್ಲಾ ಜಿಲ್ಲಾ ವ್ಯವಸ್ಥಾಪಕರು ಹಾಗೂ ಧರ್ಮಗುರುಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.

ಎಚ್‌ಡಿ ಕುಮಾರಸ್ವಾಮಿ ಮಟ್ಟ ಹಾಕುವುದು ಅಸಾಧ್ಯ:

## ಜೆಡಿಎಸ್ ವರಿಷ್ಠ ಎಚ್‌ಡಿ ದೇವೇಗೌಡ



ಮಲ್ಲಮ್ಮ ನುಡಿ ವಾರ್ತೆ


ಬೆಂಗಳೂರು: ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷವನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಯತ್ನಿಸುತ್ತಿದೆ. ಆದರೆ, ಅವರ ಕನಸು ಎಂದಿಗೂ ನನಸಾಗುವುದಿಲ್ಲ ಎಂದು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ ಭಾನುವಾರ ಹೇಳಿದರು.

ನಗರದಲ್ಲಿ ನಡೆದ ಜೆಡಿಎಸ್ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, 'ನಮ್ಮದು ಸಮರ್ಥ ನಾಯಕರು ಮತ್ತು ನಿಷ್ಠಾವಂತ ಕಾರ್ಯಕರ್ತರ ಪಕ್ಷವಾಗಿದ್ದು, ನಮ್ಮ ಪಕ್ಷವನ್ನು ಬೇರೆಯವರಿಂದ ನಾಶಮಾಡುವುದು ಅಸಾಧ್ಯ. ಮಾರ್ಚ್‌ನಿಂದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಪಕ್ಷದ ಕಾರ್ಯಕರ್ತರ ಮನೆಗಳಲ್ಲಿದ್ದು, ಪಕ್ಷವನ್ನು ಬಲಪಡಿಸುವತ್ತ ಗಮನ ಹರಿಸುತ್ತೇನೆ. ಸದಸ್ಯತ್ವ ಅಭಿಯಾನವನ್ನು ಮತ್ತಷ್ಟು ಹುರುಪಿನೊಂದಿಗೆ ಮುಂದುವರಿಸಲಾಗುತ್ತದೆ ಎಂದು ಹೇಳಿದರು.

ಕುಮಾರಸ್ವಾಮಿ ಅವರಿಗೆ ಪಕ್ಷದ ಬೆಂಬಲವನ್ನು ಪುನರುಚ್ಚರಿಸಿದ ಅವರು, ಕುಮಾರಸ್ವಾಮಿ ಅವರನ್ನು ಮಟ್ಟ ಹಾಕುವುದು ಅಸಾಧ್ಯವಾದ ಕೆಲಸ. ಈ ನಿಟ್ಟಿನಲ್ಲಿ ಕಾಂಗ್ರೆಸ್‌ನ ಯೋಜನೆಗಳು ಎಂದಿಗೂ ಯಶಸ್ವಿಯಾಗುವುದಿಲ್ಲ ಎಂದರು.

ಕುಮಾರಸ್ವಾಮಿ ಅವರನ್ನು ಮಟ್ಟ ಹಾಕಲು ಸಾಧ್ಯವಾದರೆ ಜೆಡಿಎಸ್ ನೆಲಕಚ್ಚುತ್ತದೆ ಎಂದು ಕಾಂಗ್ರೆಸ್ ನಂಬಿದೆ. ಆದರೆ, ಅವರು ಇದರಲ್ಲಿ ಯಶಸ್ವಿಯಾಗುವುದಿಲ್ಲ. ಏಕೆ–ಂದರೆ, ಕುಮಾರಸ್ವಾಮಿ ಅವರ ಬೆನ್ನಿಗೆ ಪಕ್ಷದ ಲಕ್ಷಾಂತರ ಕಾರ್ಯಕರ್ತರು ದೃಢವಾಗಿ ನಿಂತಿದ್ದಾರೆ. ಹೀಗಾಗಿ, ಅವರು ಪ್ರಬಲರಾಗಿದ್ದಾರೆ ಮತ್ತು ಅವರನ್ನು ಮಟ್ಟ ಹಾಕುವುದು ಸುಲಭವಲ್ಲ ಎಂದು ತಿಳಿಸಿದರು.

## ರಾಜಸ್ತಾನದಲ್ಲೂ ಎಚ್‌ಎಂಪಿ ವೈರಸ್



ಮಲ್ಲಮ್ಮ ನುಡಿ ವಾರ್ತೆ

ಹೊಸದಿಲ್ಲಿ,ಜ.11–ಚೀನಾದಲ್ಲಿ ಹರಡಿರುವ ಕರೋನಾ ರೀತಿಯ ಎಚ್‌ಎಂಪಿ ವೈರಸ್ ರಾಜಸ್ಥಾನದಲ್ಲಿ ಕಂಡುಬಂದಿದೆ. ಇದರೊಂದಿಗೆ ರಾಜಸ್ಥಾನದಲ್ಲಿ ಮೊದಲ ಎಚ್‌ಎಂಪಿವಿ ಸೋಂಕು ದೃಢಪಟ್ಟಿದೆ.6 ತಿಂಗಳ ಮಗುವಿಗೆ ಎಚ್‌ಎಂಪಿವಿ ಸೋಂಕು ತಗುಲಿರುವುದು ಪತ್ತೆಯಾಗಿದೆ. ಇದರೊಂದಿಗೆ ದೇಶದಲ್ಲಿ ಸೋಂಕಿತರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ.

ಗುಜರಾತ್‌ನಲ್ಲಿ ಅತಿ ಹೆಚ್ಚು ಸಕ್ರಿಯಪ್ರಕರಣಗಳಿವೆ (4 ಪ್ರಕರಣಗಳು). ರಾಜಸ್ಥಾನದಲ್ಲಿ 6 ತಿಂಗಳ ಹೆಣ್ಣು ಮಗುವಿಗೆ ಸೋಂಕು ತಗುಲಿರುವುದು ವರದಿಯಾಗಿದೆ.

ಹ್ಯೂಮನ್ ಮೆಟಾಪ್ನ್ಯೂಮೋವೈರಸ್ ಎಚ್‌ಎಂಪಿ ವೈರಸ್ ಆಗಿದೆ, ಇದು ಮುಖ್ಯವಾಗಿ ಚಳಿಗಾಲದಲ್ಲಿ ಹರಡುತ್ತದೆ. ವೈರಸ್ ತುಂಬಾ ಆಕ್ರಮಣಕಾರಿಯಾದರೆ, ಅದು ಶ್ವಾಸಕೋಶವನ್ನು ಪ್ರವೇಶಿಸಬಹುದು ಮತ್ತು ನ್ಯುಮೋನಿಯಾವನ್ನು ಉಂಟುಮಾಡಬಹುದು. ಇದರಿಂದ ಉಸಿರಾಟದ ತೊಂದರೆ ಉಂಟಾಗುತ್ತದೆ. ಚಿಕ್ಕ ಮಕ್ಕಳು ಮತ್ತು ವೃದ್ಧರು ಈ ವೈರಸ್‌ನಿಂದ ಹೆಚ್ಚು ಪರಿಣಾಮ ಬೀರುತ್ತಾರೆ. ಈ ವೈರಸ್ ಮೊದಲು ಬಾರಿಗೆ 2001 ರಲ್ಲಿ ಗುರುತಿಸಲಾಗಿದೆ.

## ಯಲ್ಲಾಲಿಂಗೇಶ್ವರ ಜಾತ್ರಾ ವಾಲ್ ಪೋಸ್ಟರ್, ಕರಪತ್ರ ಬಿಡುಗಡೆ.




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: – ತಾಲೂಕಿನ ಸಸ್ತಾಪೂರದ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರಆನಂದಾಶ್ರಮದಲ್ಲಿ ಬರುವ ಜನೇವರಿ 26 ಮತ್ತು 27 ರಂದು ನಡೆಯುವ 39 ನೇ ಪುಣ್ಯ ಸ್ಮರಣೆ,ಪೂಜ್ಯ ಮಹಾದೇವಿತಾಯಿಯವರ 60 ನೇ ಹುಟ್ಟು ಹಬ್ಬ ಪ್ರಯುಕ್ತ 69 ಅವ್ವನವರಿಗೆ ತುಲಾಭಾರ ಮತ್ತು ಪ್ರಥಮ ಮಹಿಳಾ ಸಮಾವೇಶದ ಕರ ಪತ್ರ ಮತ್ತು ವಾಲ್ಪೋಸ್ಟರ್ ಯುವ ಮುಖಂಡರಾದ ಸುರೇಶ್ ಕಾನೇಕರ್ ಬಿಡುಗಡೆಗೊಳಿಸಿದರು. ಡಾ. ರಾಜಕುಮಾರ ಮಾಳಗೆ,ಡಾ. ಗವಿಸಿದ್ಧಪ್ಪ ಪಾಟೀಲ.ಸಂಗಮೇಶ ಜವಾದಿ,ಪತ್ರಕರ್ತ ನಾಗಪ್ಪ ನಿಣ್ಣೆ, ಶಿಕ್ಷಕರಾದ ಸಂಜಿವಕುಮಾರ ನಡುಕರ,ಸಾಗರ ತುತಾರೆ,ಶ್ರೀಪತಿ ಸಖರಾಮ,ಹಾಗೂನಾಗಶೆಟ್ಟಿ(ಗೌಡಪ್ಪ) ಪಾಟೀಲ ಮತ್ತಿತರರು ಭಕ್ತರು ಹಾಗೂ ಪೂಜ್ಯ ಮಹಾದೇವಿ ತಾಯಿ ನೇತೃತ್ವ ವಹಿಸಿದ್ದರು.



ಚಿಟಗುಪ್ಪ:– ಸಂಕ್ರಾಂತಿ ಹಬ್ಬದ ನಿಮಿತ್ಯ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಆರ್ಯ ವೈಶ್ಯ ಮಹಿಳಾ ಸಂಘದ ವತಿಯಿಂದ ಪಟ್ಟಣದ ನಾಗರೇಶ್ವರ ದೇವಸ್ಥಾನದಲ್ಲಿ ಬಾಗಿನ ಕಾರ್ಯಕ್ರಮದ ಅಂಗವಾಗಿ ಮಾವಿನ ಎಲೆಗಳಿಂದ ಹಂದುರ ಮಾಡಿಕೊಂಡು ಗೌರಮ್ಮಾ ಬಾಗಿನ, ಮುತ್ತು ಹವಳ ಬಾಗಿನ ಏರ್ಪಡಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆರ್ಯ ವೈಶ್ಯ ಮಹಿಳಾ ಸಂಘದ ಅಧ್ಯಕ್ಷೆ ಪದ್ಮಾಜಾ ಮಂಕಾಲ, ಉಪಾಧ್ಯಕ್ಷೆ ಸುಧಾ ರಘೋಜಿ, ಕಾಮಾಕ್ಷಿ ರಟಕಲ್, ಪದ್ಮಾ ರಟಕಲ್, ಉಮಾ ಅತನೂರ್, ಪಲ್ಲವಿ ರಾಸುರ್, ಸರಿತಾ ಐನಾಪುರ್, ವೈನಿತಾ ರಾಸುರ್ ಸೇರಿದಂತೆ ಅನೇಕ ಮಹಿಳೆಯರು, ಹೆಣ್ಣು ಮಕ್ಕಳು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

ಶಿವಯೋಗಿ ಸಿದ್ದರಾಮೇಶ್ವರರವರು ಪ್ರಮುಖ ವಚನಕಾರರಾಗಿದ್ದರು

## ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ. ಅಜಯಸಿಂಗ್




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜ. 14– 12 ನೇ ಶತಮಾನದ ಬಸವಣ್ಣವರ ಕಾಲದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರರವರು ಪ್ರಮುಖ ವಚನಕಾರರಾಗಿದ್ದರು ಎಂದು ಕಲ್ಯಾಣಕರ್ನಾಟಕಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ. ಅಜಯಸಿಂಗ್ ಅವರು ಹೇಳಿದರು.

ಮಂಗಳವಾರದಂದು ಎಸ್. ಎಂ.ಪಂಡಿತ ರಂಗಮಂದಿರದಲ್ಲಿ ಜಿಲ್ಲಾಡಳಿತ,ಕನ್ನಡಮತ್ತುಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವರುಗಳು ಸಂಯುಕ್ತಾಶ್ರಯದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು

ಬಸವಣ್ಣನವರು ಮಹಾರಾಷ್ಟ್ರದ ಸೊನ್ನಲಿಗೆಯಲ್ಲಿ ಜನಸಿದರು.ತಂದೆ ಮುದ್ದುಗೌಡ, ತಾಯಿ ಸುಗ್ಗವ್ವೆ ಮನೆದೈವ –ದೂಳಿಮಾಕಾಳ, ರೇವಣಸಿದ್ದನವರದಿಂದ ಹುಟ್ಟಿದ ಎಂದು ಅವರು ಹೇಳಿದರು.

ನಮ್ಮ ಸರ್ಕಾರದ ಸಿದ್ದಾರಾಮೇಶ್ವರರು 2013–2018 ರಲ್ಲಿ ನಾವು ಎಸ್‌ಸಿಪಿ/ ಟಿಎಸ್‌ಪಿ ಯೋಜನೆಯಡಿಯಲ್ಲಿ 24.1 ಪ್ರತಿಶತ ಇಡಿ ರಾಜ್ಯಮಟ್ಟದಲ್ಲಿ ಆಯೋಜನೆ ಮಾಡಿದ್ದೇವೆ. ಈಗಾಗಲೇ ನಮ್ಮ ಸರ್ಕಾರದ 39 ಸಾವಿರಕ್ಕೆ ಹೆಚ್ಚಿನ ಅನುದಾನ ಅನುಷ್ಠಾನಗೊಳಿಸಿದ್ದಾರೆ ಇದರ ಉಪಯೋಗವನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು ಎಂದರು.

ನಮ್ಮ ಸರ್ಕಾರದಿಂದ ಸಿಗುವಂತೆ ಸೌಲಭ್ಯಗಳನ್ನು ಸಮಾಜಮುಖಂಡರು ಪಡೆದುಕೊಳ್ಳಬೇಕೆಂದರು ಅವರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯರಾದ ಸುನೀಲ್ ವಲ್ಲಾಪುರೆ ಮಾತನಾಡಿ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಜಯಂತಿ ಆಚರಣೆ ಮಾಡಲು ಅನುಕೂಲ ಮಾಡಿಕೊಟ್ಟರು ಎಂದರು.

ಸಿದ್ದಾರಾಮೇಶ್ವರ ಕಾಯಕಯೋಗಿಯಾಗಿದ್ದರು ಅನೇಕ ಕೆರೆ ನಿರ್ಮಾಣ ಮಾಡಿ ಜನರಿಗೆ ನೀರು ನೀಡಿ ಅನೇಕ ಕೆಲಸಕಾರ್ಯಗಳನ್ನು ಮಾಡಿದರು ಎಂದು ಹೇಳಿದರು.

ಸಿದ್ದಾರಾಮೇಶ್ವರ ಒಂದೇ ಜಾತಿ ಸಿಮಿತವಾಗದೆ ಎಲ್ಲರೂ ಮನಸ್ಸುಗಳನ್ನು ಗೆದ್ದುಕೊಂಡಿ–ದ್ದರು ಎಂದರು.

ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮ್ ಪ್ರಭು ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಸೋಲಾಪೂರದಲ್ಲಿ ನೀರಿನ ತೆ–ಊಂದರೆ ಜನರು ಅನುಭವಿಸುತ್ತಿದ್ದರು ನೀರಿನ ಕರೆ ಕಟ್ಟೆಗಳನ್ನು ನಿರ್ಮಿಸಿ ಜನರಿಗೆ ಒಳ್ಳೆಯ ಅನುಕೂಲ ಮಾಡಿಕೊಟ್ಟರು ಎಂದರು

12 ನೇ ಶತಮಾನತದಲ್ಲಿ ಬಸವಣ್ಣನವರು ಕಾಯಕ ಯೋಗಿಯಾಗಿದ್ದರು. ಇವರು ಅನೇಕ ವಚನಗಳನ್ನು ರಚಿಸಿ ಕೀರ್ತಿ ಪಾತ್ರರಾಗಿದ್ದರು. ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದರು.

ಜೇವರ್ಗಿ ಕಾಲೋನಿಯಲ್ಲಿ ಸಮುದಾಯ ಭವನ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದರು. ಅವರ ಆದರ್ಶ ತತ್ವಗಳನ್ನು ನಾವು ನಿಜಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಜೀವನ ಸ್ವಾರ್ಥವಾಗುತ್ತದೆ ಎಂದರು.

ಗ್ರಾಮೀಣ ಶಾಸಕರಾದ ಬಸವರಾಜ ಮತ್ತಿಮೂಡು, ಜಿಲ್ಲಾ ಭೋವಿ ವಡ್ಡರ ಸಮಾಜ ಜಿಲ್ಲಾಧ್ಯಕ್ಷ ಗುಂಡಪ್ಪ ಸಾಳಂಕೆ ಮಾತನಾಡಿದರು.

ಚಿಣಮಗೇರ ಮಹಾಂತೇಶ್ವರ ಮಠ ಶ್ರೀ ಸ.ಬ್ರ. ವೀರಮಹಾಂತ ಶಿವಾಚಾರ್ಯರರು ದಿವ್ಯಸಾನ್ನಧ್ಯ ವಹಿಸಿ ಮಾತನಾಡಿ, ಭೋವಿ ಸಮಾಜದಲ್ಲಿ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡಿದರೆ ಮಾತ್ರ ಸಮಾಜ ಸುಧಾರಣೆಯಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಮಲಾಪೂರದ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕರಾದ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಸೋನ್ನಲಿಗೆಯ ಶಿವಯೋಗಿ ಸಿದ್ದರಾಮೇಶ್ವರರು ಕರ್ಮಯೋಗಿಗಳು ಇವರು ಸುಮಾರು 6800 ವಚನ್ನಗಳನ್ನು ಬರೆದಿದ್ದಾರೆ ತಂದೆ ಮುದ್ದುಗೌಡ ತಾಯಿ ಸುಗ್ಗವ್ವೆ ಈ ಸಮುದಾಯದ ಇತಿಹಾಸ ಸಿಂಧೂ ಬಯಲ್ಲಿನ ನಾಗರಿಕಡೆಯಿಂದ ಪ್ರಾರಂಭವಾಗುತ್ತದೆ. ಎಂದರು.

ಓಡಿಸ್ಸಾ ಸಮುದಾಯದ ಮೂಲ ಶ್ರಮಜೀವಿಗಳಾದ ಭೋವಿ ಸಮುದಾಯವರು ಮಕ್ಕಳಿಗೆ ತಪ್ಪದೇ ಶಿಕ್ಷಣ ಕೊಡಿಸಬೇಕು ಶಿಕ್ಷಣ ಸರ್ವ ಸಮಸ್ಯೆಗಳಿಗೂ ರಾಮಬಾಣ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕ್ರೈಂ ಬ್ರಾಂಚಿನ ಡಿಸಿಪಿ ಪ್ರವಿಣ್ ನಾಯಕ್, ಜಿಲ್ಲಾಪಂಚಾಯತ್ ಪಿ.ಡಿ. ಜಗದೇವಪ್ಪ, ಕನ್ನಡ ಮತ್ತು ಸಾಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರು, ಸೇರಿದಂತೆ ವಿವಿಧ ನಗರದ ಸಮಾಜದ ಮುಖಂಡರು ಭಾಗವಹಿಸಿದ್ದರು.

## ಬಾವಗಿಯಲ್ಲಿ ಸಂಕ್ರಾಂತಿ ಹಬ್ಬ ಆಚರಣೆ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ಬೀದರ ತಾಲ್ಲೂಕಿನ ಬಾವಗಿ ಗ್ರಾಮದ ಶ್ರೀ ಹನುಮಾನ್ ದೇವಸ್ಥಾನದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಹನುಮಾನ್ ಮೂರ್ತಿಗೆ ಮಾಹರುದ್ರ ಅಭಿಷೇಕ ಸಲ್ಲಿಸಿ ಹೂವಿನಿಂದ ಅಲಂಕರಿಸಿ ಯುವಕರು ಹಿರಿಯರು ಸೇರಿ ಭಜನೆ ಹಾಡುಗಳು ಹಾಡಿ ನೈವಿದ್ಯ ಸಮರ್ಪಿಸಲಾಯಿತು. ಸ್ನೇಹಿತರು ಸೇರಿ ಪರಸ್ಪರ ಎಳ್ಳು ಬೆಲ್ಲ ಹಂಚಿ ಸಂಭ್ರಮದ ಸಂಕ್ರಾಂತಿ ಆಚರಿಸಿದರು. ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ ಎಲ್ಲರಿಗೂ ಹೊಸ ಉತ್ಸಾಹ,ನವಚೈತನ್ಯ,ನೆಮ್ಮದಿಯ ಬಾಳನ್ನು ಕರುಣಿಸಲಿ ಎಂದು ಗುಂಡಯ್ಯಾ ಸ್ವಾಮಿ ನುಡಿದರು.

ಯುವ ಮುಖಂಡ ಲೋಕೇಶ ಕನಶಟ್ಟಿ ಮಾತನಾಡಿ, ಸೂರ್ಯ ಪಥ ಬದಲಿಸುವ ಈ ಶುಭ ದಿನದಂದು ಕಬ್ಬಿನ ಸಿಹಿ, ಎಳ್ಳು ಬೆಲ್ಲದ ರುಚಿ, ಸಿಹಿ ಗೆಣಸು ಕಡಲೆಯ ಸಾರದಂಥ ಜೀವನ ನಿಮ್ಮದಾಗಲಿ, ಸಂಕ್ರಾಂತಿಯ ಸಮೃದ್ಧ ಬೆಳೆಯಂತೆ ಎಲ್ಲರ ಬಾಳು ಸಮೃದ್ಧವಾಗಲಿ ಎಂದೂ ಹೇಳಿದರು. ಈ ಸಂದರ್ಭದಲ್ಲಿ ಮುಖಂಡರಾದ ಚನ್ನಮಲ್ಲಪ್ಪಾ ಹಜ್ಜರಗಿ, ಮಾರುತಿ ಹುಗಾರ, ಬಸವರಾಜ ಖೌದಿ, ಪ್ರಭುರಾವ ಕಾರಕನಳ್ಳಿ,ಶಿವಶರಣಪ್ಪ ಪಾಟೀಲ್, ಭೀಮಣ್ಣ ಪೊಶಟ್ಟಿ,ಸೂರ್ಯಕಾಂತ ಪಕ್ಕಾ, ಚಂದ್ರಶೇಖರ ನಿಟ್ಟೂ–ರೆ, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಆರೋಪ, ಜೇವರ್ಗಿ ಬೆಂಗಳೂರು ಘಟನೆಗೆ ಕಿಡಿ

## ಮತಾಂಧರಿಗೆ ಮಟ್ಟ ಹಾಕಲು ಸರ್ಕಾರ ವಿಫಲ

ಮಲ್ಲಮ್ಮ ನುಡಿ ವಾರ್ತೆ

ಬೀದರ್:ಮತಾಂಧರ ಅಟ್ಟಹಾಸಕ್ಕೆ ಬೆಂಗಳೂರಿನಲ್ಲಿ ಗೋವುಗಳ ಕೆಚ್ಚಲು ಕೊಯ್ದು ವಿಕೃತಿ ಮೆರೆದ ಹಾಗೂ ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ 13 ವರ್ಷದ ಬಾಲಕಿ ಬಲಿಯಾದ ಅಮಾನವೀಯ ಘಟನೆ ನಡೆದಿರುವುದು ಖಂಡನೀಯ. ಈ ಪ್ರಕರಣಗಳು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮತಾಂಧ, ಸಮಾಜಘಾತುಕ ಶಕ್ತಿಗಳ ಬಗ್ಗೆ ಮೃದು ಧೋರಣೆ ತಾಳಿರುವುದೇ ಇಂತಹ ಘಟನೆಗಳಿಗೆ ಕಾರಣ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ, ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ದೂರಿದ್ದಾರೆ. ಸರ್ಕಾರದಲ್ಲಿ ಅಕ್ರಮ, ಅವ್ಯವಹಾರ, ಭ್ರಷ್ಟಾಚಾರ ಮಿತಿಮೀರಿವೆ. ಅಧಿಕಾರ ಹಂಚಿಕೆ, ಕುರ್ಚಿ ಕಿತ್ತಾಟ ಸಾಮಾನ್ಯವಾಗಿದೆ. ಇದರೊಟ್ಟಿಗೆ ಒಂದು ಸಮುದಾಯದ ಕಣ್ಣಿಗೆ ಸುಣ್ಣ, ಮತ್ತೊಂದು ಸಮುದಾಯದ ಕಣ್ಣಿಗೆ ಬೆಣ್ಣೆ ಹಚ್ಚುವ ತುಷ್ಟೀಕರಣ ರಾಜ–ಕಾರಣ ಅತಿಯಾಗಿದೆ. ಗ್ಯಾರಂಟಿ ಯೋಜನೆಯಿಂದಾಗಿ ಆರ್ಥಿಕ ದಿವಾಳಿ ಎದ್ದಿದೆ. ಎಲ್ಲಕ್ಕೂ ಮಿಗಿಲಾಗಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದರಿಂದ ಮತಾಂಧ ಶಕ್ತಿಗಳಿಗೆ ಯಾರದೇ ಭಯ ಇಲ್ಲದಂತಾಗಿ ಎಲ್ಲೆಡೆ ತನ್ನ ಅಟ್ಟಹಾಸ ಮೆರೆಯುತ್ತಿವೆ. ಕೂಡಲೇ ಇದಕ್ಕೆಲ್ಲ ಕಡಿವಾಣ ಹಾಕಲು ಸರ್ಕಾರ ದಿಟ್ಟ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸಾರ್ವಜನಿಕರು ಸರ್ಕಾರದ ವಿರುದ್ಧ ದಂಗೆ ಎದ್ದರೆ ಪರಿಣಾಮ ಗಂಭೀರವಾಗಲಿದೆ ಎಂದು ಮಂಗಳವಾರ ಇಲ್ಲಿ ಹೊರಡಿಸಿರುವ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ. ಜೇವರ್ಗಿಯಲ್ಲಿ ಮುಸ್ಲಿಂ ಮತಾಂಧ, ಕಾಮುಕ ಡ್ರೈವರ್ ಶಾಲಾ ಬಾಲಕಿಗೆ ಪೀಡಿಸಿದ್ದಾನೆ. ಈ ದರುಳನ ಯಾತನೆ ಹಾಗೂ ಜೀವ ಬೆದರಿಕೆಯಿಂದ ಭಯಗೊಂಡು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

### ಎನ್ ಎಐ ತನಿಖೆಗೆ ಕೇಂದ್ರಕ್ಕೆ ಪತ್ರ

ಜೇವರ್ಗಿ ಬಾಲೆ ಬಲಿ ಹಾಗೂ ಬೆಂಗಳೂರು ಗೋವುಗಳ ಕೆಚ್ಚಲು ಕೊಯ್ದು ವಿಕೃತಿ ಮೆರೆದ ಘಟನೆ ಹಿಂದಿನ ಜಾಡು ಪತ್ತೆ ಮಾಡಲು ರಾಷ್ಟ್ರೀಯ ತನಿಖಾ ದಳದಿಂದ (ಎನ್‌ಎಐ) ವಿಚಾರಣೆ ನಡೆಸುವ ಅಗತ್ಯವಿದೆ. ಈ ಕುರಿತು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದು ಮನವಿ ಮಾಡುವುದಾಗಿ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ತಿಳಿಸಿದ್ದಾರೆ. ಮತಾಂಧ ಶಕ್ತಿಗಳು ದುಷ್ಕೃತ್ಯ ಎಸಗಿದ ಬಳಿಕ ಒಬ್ಬರನ್ನೇ ಮುಂದೆ ಮಾಡಿ ಹಿಂದಿದ್ದವರನ್ನು ಸೇಫ್ ಇಡುತ್ತಾರೆ. ಹಿಂದಿನ ಜಾಡು ಎಲ್ಲಿದೆ ಎಂಬುದು ಗೊತ್ತಾಗಲು ಬಿಡಲ್ಲ. ಹೀಗಾಗಿ ಸಂಚು ರೂಪಿಸುವ ತಂಡ ಮತ್ತೆ ಮತ್ತೆ ಇಂಥ ಕುಕೃತ್ಯ ನಡೆಸುತ್ತವೆ. ಲವ್ ಜಿಹಾದ್ ನಲ್ಲಿ ತೊಡುಗವ ಯುವಕರಿಗೆ ಫಂಡಿಂಗ್ ಬರುತ್ತಿದೆ ಎಂಬ ಆರೋಪ ಕೇಳಿಬರುತ್ತಿವೆ. ಒಬ್ಬನಿಗೆ ಬಂಧಿಸಿದರೆ ಕೇಸ್ ಮುಗಿಯಿತು ಎಂಬ ಧೋರಣೆ ರಾಜ್ಯ ಸರ್ಕಾರದ್ದಾಗಿದೆ. ಹೀಗಾಗಿ ದೇಶ, ಸಮಾಜದ ಹಿತದಿಂದ ಕೇಂದ್ರ ಮಧ್ಯೆ ಪ್ರವೇಶ ಮಾಡಿ ರಾಜ್ಯದಲ್ಲಿನ ವಿವಿಧ ಅಮಾನವೀಯ ಪ್ರಕರಣಗಳ ಹಿಂದಿರುವ ಸಂಚು ಬಯಲಿಗೆ ತಂದು ಎಲ್ಲರಿಗೂ ಕಠಿಣ ಶಿಕ್ಷೆಗೆ ಗುರಿಪಡಿಸುವ ಜರೂರಿಯಿದೆ. ದಿಟ್ಟ ಕ್ರಮಗಳಿಂದ ಮಾತ್ರ ಈ ತರಹದ ಕೃತ್ಯಕ್ಕೆ ಕಡಿವಾಣ ಹಾಕಲು ಸಾಧ್ಯ ಎಂದು ಹೇಳಿದ್ದಾರೆ.



ಕಾಂಗ್ರೆಸ್ ಸರ್ಕಾರ ಇನ್ನಾದರೂ ತುಷ್ಟೀಕರಣ ಬಿಟ್ಟು ಸತ್ಯ ಅರಿಯಬೇಕು. ದುಷ್ಟರು ಯಾರೇ ಇದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯ ಕಠಿಣ ಕ್ರಮ ಕೈಗೊಳ್ಳಬೇಕು. ಇನ್ನೊಬ್ಬರ ಸಾವು–ನೋವಿನ ಮೇಲೂ ರಾಜಕೀಯ ಮಾಡುವುದು ಸರಿಯಲ್ಲ. ಈ ಸರ್ಕಾರಕ್ಕೆ ಗೋವುಗಳ, ಅಮಾಯಕ ಯುವತಿಯರ, ಸರ್ಕಾರದ ತಪ್ಪಿಗೆ ವಿನಾಕಾರಣ ಆತ್ಮಹತ್ಯೆಗೆ ಶರಣಾದ ಪರಿವಾರದವರ ಶಾಪ ತಟ್ಟಲಿದೆ.

**–ಡಾ. ಶೈಲೇಂದ್ರ ಬೆಲ್ದಾಳೆ,**
**ಬಿಜೆಪಿ ರಾಜ್ಯ ಕಾರ್ಯದರ್ಶಿ, ಬೀದರ್ ದಕ್ಷಿಣ ಶಾಸಕರು.**

ಇದು ಬಲವಂತದ ಲವ್ ಜಿಹಾದ್ ಪ್ರಕರಣ ಎಂಬುದು ಕಂಡುಬರುತ್ತಿದೆ. ಕಿರುಕುಳ ನೀಡಿದವನಿಗೆ ಬಂಧಿಸಲಾಗಿದೆ. ಆದರೆ ಇದರ ಹಿಂದಿನ ಲವ್ ಜಿಹಾದ್ ಸಂಚು ಭೇದಿಸಿ, ಇದರ ಹಿಂದೆ ಯಾರಿದ್ದಾರೆ? ಹಿಂದು ಹೆಣ್ಮಕ್ಕಳಿಗೆ, ಯುವತಿಯರಿಗೆ ಈ ಪರಿ ಬೆನ್ನು ಬಿದ್ದು ಜೀವ ಹಿಂಡುವ ವ್ಯವಸ್ಥಿತ ಷಡ್ಯಂತ್ರ ರೂಪಿಸುತ್ತಿರುವವರು ಯಾರು? ಎಂಬುದರ ಬಗ್ಗೆ ಸಮಗ್ರ ತನಿಖೆ ನಡೆಸಿ ಎಲ್ಲರಿಗೂ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಆಗ್ರಹಿಸಿದ್ದಾರೆ. ಬೆಂಗಳೂರಿನಲ್ಲಿ ಮತಾಂಧ ಶಕ್ತಿಗಳಿಂದ ಗೋವುಗಳ ಕೆಚ್ಚಲು ಕೊಯ್ದು ವಿಕೃತಿ ಮೆರೆದಿರುವುದು ಘೋರ, ಕ್ರೂರ ಘಟನೆಯಾಗಿದೆ. ಈ ಪ್ರಕರಣದಲ್ಲಿ ಸಹ ಒಬ್ಬನ ಬಂಧನವಾಗಿದೆ. ಇದರ ಹಿಂದಿನ ಜಾಡು ಸಹ ಪತ್ತೆ ಮಾಡಿ ದುಷ್ಟರಿಗೆ ದಂಡಿಸಬೇಕಾಗಿದೆ. ಈ ಕೃತ್ಯ ಎಸಗಿದವನು ಮಾನಸಿಕ ಅಸ್ವಸ್ಥ ಎಂದು ಬಿಂಬಿಸುತ್ತಿರುವುದು ಸಹಿಸಲಾಗದು. ಕೆಲವರು ಈ ಘಟನೆ ಹಿಂದಿನ ಶಕ್ತಿಗಳಿಗೆ ಬಚಾವ್ ಮಾಡಲು ಇಂತಹ ನಾಟಕ ಹೆಣೆದಂತೆ ಕಾಣುತ್ತಿದೆ. ಹೀಗಾಗಿ ಈ ಪ್ರಕರಣದ ಉನ್ನತ ತನಿಖೆಯಾಗಿ ಇದರ ಹಿಂದಿನ ಶಕ್ತಿಗಳನ್ನು ಪತ್ತೆ ಹಚ್ಚಬೇಕೆಂದು ಒತ್ತಾಯಿಸಿದ್ದಾರೆ.

## ನಿಜವಾದ ಅಪರಾಧಿಗಳನ್ನು ರಕ್ಷಿಸಲು ಕಾಂಗ್ರೆಸ್ ಸರ್ಕಾರದ ಪ್ರಯತ್ನ: ಭಾಸ್ಕರ್ ರಾವ್




ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಚಾಮರಾಜಪೇಟೆಯಲ್ಲಿ ಗೋವುಗಳ ಮೇಲಿನ ಹಿಂಸಾಚಾರದ ನಿಜವಾದ ಅಪರಾಧಿಗಳನ್ನು ರಕ್ಷಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ವಿರೋಧ ಪಕ್ಷದ ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಹಿರಿಯ ಬಿಜೆಪಿ ನಾಯಕ ಮತ್ತು ಬೆಂಗಳೂರು ನಗರ ಮಾಜಿ ಪೊಲೀಸ್ ಆಯುಕ್ತ ಭಾಸ್ಕರ್ ರಾವ್, ಗೋವುಗಳ ಮೇಲಿನ ಹಿಂಸಾಚಾರವು ಹಿಂದೂ ಸಮುದಾಯದಲ್ಲಿ ಭಯವನ್ನು ಸೃಷ್ಟಿಸಲು ಮತ್ತು ಚಾಮರಾಜಪೇಟೆಯಲ್ಲಿರುವ ಶತಮಾನಗಳಷ್ಟು ಹಳೆಯದಾದ ಪಶುವೈದ್ಯಕೀಯ ಆಸ್ಪತ್ರೆಯನ್ನು ಮುಚ್ಚಲು ನಡೆಯುತ್ತಿರುವ ದೊಡ್ಡ ಪಿತೂರಿಯ ಭಾಗವಾಗಿದೆ ಎಂದು ಹೇಳಿದರು. ಹಿಂಸಾಚಾರಕ್ಕೆ ಒಳಗಾದ ಗೋವುಗಳ ಮಾಲೀಕರಿಗೆ ಮೂರು ಗೋವುಗಳನ್ನು ಖರೀದಿಸುವುದಾಗಿ ನೀಡಿದ್ದ ಚಾಮರಾಜಪೇಟೆ ಶಾಸಕ ಮತ್ತು ಸಚಿವ ಜಮೀರ್ ಅಹ್ಮದ್ ಖಾನ್ ಅವರ ಹೇಳಿಕೆಯನ್ನು ಅವರು ಟೀಕಿಸಿದರು. ಇದೊಂದು ಷಡ್ಯಂತ್ರ. ಚಾಮರಾಜಪೇಟೆಯಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಹಿಂದೂಗಳನ್ನ ಓಡಿಸಲು ಷಡ್ಯಂತ್ರ. ಸಚಿವ ಜಮೀರ್ ಮೂರು ಹಸು ಕೊಡಿಸುತ್ತೇನೆ ಎಂದಿದ್ದಾರೆ. ಅವರಿಗೆ ಭಾವನೆಯೇ ಇಲ್ಲ, ಅದೇನು ಆಟದ ವಸ್ತುವಾ? ತಾಳ್ಮೆಯಿಂದ ಇರುವ ಕಾರಣ ರಕ್ತಪಾತ ಆಗಿಲ್ಲ. ರಾಜ್ಯ ಸರ್ಕಾರದ ಅದೃಷ್ಟ ಇದು ಎಂದು ವಾಗ್ದಾಳಿ ನಡೆಸಿದರು. ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಪೊಲೀಸರು ಮೂರು ಗೋವುಗಳ ಕೆಚ್ಚಲು ಕತ್ತರಿಸಲು ಕಾರಣರಾದವರನ್ನು ಬಂಧಿಸಬೇಕು ಎಂದು ಹೇಳಿದರು. ಪೊಲೀಸರು ಬಂಧಿತ ವ್ಯಕ್ತಿಯನ್ನು ಪ್ರಶ್ನಿಸಬೇಕು ಮತ್ತು ಇಂತಹ ಅಮಾನವೀಯ ಕೃತ್ಯದ ಹಿಂದೆ ಯಾರಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕು ಎಂದು ಅವರು ಹೇಳಿದರು. ಕಾಂಗ್ರೆಸ್‌ನ ಸರಣಿ ಸಭೆಗಳನ್ನು ಟೀಕಿಸಿದ ಬಿಜೆಪಿ ನಾಯಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಸಭೆಗಳ ನಂತರವೂ ಕಾಂಗ್ರೆಸ್‌ನಲ್ಲಿನ ಸಮಸ್ಯೆಗಳು ಕೊನೆಗೊಳ್ಳುವುದಿಲ್ಲ ಎಂದು ಹೇಳಿದರು. ಅಧಿಕಾರ ಹಂಚಿಕೆ ಕುರಿತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹೈಕಮಾಂಡ್ ನೀಡಿದ ಭರವಸೆಯ ಬಗ್ಗೆ ಕಾಂಗ್ರೆಸ್ ಶಾಸಕರು ಸ್ಪಷ್ಟತೆ ಬಯಸುತ್ತಿದ್ದಾರೆ ಎಂದು ಅವರು ಹೇಳಿದರು.

# ನಿರಂತರ ಪರಿಶ್ರಮದಿಂದ ಜೀವನದಲ್ಲಿ ಸಫಲತೆ ಸಾಧ್ಯ : ಬ್ರಹ್ಮಕುಮಾರಿ ಯೋಗಿನಿ ಅಕ್ಕ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.14: ಯುವ ಜನತೆ ದೇಶದ ಸಂಪತ್ತಾಗಬೇಕು ನಮ್ಮ ಭಾರತ ದೇಶದ ನವ ನಿರ್ಮಾಣ ಕಾರ್ಯದಲ್ಲಿ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಬ್ರಹ್ಮಕುಮಾರಿ ಯೋಗಿನಿ ಅಕ್ಕ ತಿಳಿಸಿದರು. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಯುವ ವಿಭಾಗದ ಅಡಿಯಲ್ಲಿ ಏರ್ಪಡಿಸಿದ "ಯುವ ದಿನಾಚರಣೆ" ಕಾರ್ಯಕ್ರಮದಲ್ಲಿ ಯುವಕ ಯುವತಿಯರನ್ನು ಸನ್ಮಾನಿಸಿ ಮಾತನಾಡಿದರು. ಪರಿಶ್ರಮವಿಲ್ಲದೆ ಪ್ರತಿಫಲ ಸಿಗದು. ನಿರಂತರ ಅವಿಶ್ರಾಂತ ಪರಿಶ್ರಮದಿಂದ ಜೀವನದಲ್ಲಿ ಸಫಲತೆ ಪಡೆಯಲು ಸಾಧ್ಯ ಯುವ ಜನತೆ ತನ್ನ ತನು, ಮನ ಶಕ್ತಿಯನ್ನು ಸೃಜನಾತ್ಮಕ ಕ್ರಿಯಾತ್ಮಕ ಕಾರ್ಯಗಳಲ್ಲಿ ತೊಡಗಿಸಬೇಕು. ಜೀವನ ಉನ್ನತಿಯ ಕಡೆ ಸಾಗಬೇಕಾದರೆ ಆಧ್ಯಾತ್ಮ ಜ್ಞಾನದ ತಳಹದಿಯ ಮೇಲೆ ತನ್ನ ಜೀವನ ರೂಪಿ ಕಟ್ಟಡವನ್ನು ಕಟ್ಟಿಕೊಳ್ಳಬೇಕು ಆಧ್ಯಾತ್ಮ ಜ್ಞಾನವಿಲ್ಲದ ಜೀವನ ಮರಳಿನ ಮೇಲೆ ಕಟ್ಟಡ ಕಟ್ಟಿದಂತೆ. ಯುವ ಜನತೆ ಜೀವನ ರೂಪಿ ಪರೀಕ್ಷೆಯಲ್ಲಿ ಪಾಸಾಗಲು ಧೈರ್ಯ, ತಾಳ್ಮೆ, ಛಲ, ದೃಢತೆ, ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಯುವ ಜನತೆ ಪಾಶ್ಚಾತ್ಯ ಸಂಸ್ಕೃತಿಗೆ, ಕೆಟ್ಟ ಸಂಗ, ಕೆಟ್ಟ ಹವ್ಯಾಸಗಳಿಗೆ ವಶ ಆಗದಂತೆ ಇರಲು ಮನೋನಿಯಂತ್ರಣ ಶಕ್ತಿ ಬೇಕು. ಇದನ್ನು ರಾಜಯೋಗ ಧ್ಯಾನದಿಂದ ಮನಸ್ಸಿನ ಮೇಲೆ ಮಾಲೀಕರಾಗಿ ಮನಜೀತ್ ಜಗತ್ ಜಿತ್ ಆಗಬೇಕು.

ಇಂದಿನ ಯುವ ಜನತೆ ಮೊಬೈಲ್ ಹಾವಳಿಯಿಂದ ತಮ್ಮನ್ನು ತಾವೇ ರಕ್ಷಿಸಿಕೊಂಡು ಮರ್ಯಾದೆ ಮತ್ತು ಚಾರಿತ್ರ್ಯದ ಚೌಕಟ್ಟಿನಲ್ಲಿ ಬೆಳೆಯಬೇಕು. ಹೆತ್ತ ತಂದೆ ತಾಯಿಗೂ ಸಮಾಜಕ್ಕೂ ಆಸ್ತಿಯಾಗಬೇಕು ಎಂದರು. ಹಿಂದೂ ಮಹಾ ಮಂಡಳಿ ಕಾಮನಕಟ್ಟಿ ಗೆಳೆಯರ ಬಳಗ ಕಿನ್ನಾಳ ಗ್ರಾಮದ ಯುವಕರು ರಸ್ತೆ ಕಾಮಗಾರಿಯಲ್ಲಿ ತಮ್ಮ ಯುವಶಕ್ತಿಯನ್ನು ಬಳಸಿಕೊಂಡಿದ್ದನ್ನು ಗುರುತಿಸಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಅವರನ್ನು ಗೌರವಿಸಲಾಯಿತು ಜೊತೆಗೆ ಅನೇಕ ಯುವಕರು ಯುವತಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು "ಯುವ ಜನತೆಯ ಜೀವನದ ಸಫಲತೆಯಲ್ಲಿ ಆಧ್ಯಾತ್ಮ " ವಿಷಯದ ಕುರಿತು ಪವರ್ ಪಾಯಿಂಟ್ ಪ್ರೆಸೆಂಟೇಷನ್ ನೀಡಲಾಯಿತು. ಬಿಕೆ ಸ್ನೇಹಕ್ಕ ಕಾರ್ಯಕ್ರಮ ನಿರೂಪಿಸಿದರು.

# ಪದ್ಮಾವತಿ ಧರ್ಮಸಿಂಗ್ ಮತ್ತು ಡಾ. ಅಜಯಸಿಂಗ್ ರವರ ಹಸ್ತದಿಂದ ಕ್ಯಾಲೆಂಡರ್ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ ಜ.14 : ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಡಾ. ಅಜಯಸಿಂಗ್ ಹಾಗೂ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ರವರ ಧರ್ಮ ಪತ್ನಿ ಪದ್ಮಾವತಿ ಧರ್ಮಸಿಂಗ್ ಅವರ ಅಮೃತಹಸ್ತದಿಂದ 2025ರ ವರ್ಷದ ಹೊಸ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.



ಅವರು ಮಂಗಳವಾರ ಶ್ರೀ ವೀರ ಶಿರೋಮಣಿ ರಜಪೂತ ಸರ್ಕಾರಿ ಮತ್ತು ಅರೆ ಸರಕಾರಿ ನೌಕರರ ಸಂಘ ಕಲಬುರ್ಗಿ ವತಿಯಿಂದ ಕೆ.ಕೆ.ಆರ್.ಡಿ.ಬಿ ಅಧ್ಯಕ್ಷರ ನಿವಾಸದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಭವಾನಿ ಸಿಂಗ್ ಠಾಕೂರ್, ಕಲಬುರಗಿ ರಜಪೂತ ಮಹಿಳಾ ಆದ್ಯಕ್ಷೆ ಶ್ರೀಮತಿ ಅನಿತಾ ಸಧ್ಧಿವಲ್, ಶ್ರೀ ವೀರ್ ಶಿರೋಮಣಿ ರಜಪೂತ ಸರ್ಕಾರಿ ಮತ್ತು ಅರೆ ಸರಕಾರಿ ನೌಕರರ ಸಂಘ ಕಲಬುರ್ಗಿ ಜಿಲ್ಲಾಧ್ಯಕ್ಷ ಶ್ರೀ ಶಿವರಾಜ್ ತಿವಾರಿ, ಸಂಘದ ಗೌರವಾಧ್ಯಕ್ಷ ಡಾ. ಸಂತೋಷ್ ಸಿಂಗ್ ಬಯಾಸ್, ಸಮಾಜದ ಉಪಾಧ್ಯಕ್ಷರಾದ ಶ್ರೀ ಬಿರ್ಬಲ್ ಸಿಂಗ್, ಸಂಘದ ಖಜಾಚಿ ಶ್ರೀಮತಿ ಅನಪೂರ್ಣ ಅ. ತಿವಾರಿ ಸೇರಿದಂತೆ ಸಂಘದ ಸದಸ್ಯರು, ಪದಾಧಿಕಾರಿಗಳು, ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಕಲಬುರಗಿ: ಹಸುವಿನ ಕೆಚ್ಚಲು ಕತ್ತರಿಸಿದ ಕಿರಾತಕನಿಗೆ ಶಿಕ್ಷೆ ನೀಡಬೇಕು ಹಾಗೂ ಸರಕಾರ ಗೋ ವಿರೋಧಿ ನೀತಿ ಖಂಡಿಸಿ ಬಿಜೆಪಿ ರೈತಮೋರ್ಚಾದಿಂದ ನಗರದ ಸರದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ವಿಪ ಸದಸ್ಯ ಶಶೀಲ ನಮೋಶಿ, ಬಸವರಾಜ ಮಾಲೀಪಾಟೀಲ, ರಾಜು ನಾಗನಳ್ಳಿ ಸೇರಿದಂತೆ ರೈತಮೋರ್ಚಾದ ಮುಖಂಡರು ಇದ್ದರು.

# ಗೀತಾಂಜಲಿ ಮುಗುಳಿಯವರಿಗೆ ಶಿಕ್ಷಣ ಸೇವಾ ರತ್ನ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಜ.14:ಯಾದಗಿರಿ ಜಿಲ್ಲೆ ಶಹಪುರ ತಾಲೂಕಿನ ಸಗರದ ಕಲಾನಿಕೇತನ ಟ್ರಸ್ಟ್ ವತಿಯಿಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಶಹಾಪುರ ನಗರದ ಶಾರದ ವಿದ್ಯಾನಿಕೇತನ ಶಾಲೆಯ ಆವರಣದಲ್ಲಿ ಕಾರ್ಯಕ್ರಮ ಜರಗಿತು.

ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಮದಾಪುರ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿದ್ದು. ಶ್ರೀಮತಿ ಗೀತಾಂಜಲಿ ಮುಗುಳೆ ಅವರಿಗೆ ಶಿಕ್ಷಣ ಸೇವಾ ರತ್ನ ಕ್ಷೇತ್ರ ಪ್ರಶಸ್ತಿ ಲಭಿಸಿದ್ದು ತಾಲೂಕಿನ ಎಲ್ಲಾ ನಮ್ಮ ಕೈಯಲ್ಲಿ ಕಲಿತಿರುವ ಎಲ್ಲಾ ನನ್ನ ಮುದ್ದು ವಿದ್ಯಾರ್ಥಿಗಳಿಗೆ ಇದು ಸಲ್ಲುವ ಕೆಲಸವಾಗಿದೆ ಎಂದು ಗೀತಾಂಜಲಿ ಮುಗುಳಿ ಹೇಳಿದರು.

# ಏಳು ಕೋಟಿ ಮಲ್ಲಯ್ಯಗೆ ತನಾರತಿ ಭಕ್ತಿ ಸೇವೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ :ಜ.14: ನಗರದ ಡಾ. ಅಂಬೇಡ್ಕರ್ ನಗರದ ಶ್ರೀ ದುರ್ಗಾದೇವಿ ಬಡಾವಣೆಯ ಭಕ್ತರು ಸಂಕ್ರಾಂತಿ ಅಂಗವಾಗಿ ಮೈಲಾಪುರ ಮಲ್ಲಯ್ಯ ನಿಗೆ ತನಾರತಿ ಮತ್ತು ಉರುಳು ಸೇವೆ ಮಾಡುವ ಮೂಲಕ ಭಕ್ತಿ ಸಮರ್ಪಣೆ ಮಾಡಿದರು.

ಸಹಸ್ರಾರು ಭಕ್ತರ ದಂಡು ಬಂದು ಏಳು ಕೋಟಿಗೆ ಏಳು ಕೋಟಿಗೆ ಎಂಬ ಜೈ ಘೋಷಗಳ ಮುಖಾಂತರ ತಮ್ಮ ಬೇಡಿಕೆಗಳನ್ನು ಈಡೇರಿಸಿದ ದೇವರಿಗೆ ಭಕ್ತಿ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಬಡಾವಣೆಯ ಮುಖಂಡರು, ಹಿರಿಯರು, ಮಕ್ಕಳು, ಸೇರಿ ಸಂಭ್ರಮದಿಂದ ಆಚರಣೆ ಮಾಡಿದರು.

# ಹಗರಿಬೊಮ್ಮನಹಳ್ಳಿ ರೈಲ್ವೆ ಹೋರಾಟ ಸಮಿತಿಯಿಂದ ಸಚಿವ ಸೋಮಣ್ಣರಿಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.14: ಕೊಪ್ಪಳದ ಗವಿಮಠದ ಆವರಣದಲ್ಲಿ ಹಗರಿಬೊಮ್ಮನಹಳ್ಳಿಯ ರೈಲ್ವೆ ಹೋರಾಟ ಸಮಿತಿ ವತಿಯಿಂದ ಕೇಂದ್ರ ರೈಲ್ವೆ ಸಚಿವರಾದ ಶ್ರೀ ವಿ. ಸೋಮಣ್ಣ ಅವರನ್ನು ಭೇಟಿಯಾಗಿ ವಿವಿಧ ರೈಲ್ವೆ ಕಾಮಗಾರಿಗಳ ಬಗ್ಗೆ ಮನವಿಯನ್ನು ಸಲ್ಲಿಸಲಾಯಿತು.

ಸಚಿವ ಸೋಮಣ್ಣ ಅವರಿಗೆ ರೈಲ್ವೆ ಹೋರಾಟ ಸಮಿತಿಯಿಂದ ಸನ್ಮಾನಿಸಲಾಯಿತು. ಅತೀ ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೆಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪರಮ ಪೂಜ್ಯ ಶ್ರೀ ಗವಿಸಿದ್ದೇಶ್ವರ ಸ್ವಾಮಿಗಳು ಹಾಗೂ ಪೂಜ್ಯ ಶ್ರೀ ಡಾ. ಮಹೇಶ್ವರ ಸ್ವಾಮೀಜಿಗಳು ಹಾಗೂ ಹೋರಾಟ ಸಮಿತಿಯ ಕೊಟ್ರೇಶ್ ಶೆಟ್ಟರ್, ಸಂಚಿ ಶಿವಕುಮಾರ್, ಅಕ್ಕಿ ಮಲ್ಲಿಕಾರ್ಜುನ, ಪೋಟೋ ರಾಮಣ್ಣ, ಹೊಸಪೇಟೆಯ ಸತೀಶ್, ಬಸವನಗೌಡ, ಮೂರ್ತಿ, ವಿರುಪಾಕ್ಷಿ ಇದ್ದರು.

# ಕನ್ನಡ ಭವನದಲ್ಲಿ ಅಧ್ಯಯನ ಕೇಂದ್ರ ಉದ್ಘಾಟನೆ

ಬೀದರ. ಜ. 14 : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆ ಸಹಯೋಗದೊಂದಿಗೆ ನಗರದ ಕನ್ನಡ ಭವನದಲ್ಲಿ ವಿದ್ಯಾರ್ಥಿಗಳ ಅಧ್ಯಯನ ಕೇಂದ್ರವನ್ನು ಆರಂಭಿಸಲಾಗಿದೆ. ಭಾಲ್ಕಿ ಹೀರೆಮಠ ಗುರುಬಸವ ಪಟ್ಟದ್ದೇವರು ಉದ್ಘಾಟಿಸಿ, 'ಓದುವ ಹವ್ಯಾಸ ಹೆಚ್ಚಿಸುವ ಸದುದ್ದೇಶದಿಂದ ಕನ್ನಡ ಭವನದಲ್ಲಿ ಪ್ರಾರಂಭಿಸಿರುವ ಈ ಅಧ್ಯಯನ ಕೇಂದ್ರದ ಸದುಪಯೋಗ ವಿದ್ಯಾರ್ಥಿಗಳು ಪಡೆಯಬೇಕು' ಎಂದರು.

ಶಾಹೀನ್ ಸಂಸ್ಥೆಯ ಅಧ್ಯಕ್ಷ ಅಬ್ದುಲ್ ಖದೀರ್, ಸಾಹಿತಿ ಸಿದ್ರಾಮಪ್ಪ ಮಾಸಿಮಾಡೆ, ಎಚ್.ಕೆ.ಇ.ಸಂಸ್ಥೆ ಆಡಳಿತ ಮಂಡಳಿ ಸದಸ್ಯ ರಜನೀಶ ವಾಲಿ, ವಿಕಾಸ ಅಕಾಡೆಮಿ ಸಂಚಾಲಕ ರೇವಣಸಿದ್ದಪ್ಪ ಜಲಾದೆ, ಬಸವಕಲ್ಯಾಣ ತಹಶೀಲ್ದಾರ್ ದತ್ತಾತ್ರೇಯ ಗಾದಾ, ಹುಲಸೂರ ತಹಶೀಲ್ದಾರ್ ಶಿವಾನಂದ ಮೇತ್ರೆ, ಕಸಾಪ ಜಿಲ್ಲಾ ಅಧ್ಯಕ್ಷ ಸುರೇಶ ಚನಶೆಟ್ಟಿ, ಗೌರವ ಕಾರ್ಯದರ್ಶಿ ಶಿವಕುಮಾರ ಕಟ್ಟೆ, ಪ್ರಧಾನ ಕಾರ್ಯದರ್ಶಿ ಟಿ.ಎಂ.ಮಚ್ಚೆ, ಕೋಶಾಧ್ಯಕ್ಷ ಶಿವಶಂಕರ ಟೋಕರೆ ಹಾಜರಿದ್ದರು.

# ಸಿದ್ಧರಾಮೇಶ್ವರರ ಕಾಯಕ ತತ್ವ ಪಾಲಿಸೋಣ: ಮೇಯರ್ ಮುಲ್ಲಂಗಿ ನಂದೀಶ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.14:12ನೇ ಶತಮಾನದ ವಚನ ಸಾಹಿತ್ಯದ ವಚನಕಾರರಲ್ಲಿ ಒಬ್ಬರಾದ ಶಿವಯೋಗಿ ಶರಣ ಸಿದ್ಧರಾಮೇಶ್ವರರ ಕಾಯಕಯೋಗಿ ತತ್ವಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳೋಣ ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.



ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಮಂಗಳವಾರ ಆಯೋಜಿಸಿದ್ದ ಶಿವಯೋಗಿ ಸಿದ್ಧರಾಮೇಶ್ವರ 853ನೇ ಜಯಂತಿ ಕಾರ್ಯಕ್ರಮವನ್ನು ಸಿದ್ಧರಾಮೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸಿದ್ದರಾಮೇಶ್ವರರ ತತ್ವವು ಮನುಕುಲದ ಸೇವೆ, ಶಿವಯೋಗದ ಮಾರ್ಗವಾಗಿತ್ತು. ವಚನ ಸಾಹಿತ್ಯವನ್ನು ವಿನಾಶದಿಂದ ಪಾರು ಮಾಡುವಲ್ಲಿ ಸಿದ್ಧರಾಮೇಶ್ವರರು ಕೂಡ ಒಬ್ಬರಾಗಿದ್ದರು ಎಂದು ಅವರು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಅವರು ಮಾತನಾಡಿ, ಸಿದ್ಧರಾಮೇಶ್ವರರು ಜಾತಿ ಮತ್ತು ಲಿಂಗ ತಾರತಮ್ಯದ ಕುರುಡು ಸಂಪ್ರದಾಯಗಳನ್ನು ತಿರಸ್ಕರಿಸಿದ್ದರು. ವೈಯಕ್ತಿಕ ಅನುಭವದ ಮೂಲಕ ಸಾಕ್ಷರತೆಗೆ ಒತ್ತು ನೀಡಿದ್ದರು. ಸಮ ಸಮಾಜ ಕಟ್ಟುವಲ್ಲಿ ಕನಸು ಕಂಡಿದ್ದವರು ಎಂದು ಹೇಳಿದರು.

ಸಿದ್ದರಾಮೇಶ್ವರರು 12 ನೇ ಶತಮಾನದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಯರಂತಹ ವಚನ ಸಾಹಿತ್ಯಕಾರರ ಸಾಲಿನಲ್ಲಿ ಇವರು ಕೂಡ ಪ್ರಬುದ್ಧ ವಚನಕಾರರಾಗಿದ್ದರು ಎಂದು ತಿಳಿಸಿದರು.

ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಗಾದೆಪ್ಪ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಸಿದ್ಧರಾಮೇಶ್ವರ ಅವರು ಕ್ರಿ.ಶ 12ನೇ ಶತಮಾನದ ಸುಪ್ರಸಿದ್ಧ ಶರಣರ ಶರಣರ ಪರಂಪರೆಯಲ್ಲಿ ಗುರುತಿಸಿಕೊಂಡವರು. ತನ್ನ ಸ್ವಂತ ಕಾಯಕದ ಮೂಲಕ ಅಪ್ರತಿಮ ಶರಣನಾಗಿ ರೂಪಗೊಂಡವನು ಎಂದರು.

ಸಿದ್ಧರಾಮೇಶ್ವರರು ಸೊನ್ನಲಿಗೆ ಎಂಬ ಪುಟ್ಟ ಹಳ್ಳಿಯಲ್ಲಿ (ಮಹಾರಾಷ್ಟ್ರದ ಸೊಲ್ಲಾಪುರ) ಜನಿಸಿದವರು. ಅವರ ತಂದೆ ಮುದ್ದುಗೌಡ, ತಾಯಿ ಸುಗ್ಗವ್ವ. ಸಿದ್ಧರಾಮೇಶ್ವರರು ವಚನಗಳನ್ನು ರಚಿಸಿರುವುದು ಮಾತ್ರವಲ್ಲದೆ, ವಚನ ಸಂರಕ್ಷಣೆಯೂ ಮಾಡಿದ್ದಾರೆ. ಕೆರೆ, ಕಟ್ಟೆ ಕಟ್ಟಿಸಿ ಜನೋಪಯೋಗಿ ಕಾರ್ಯ ಕೈಗೊಂಡರು. ಶರಣತತ್ವದ ಪರಿಪಾಲಕರಾಗಿದ್ದರು ಎಂದರು.

ಕಾರ್ಯಕ್ರಮದಲ್ಲಿ ರಾಘವೇಂದ್ರ ಗುಡುದೂರು ತಂಡದಿಂದ ಭಕ್ತಿ ಸಂಗೀತ ಕಾರ್ಯಕ್ರಮ ನೆರವೇರಿಸಿಕೊಟ್ಟರು.

*ಅದ್ದೂರಿ ಮೆರವಣಿಗೆ:*

ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಮೆರವಣಿಗೆಗೆ ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಸಿದ್ಧರಾಮೇಶ್ವರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಚಾಲನೆ ನೀಡಿದರು.

ಡೊಳ್ಳುವಾದ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ನಗರದ ಡಾ. ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಮೆರವಣಿಗೆಯು ಆರಂಭಗೊಂಡು ಗಡಿಗೆ ಚೆನ್ನಪ್ಪ ವೃತದಿಂದ ಬೆಂಗಳೂರು ರಸ್ತೆ, ತೇರು ಬೀದಿ, ಜೈನ್ ಮಾರ್ಕೆಟ್, ಹೆಚ್.ಆರ್. ಗವಿಯಪ್ಪ ವೃತದ ಮಾರ್ಗವಾಗಿ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದವರೆಗೆ ತಲುಪಿ ಸಂಪನ್ನಗೊಂಡಿತು.

ಕಾರ್ಯಕ್ರಮದಲ್ಲಿ ಸಹಾಯಕ ಆಯುಕ್ತರಾದ ಪ್ರಮೋದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಹನುಮಂತಪ್ಪ, ಜಿಲ್ಲಾ ಭೋವಿ ಸಂಘ ಅಧ್ಯಕ್ಷ ವಿ. ರಾಮಾಂಜನೇಯ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಸಮುದಾಯದ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

# ಕಾಯಕದಿಂದ ಮೆಚ್ಚುಗೆ ಗಳಿಸಿದ ಮಹಾನ ಶರಣ ಮೇದಾರ ಕೇತಯ್ಯ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.14: 12ನೆಯ ಶತಮಾನದ ಬಸವಾದಿ ಶರಣರಲ್ಲಿ ಮೇದಾರ ಕೇತಯ್ಯ ಶರಣರು ತಮ್ಮ ಕಾಯಕ ತತ್ವದಿಂದ ಮೆಚ್ಚುಗೆ ಗಳಿಸಿದರು ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಹೇಳಿದರು.



ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಸೋಮವಾರ ಆಯೋಜಿಸಿದ್ದ ಶರಣ ಮೇದಾರ ಕೇತಯ್ಯ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕಲ್ಯಾಣದ ಅನುಭವ ಮಂಟಪದಲ್ಲಿ ಶರಣ ಕೇತಯ್ಯ ಅವರು ಬಸವಣ್ಣನವರ ಅಚ್ಚುಮೆಚ್ಚಿನವರಾಗಿದ್ದರು. ಬಸವಾದಿ ಶರಣರು ಕೇತಯ್ಯನ ಕಾಯಕ ನಿಷ್ಠೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದರು.

ಮೇದಾರ ಕೇತಯ್ಯ ಶರಣರು ಬಸವಣ್ಣನವರ ಕಾರ್ಯಕ್ಕೆ ಪ್ರಭಾವಿತರಾಗಿ ಅವರನ್ನು ಗುರುವಾಗಿ ಸ್ವೀಕರಿಸಿದರು. ಮಹಾಲಿಂಗ ಸ್ವಾಮೀಜಿ ಸಮ್ಮುಖ ವಹಿಸಿದರು.

ಬಸವಣ್ಣನವರ ಪ್ರಭಾವದಿಂದ ಗುರು-ಲಿಂಗ-ಜಂಗಮದಲ್ಲೇ ತನ್ನ ನಿಜಸುಖವನ್ನು ಕಂಡವರು. ಭಕ್ತರಾಗಿ ಶರಣರಾಗಿ ಕಾಯಕದಲ್ಲೇ ಕೈಲಾಸವನ್ನು ಕಂಡಿದ್ದಾರೆ. ಶರಣರ ತತ್ವಗಳಾದ ದಯೆ ಕರುಣೆ ಕಾಯಕ ದಾಸೋಹ ತತ್ವಗಳನ್ನು ಅನುಷ್ಠಾನದಲ್ಲಿ ತಂದವರು ಅಂತಹ ಶರಣ ಮೇದಾರ ಕೇತಯ್ಯನವರ ಆದರ್ಶ ಎಲ್ಲರಿಗೂ ಪ್ರೇರಣೆಯಾಗಬೇಕು ಎಂದು ತಿಳಿಸಿದರು.

ಶಿವಬಸವ ದೇವರು ಅನುಭಾವ ನೀಡಿದರು. ಈ ಸಂದರ್ಭದಲ್ಲಿ ಮೇದಾರ ಕೇತಯ್ಯ ಸಮಾಜದ ಮುಖಂಡ ನಾಗನ್ನಾಥ ಮೇಘಾ ಅಧ್ಯಕ್ಷತೆ ವಹಿಸಿದರು.

ಈ ಸಂದರ್ಭದಲ್ಲಿ ಮೇದಾರ ಕೇತಯ್ಯ ಸಮಾಜದ ಅಧ್ಯಕ್ಷ ಬಸವರಾಜ ಚಂದಾನೋರ, ಶಂಕರ ಚಂದಾನೋರ, ಶ್ರೀಧರ ಚಂದಾನೋರ, ಅನಿಲಕುಮಾರ ಚಂದಾನೋರ, ಸಚಿನ ಪೂಜಾರಿ, ಸಿದ್ದು ವಾಗ್ಮಾರೆ, ವಿಶಾಲ ಪಳಸೆ, ಶರಣು ತೆಲಗಾಣೆ ಸೇರಿದಂತೆ ಹಲವರು ಇದ್ದರು. ಪ್ರಿಯಂಕಾ ರಾಹುಲ ಸಾವಂತ ವಚನ ಗಾಯನ ನಡೆಸಿಕೊಟ್ಟರು. ದೀಪಕ ಠಮಕೆ ನಿರೂಪಿಸಿದರು. ಶಾಮಲಾ ವೈಜಿನಾಥ ಮೇತ್ರೆ ಕಾರ್ಯಕ್ರಮದ ಭಕ್ತಿ ದಾಸೋಹ ವಹಿಸಿಕೊಂಡಿದ್ದರು.

## ಧರ್ಮಸ್ಥಳ ಶೌರ್ಯ ತಂಡದಿಂದ ದೇವಾಲಯಗಳ ಸ್ವಚ್ಚತೆ



(ಎಂ. ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ;ತಾಲ್ಲೂಕಿನಹತ್ತಿಕುಣಿ ಗ್ರಾಮದಲ್ಲಿರುವಧರ್ಮಸ್ಥಳಗ್ರಾಮ ಅಭಿವೃದ್ಧಿ ಶೌರ್ಯ ತಂಡದ ಯುವಕರು–ಯುವತಿಯರು ಮಕರ ಸಂಕ್ರಮಣ ಪ್ರಯುಕ್ತ ಗ್ರಾಮದ ಹನುಮಾನ ಹಾಗೂ ಮರೆಮ್ಮ ದೇವಸ್ಥಾನಗಳನ್ನು ಸ್ವಚ್ಚಗೊಳಿಸಿದರು.

ತಂಡದ ನಾಯಕ ಶರಣಪ್ಪ ಭೀಮಶಪ್ಪನೋರ ನೇತೃತ್ವದಲ್ಲಿ ಕಾರ್ಯಕರ್ತರು ಬೆಳಿಗ್ಗೆ 6 ಗಂಟೆಗೆ 2 ದೇವಸ್ಥಾನಗಳನ್ನು ಮೊದಲು ಕಸ ಗುಡಿಸಿ ನಂತರ ಎಲ್ಲಾ ಕಡೆ ನೀರನ್ನು ಸಿಂಪಡಿಸಿ ಶುದ್ಧಗೊಳಿಸಿ ಗ್ರಾಮದ ಭಕ್ತರ ದರ್ಶನಕ್ಕೆಒಳ್ಳೆಯ ವಾತಾವರಣ ನಿರ್ಮಾಣ ಮಾಡಿದರು.

ತಂಡದಲ್ಲಿ ಮಲ್ಲಪ್ಪ ಪೂಜಾರಿ, ತಿಪ್ಪಣ್ಣ ಹೋರುಂಚಾ, ರಾಜಶ್ರೀ, ಸವಿತಾ ಹೋರುಂಚಾ ತಾಂಡಾ, ವಿಜಯಲಕ್ಷ್ಮೀ ತಮ್ಮಣ್ಣೋರ, ಮಲ್ಲಯ್ಯಗೌಡಗೇರ, ನಬಿಲಾಲ್ ಇನಾಂದಾರ ಸೇರಿದಂತೆ ಹಲವು ಯುವಕರು– ಯುವತಿಯರು ಕಾರ್ಯದಲ್ಲಿ ತೊಡಗಿದ್ದರು.

## ಎರಡು, ಮೂರನೇ ಹಂತದ ನಗರಗಳಿಂದ ಬೇಡಿಕೆ ಹೆಚ್ಚಾಳ: ಕರ್ನಾಟಕದಲ್ಲಿ ದಾಖಲೆಯ ಪಾಸ್‌ಪೋರ್ಟ್ ವಿತರಣೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಕರ್ನಾಟಕದ ನಿವಾಸಿಗಳು, ವಿಶೇಷವಾಗಿ ಟೈಯರ್ 2 ಮತ್ತು 3 ನಗರಗಳ ನಿವಾಸಿಗಳು ವಿದೇಶಗಳಿಗೆ ಹೆಚ್ಚು ತೆರಳಲು ಬಯಸುತ್ತಿರುವುದರಿಂದ ಕಳೆದ ವರ್ಷ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿ ಹೆಚ್ಚೆಚ್ಚು ಕಾರ್ಯನಿರತವಾಗಿದೆ. 2024ರಲ್ಲಿ 8,83,755 ಪಾಸ್‌ಪೋರ್ಟ್‌ಗಳನ್ನು ನೀಡುವ ಮೂಲಕ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿದೆ.

2023 ರಲ್ಲಿ 34,000 ಪಾಸ್‌ಪೋರ್ಟ್‌ಗಳ ಮೂಲಕ ನಮ್ಮ ಹಿಂದಿನ ಗರಿಷ್ಠ ದಾಖಲೆಯನ್ನು ಮೀರಿಸಿತ್ತು. ಕರ್ನಾಟಕದ ಟೈಯರ್ 2 ಮತ್ತು 3 ನಗರಗಳಿಂದ ಸ್ವೀಕರಿಸಿದ ಅರ್ಜಿಗಳ ಹೆಚ್ಚಳವು ಈ ಬೆಳವಣಿಗೆಗೆ ಕಾರಣವಾಗಿದೆ" ಎಂದು ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಕೃಷ್ಣ ಕೆ. ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ತಿಳಿಸಿದರು.

ಕರ್ನಾಟಕದಲ್ಲಿ 23 ಅಂಚೆ ಕಚೇರಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳಿವೆ (ಕಔಕಖಎ ಗಳು). "ಕೋವಿಡ್ –19 ನಂತರ, ಈ ನಗರಗಳಲ್ಲಿ ಕಔಕಖಎ ಗಳಿಂದ



ಅರ್ಜಿಗಳ ಏರಿಕೆ ಕಂಡುಬಂದಿದೆ. ಅವುಗಳ ಮೂಲಕ ಪ್ರತಿದಿನ ಸರಾಸರಿ 700 ರಿಂದ 800 ಅರ್ಜಿಗಳನ್ನು ಸಲ್ಲಿಸಲಾಗುತ್ತದೆ ಎಂದು ಕೃಷ್ಣ ಹೇಳಿದರು.

ಕೋವಿಡ್ –19 ರ ನಂತರ, ಅಂತರರಾಷ್ಟ್ರೀಯ ಪ್ರಯಾಣವು ಚೇತರಿಸಿಕೊಂಡಿದೆ ಮತ್ತು ಆದ್ದರಿಂದ ಪಾಸ್‌ಪೋರ್ಟ್ ಸೇವೆಗಳಿಗೆ ಬೇಡಿಕೆ ಸ್ಥಿರವಾಗಿ ಬೆಳೆಯುತ್ತಿದೆ ಎಂದು ಅವರು ಹೇಳಿದರು. ಕೆಲಸ, ಶಿಕ್ಷಣ ಅಥವಾ ಪ್ರವಾಸಿ ಉದ್ದೇಶಗಳಿಗಾಗಿ ವಿದೇಶಗಳಿಗೆ ಪ್ರಯಾಣಿಸುವ ಭಾರತೀಯರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. 2024 ರಲ್ಲಿ 4,88,509 ಪುರುಷರು, 3,95,236 ಮಹಿಳೆಯರು ಮತ್ತು 10 ಟ್ರಾನ್ಸ್‌ಜೆಂಡರ್‌ಗಳಿಗೆ ಪಾಸ್‌ಪೋರ್ಟ್ ನೀಡಲಾಗಿದೆ ಎಂದು ಕೃಷ್ಣ ಹೇಳಿದರು.

ಕಳೆದ ವರ್ಷ ಪಾಸ್‌ಪೋರ್ಟ್ ಪಡೆದವರಲ್ಲಿ 100 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಸೇರಿದ್ದಾರೆ. 96–99 ವಯಸ್ಸಿನ ವರ್ಗದಲ್ಲಿ ಎಂಟು ವ್ಯಕ್ತಿಗಳು ಮತ್ತು 76–95 ವರ್ಷ ವಯಸ್ಸಿನ ವರ್ಗದಲ್ಲಿ 8,668 ಜನರು ಪಾಸ್ ಪೋರ್ಟ್ ಪಡೆದಿದ್ದಾರೆ ಎಂದು ಅಂಕಿ ಅಂಶಗಳು ತಿಳಿಸಿವೆ.

ಗರಿಷ್ಠಸಂಖ್ಯೆಯಪಾಸ್‌ಪೋರ್ಟ್‌ಗಳನ್ನು – 3,88,453 – 16–35 ವಯಸ್ಸಿನ ವರ್ಗದಲ್ಲಿರುವವರಿಗೆ ನೀಡಲಾಗಿದೆ. ಆಶ್ಚರ್ಯಕರವಾಗಿ, ಒಂದೇ ತಿಂಗಳಲ್ಲಿ ಅತಿ ಹೆಚ್ಚು ಪಾಸ್‌ಪೋರ್ಟ್‌ಗಳನ್ನು ನೀಡಲಾಗಿದೆ. ಫೆಬ್ರವರಿಯಲ್ಲಿ 78,416 ಪಾಸ್ ಪೋರ್ಟ್ ನೀಡಲಾಗಿದೆ.

ಪಾಸ್‌ಪೋರ್ಟ್ ಇಲಾಖೆಯು ನೀಡುವ ಇತರ ಸೇವೆಗಳಲ್ಲಿ ಪೊಲೀಸ್ ಕ್ಲಿಯರೆನ್ಸ್ ಪ್ರಮಾಣಪತ್ರಗಳನ್ನು (ಪಿಸಿಸಿ) ನೀಡುವುದು ಸೇರಿದೆ, ಇದು ಕೆಲವು ದೇಶಗಳಲ್ಲಿ ಕೆಲಸ ಮಾಡಲು ಕಡ್ಡಾಯ ಅವಶ್ಯಕತೆಯಾಗಿದೆ. ಕುವೈತ್‌ಗೆ 7,284 ಪಿಸಿಸಿಗಳನ್ನು ನೀಡಲಾಗಿದೆ. ಈ ಮೂಲಕ ಕುವೈತ್ ಅತ್ಯಂತ ಬೇಡಿಕೆಯ ಕೆಲಸದ ಸ್ಥಳವಾಗಿದೆ. ಆಸ್ಟ್ರೇಲಿಯಾ 2,712 ಪಿಸಿಸಿಗಳೊಂದಿಗೆ ಎರಡನೇ ಸ್ಥಾನದಲ್ಲಿದೆ ಮತ್ತು ಇಸ್ರೇಲ್ ಮೂರನೇ ಸ್ಥಾನದಲ್ಲಿದೆ.

## ಕಾಂಗ್ರೆಸ್ ಸರ್ಕಾರ ಒಗ್ಗಟ್ಟಾಗಿದೆ, ವಿಪಕ್ಷಗಳು ಊಹಾಪೋಹ ಹರಡುತ್ತಿವೆ: ರಣದೀಪ್ ಸಿಂಗ್ ಸುರ್ಜೇವಾಲಾ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ವ್ಯಾಪಕ ಊಹಾಪೋಹಗಳು ಕೇಳಿಬರುತ್ತಿದ್ದು, ಆಡಳಿತಾರೂಢ ಕಾಂಗ್ರೆಸ್ ಸರ್ಕಾರವು ಒಗ್ಗಟ್ಟಾಗಿದೆ ಮತ್ತು ಪ್ರತಿಪಕ್ಷಗಳು ಸರ್ಕಾರದ ಮೇಲೆ ಇಲ್ಲ ಸಲ್ಲದ ಕಥೆಗಳನ್ನು ಹೆಣೆಯುತ್ತಿವೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸೋಮವಾರ ಹೇಳಿದ್ದಾರೆ.

ಬಿಜೆಪಿಯೊಳಗೆ ಮತ್ತು ಜೆಡಿಎಸ್‌ನೊಂದಿಗಿನ ಮೈತ್ರಿಯಲ್ಲಿ ಭಿನ್ನಾಭಿಪ್ರಾಯ ಇದೆ ಎಂದು ಪ್ರತಿಪಾದಿಸಿದ ಅವರು, ಕಾಂಗ್ರೆಸ್‌ನೊಳಗಿನ ಅಧಿಕಾರದ ಗುದ್ದಾಟ ಕೇವಲ ಮಾಧ್ಯಮ ಸೃಷ್ಟಿ ಎಂದು ಬಿಂಬಿಸಲು ಪ್ರಯತ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯಲ್ಲಿನ ಆಂತರಿಕ ಭಿನ್ನಾಭಿಪ್ರಾಯಗಳು ಮತ್ತು ಘರ್ಷಣೆಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು ಕೆಲವು ಆಯ್ದ ಸುದ್ದಿ ವಾಹಿನಿಗಳು, ಪ್ರತಿ ಕನ್ನಡಿಗರ ಕುಟುಂಬಕ್ಕೆ ನೇರ ನಗದು ವರ್ಗಾವಣೆ ಮಾಡುತ್ತಿರುವ ಏಕೀಕೃತ ಕಾಂಗ್ರೆಸ್ ಸರ್ಕಾರವನ್ನು ಪ್ರಶ್ನಿಸುತ್ತಿವೆ. ಈ ಮೂಲಕ 58,000 ಕೋಟಿ ರೂ.ಗಳನ್ನು ನೀಡುತ್ತಿದೆ ಎಂದರು.

ಕರ್ನಾಟಕ ಕಾಂಗ್ರೆಸ್ ಸರ್ಕಾರದ ಖಾತರಿ ಯೋಜನೆಯು ಭಾರತದ



ಅತಿದೊಡ್ಡ ಕಲ್ಯಾಣ ಉಪಕ್ರಮವಾಗಿದ್ದು, ಸ್ವಾಭಾವಿಕವಾಗಿ, ಬಿಜೆಪಿಯು ಇದರಿಂದ ವಿಚಲಿತವಾಗಿದೆ. ರಾಜ್ಯದಲ್ಲಿ ಕೇಸರಿ ಪಕ್ಷದೊಳಗೆ ಭಿನ್ನಾಭಿಪ್ರಾಯಗಳಿದ್ದು, ಬಿಜೆಪಿ ಮತ್ತು ಅದರ ಮೈತ್ರಿ ಪಾಲುದಾರ ಜೆಡಿಎಸ್ ಜಿದ್ದಾಜಿದ್ದಿಯಲ್ಲಿ ತೊಡಗಿವೆ ಎಂದು ದೂರಿದರು.

'ತಮ್ಮ ದುಷ್ಕೃತ್ಯಗಳು ಮತ್ತು ವೈಫಲ್ಯಗಳನ್ನು ಮರೆಮಾಚುವ ಪ್ರಯತ್ನದಲ್ಲಿ, ಪ್ರತಿಪಕ್ಷಗಳು ಕಾಂಗ್ರೆಸ್ ಮತ್ತು ಅದರ ಖಾತರಿಗಳ ಮೇಲೆ ದಾಳಿ ಮಾಡಲು ಕಥೆಗಳನ್ನು ಹೆಣೆಯುತ್ತಲೇ ಇವೆ. ಅವರು ಕೇವಲ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಅಥವಾ ಕಾಂಗ್ರೆಸ್ ಸರ್ಕಾರವನ್ನು ಗುರಿಯಾಗಿಸಿಕೊಂಡಿಲ್ಲ. ವಾಸ್ತವದಲ್ಲಿ ಕರ್ನಾಟಕದ ಜನರ ಮೇಲೆ ದಾಳಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಖಾತರಿಗಳು ಮತ್ತು ಕರ್ನಾಟಕದ ಜನತೆಯ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ನಡೆಸುವ ಪ್ರತಿಯೊಂದು ದುರುದ್ದೇಶಪೂರಿತ ನಡೆಯನ್ನು ನಾವು ಎದುರಿಸುತ್ತೇವೆ' ಎಂದರು.

'ನಮ್ಮಲ್ಲಿ ಯಾವುದೇ ಗೊಂದಲವಿಲ್ಲ, ಖುರ್ಚಿ ಖಾಲಿ ಇಲ್ಲದಿದ್ದರೂ ಸಿಎಂ ಬದಲಾಯಿಸುತ್ತಾರೆ ಎಂದು ಮಾಧ್ಯಮಗಳು ಪದೇ ಪದೆ ವರದಿ ಮಾಡುತ್ತಿವೆ. ಇಂತಹ ಹೇಳಿಕೆಗಳು ಪದೇ ಪದೆ ಬರುತ್ತಲೇ ಇವೆ. ಊಟದ ವಿಚಾರವಾಗಿ ಭೇಟಿಯಾದರೆ ರಾಜಕೀಯ ಚರ್ಚೆ ಎಂಬಂತೆ ಊಹಾಪೋಹಗಳು ಹರಿದಾಡುತ್ತಿವೆ. ಕೆಲವೊಮ್ಮೆ ಕೇವಲ ಊಹಾಪೋಹಗಳ ಆಧಾರದ ಮೇಲೆ ನಾವು ಏನನ್ನು ಚರ್ಚಿಸಿದ್ದೇವೆ ಎಂಬುದರ ಕುರಿತು ಹೇಳಿಕೆಗಳನ್ನು ಸಹ ರಚಿಸಲಾಗಿದೆ' ಎಂದು ಸಿಎಂ ಹೇಳಿದರು.

ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ, ಸಿಎಂ ಕುರ್ಚಿ ಖಾಲಿ ಇಲ್ಲ: ನಾಯಕತ್ವ ಬದಲಾವಣೆ ಊಹಾಪೋಹಕ್ಕೆ ಸಿದ್ದರಾಮಯ್ಯ ಸ್ಪಷ್ಟನೆ

ದಲಿತ ಮತ್ತು ಎಸ್‌ಟಿ ಕ್ಯಾಬಿನೆಟ್ ಸಹೋದ್ಯೋಗಿಗಳೊಂದಿಗೆ ಸಿದ್ದರಾಮಯ್ಯನವರ ಇತ್ತೀಚಿನ ಔತಣಕೂಟದ ನಂತರ, ಮಾರ್ಚ್ ಬಜೆಟ್ ನಂತರ ರಾಜ್ಯದಲ್ಲಿ ಅಧಿಕಾರ ಹಂಚಿಕೆ ಸೂತ್ರದ ಅಡಿಯಲ್ಲಿ ಮುಖ್ಯಮಂತ್ರಿಯ ಬದಲಾವಣೆ ಸಾಧ್ಯತೆ ಇದೆ ಎನ್ನುವ ಬಗ್ಗೆ ಊಹಾಪೋಹಗಳು ಹರಡಿವೆ.

ಸಚಿವರೂ ಸೇರಿದಂತೆ ಪಕ್ಷದ ಹಲವು ನಾಯಕರು ನಾಯಕತ್ವ ಬದಲಾವಣೆಯ ಬಗ್ಗೆ ಪ್ರತಿಕ್ರಿಯಿಸಿದ್ದು, ಕೆಲವರು ಅದರ ಸಾಧ್ಯತೆಯ ಬಗ್ಗೆ ಸುಳಿವು ನೀಡಿದರೆ, ಇತರರು ಅದನ್ನು ತಳ್ಳಿಹಾಕಿದ್ದಾರೆ.

## ಏಕಲವ್ಯ ಮಾದರಿ ವಸತಿ ಶಾಲೆ: 6ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.14–ತಾಲ್ಲೂಕಿನ ಕೊಳಗಲ್ಲು ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 2025–26 ನೇ ಸಾಲಿಗೆ 6ನೇ ತರಗತಿ ಪ್ರವೇಶಾತಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಾಲೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಅಡಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರೀಯ ಪಠ್ಯಕ್ರಮವನ್ನು ಹೊಂದಿರುವ ಶಾಲೆ ಇದಾಗಿದ್ದು, ವಿವಿಧ ವರ್ಗಗಳ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಪ್ರವೇಶಾತಿಯು ರಾಷ್ಟ್ರೀಯ ಬುಡಕಟ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಸಂಘ, ನವದೆಹಲಿ, ಇವರು ರೂಪಿಸಿರುವ ನಿಯಮಗಳಿಗೆ ಬದ್ಧವಾಗಿದ್ದು, ಪ್ರವೇಶಾತಿ ಪರೀಕ್ಷೆಯ ಮೂಲಕ ಸಂಪೂರ್ಣ ಪಾರದರ್ಶಕವಾಗಿ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತದೆ. ಅರ್ಜಿ ಸಲ್ಲಿಸಲು ಜ.31 ಕೊನೆಯ ದಿನವಾಗಿರುತ್ತದೆ. ಫೆ.17 ರಂದು ಪ್ರವೇಶ ಪತ್ರ ಬಿಡುಗಡೆ, ಫೆ.28 ರಂದು ಪ್ರವೇಶ ಪರೀಕ್ಷೆ, ಮಾ.10 ರ ನಂತರ ಫಲಿತಾಂಶ ಮತ್ತು ಆಯ್ಕೆ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ.

***ಅರ್ಹತೆ:*** 5ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರಬೇಕು. ಕನಿಷ್ಠ 31–03–2025ರ ಅಂತ್ಯಕ್ಕೆ 10 ವರ್ಷ ತುಂಬಿರಬೇಕು. ಗರಿಷ್ಠ 13 ವರ್ಷ ಒಳಗಿರಬೇಕು. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ಪಿವಿಟಿಜಿ ವರ್ಗ, ಡಿಎನ್‌ಟಿ ವರ್ಗ, ಎನ್‌ಟಿ ವರ್ಗ, ಎಸ್‌ಎನ್‌ಟಿ ವರ್ಗ, ಎಲ್‌ಡಬ್ಲೂ ಇ ವರ್ಗ, ಅಂಗವಿಕಲರಿಗೆ ಹಾಗೂ ನಕ್ಸಲರಿಂದ ಮರಣ ಹೊಂದಿದ, ಕೋವಿಡ್‌ನಿಂದ ಮರಣ ಹೊಂದಿದ, ದಂಗೆಗಳಿಂದ ಮರಣ ಹೊಂದಿದ ಪೋಷಕರ ಮಕ್ಕಳಿಗೆ, ಪತಿಯನ್ನು ಕಳೆದುಕೊಂಡ ವಿಧವೆಯರ ಮಕ್ಕಳಿಗಾಗಿ ಪ್ರವೇಶಾತಿ ಸಮಯದಲ್ಲಿ ನಿಯಮಾನುಸಾರ ಮೀಸಲಾತಿ ಕಲ್ಪಿಸಿಕೊಡಲಾಗುವುದು.

ಗಂಡು 30, ಹೆಣ್ಣು 30 ಸೇರಿ ಒಟ್ಟು 60 ಸೀಟ್ ಲಭ್ಯವಿರುತ್ತದೆ.

***ಅರ್ಜಿಗಳನ್ನು ಇಲ್ಲಿ ಪಡೆಯಬಹುದು:***

ಕೊಳಗಲ್ಲು ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆ, ಬಳ್ಳಾರಿ ನಗರದ ವಾಲ್ಮೀಕಿ ಭವನದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಮತ್ತು ಸಂಡೂರು, ಸಿರುಗುಪ್ಪ, ಬಳ್ಳಾರಿ ತಾಲ್ಲೂಕುಗಳ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಹಾಗೂ ಸಂಡೂರು, ಸಿರುಗುಪ್ಪ, ಬಳ್ಳಾರಿ, ಕುರುಗೋಡು, ಕಂಪ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪಡೆದುಕೊಳ್ಳಬಹುದು ಎಂದು ಕೊಳಗಲ್ಲು ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇದೇ 25 ರಿಂದ 26ಕ್ಕೆ ಯಲ್ಲಾಲಿಂಗೇಶ್ವರರ ಪುಣ್ಯ ಸ್ಮರಣೆ ಹಾಗೂ ಮಹಾದೇವಿ ತಾಯಿ ಅವರ 60 ನೇ ಹುಟ್ಟು ಹಬ್ಬ ಮತ್ತು ಮಹಿಳಾ ಸಮಾವೇಶ.




(ವರದಿ. ಡಿ. ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: ತಾಲೂಕಿನ ಸಸ್ತಾಪೂರದ ಶ್ರೀ ಯಲ್ಲಾಲಿಂಗೇಶ್ವರ ಆನಂದ ಆಶ್ರಮದಲ್ಲಿ ಬರುವ ಜನೇವರಿ 26 ಮತ್ತು 27 ರಂದು ಪೂಜ್ಯ ಯಲ್ಲಾಲಿಂಗೇಶ್ವರರ 39ನೆಯ ಪುಣ್ಯ ಸ್ಮರಣೆ, ಪೂಜ್ಯ ಮಹಾದೇವಿತಾಯಿ ಅವರ ಷಷ್ಠಬ್ದಿ ಸಮಾರಂಭ, ತಾಯಿಯವರಿಗೆ 60 ತುಲಾ ಭಾರ, ಮಹಿಳಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷರಾದ ಶಿವಕುಮಾರ ಪಾಟೀಲ ಮತ್ತು ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ ತಿಳಿಸಿದ್ದಾರೆ.

26ರಂದು ಗಣರಾಜ್ಯೋತ್ಸವದ ಧ್ವಜಾರೋಹಣ ಭವ್ಯವಾದ ಯಲ್ಲಾಲಿಂಗೇಶ್ವರವ ಭಾವಚಿತ್ರದೊಂದಿಗೆ ಮಹಾದೇವಿ ತಾಯಿಯವರ ಸಾರೋಟಿಯಲಿ ಮೆರವಣಿಗೆ, ಭಾಜಾಭಜಂತ್ರಿ, ಡೊಳ್ಳು ಕಲಾ ತಂಡದೊಂದಿಗೆ ಆರಂಭವಾಗುವದು ಮಧ್ಯಾಹ್ನ 1 ಗಂಟೆಗೆ ಮಹಿಳಾ ಸಮಾವೇಶ ಉದ್ಘಾಟನೆ, 2–30 ಕ್ಕೆ 60 ತುಲಾ ಭಾರ ಜರುಗುವವು. ಧರ್ಮ–ಮಹಿಳಾ ಚಿಂ ತನಾ ಗೋಷ್ಠಿ, ಕವಿಗೋಷ್ಠಿ, ಪುಷ್ಪಾರೋಹಣ, ಸಮಾರೋಪ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಂಡು ಎರಡು ದಿವಸಗಳ ನಡೆಸಲು ಪೂಜ್ಯ ಮಹಾದೇವಿ ತಾಯಿ ಅವರ ನೇತೃತ್ವದಲ್ಲಿ ನಡೆಯುವುದು. ಅನೇಕ ಶರಣ– ಶರಣೆಯರು, ಮಹಿಳೆಯರು, ಪೂಜ್ಯರು, ಸಾಹಿತಿಗಳನ್ನು ಆಮಂತ್ರಿಸಲು ಉದ್ದೇಶಿಸಲಾಗಿದೆ ಎಂದು ಪೂರ್ವ ಭಾವಿ ಸಭೆಯಲ್ಲಿ ನಿರ್ಣಯಿಸಲಾಯಿತು ಎಂದು ಮಠದ ವ್ಯವಸ್ಥಾಪಕ ಗೌಡಪ್ಪ ಪಾಟೀಲ ತಿಳಿಸಿದರು.

ಸಮಿತಿ ಅಧ್ಯಕ್ಷರಾಗಿ ಶಿವಕುಮಾರ ಪಾಟೀಲ, ಉಪಾಧ್ಯಕ್ಷರಾಗಿ ಪ್ರತೀಕ



ಮುಳೆ, ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಮುಳೆ, ಕಾರ್ಯದರ್ಶಿಯಾಗಿ ಮಹಾದೇವ ರೆಡ್ಡಿ ಸಂಯೋಜಕರಾಗಿ ಡಾ.ಗವಿಸಿದ್ಧಪ್ಪ ಪಾಟೀಲ ಅವರನ್ನು ಆಯ್ಕೆ ಮಾಡಲಾಯಿತು. ಅನೇಕ ಮಠದ ಭಕ್ತಾದಿಗಳು ಹಾಗೂ ಸಸ್ತಾಪೂರ ಗ್ರಾಮಸ್ಥರು ಪಾಲ್ಗೊಂಡು ಅದ್ದೂರಿಯಾಗಿ ಆಚರಿಸಲು ನಿರ್ಧರಿಸ ಲಾಯಿತು. ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಲಿಗೆ ತರಬೇತಿಗಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.14–ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಆರ್‌ಎಪಿ ಯೋಜನೆಯಡಿ ಗ್ರಾಮೀಣ ಭಾಗದ ಮಹಿಳಾ ಅಭ್ಯರ್ಥಿಗಳಿಂದ ಹೊಲಿಗೆ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

26 ಸಾಮಾನ್ಯ ವರ್ಗದ ಮತ್ತು ವಿಶೇಷ ಘಟಕ ಯೋಜನೆಯಡಿ 04 ಸೇರಿ ಒಟ್ಟು 30 ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸಿಂಡ್ ಗ್ರಾಮೀಣ ತರಬೇತಿ ಸಂಸ್ಥೆಯಿಂದ ಒಂದು ತಿಂಗಳ ಉಚಿತ ವಸತಿಯೊಂದಿಗೆ ಶಿಷ್ಯವೇತನ ರಹಿತ ತರಬೇತಿ ನೀಡಲಾಗುವುದು. ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಮಹಿಳಾ ಅಭ್ಯರ್ಥಿಗಳಿಗೆ ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಿಸಲಾಗುವುದು.

ಅರ್ಜಿ ಸಲ್ಲಿಸಲು ವೆಬ್‌ಸೈಟ್ ಛಚಿಟಟಚಿಡಿ.ಟಿಛಿ.ಎಟಿ ವಿಳಾಸಕ್ಕೆ ಭೇಟಿ ನೀಡಬೇಕು. ಅರ್ಜಿ ಸಲ್ಲಿಸಲು ಜ.22 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಬಳ್ಳಾರಿ–ಮೊ.9035547140, ಸಂಡೂರು–ಮೊ.9844200579, ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರ ಮೊ.9901313417 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂದಾಜು 20 ಲೀಟರ್ ಬೆಲ್ಲದ ಕೊಳೆ, 2.5 ಲೀಟರ್ ಕಳ್ಳಬಟ್ಟಿ ಮದ್ಯ ಜಪ್ತಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 13–ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ನಕಲಿ ಮದ್ಯ, ಅಕ್ರಮ ಮದ್ಯ, ಕಲಬೆರಕೆ ಸೇಂದಿ, ಕಳ್ಳಭಟ್ಟಿ ಸಾರಾಯಿ ಹಾಗೂ ಇತರೆ ಅಬಕಾರಿ ಅಕ್ರಮ ಪದಾರ್ಥಗಳ ತಯಾರಿಕೆ ಸಾಗಾಣಿಕೆ ಸಂಗ್ರಹಣೆ ಹಾಗೂ ಮಾರಾಟಗಳಂತಹ ಅಕ್ರಮ ಚಟುವಟಿಕೆಗಳು ನಡೆ–ಯದಂತೆ, ತಡೆಗಟ್ಟಲು ಜಿಲ್ಲೆ ಮತ್ತು ತಾಲ್ಲೂಕಿನಾದ್ಯಂತ ವಿಶೇಷ ತನಿಖಾ ತಂಡಗಳನ್ನು ರಚಿಸಿಕೊಂಡು ಜಾರಿ ಮತ್ತು ತನಿಖೆಯನ್ನು ಕೈಗೊಳ್ಳುತ್ತಿರುವಾಗ ಅಬಕಾರಿ ಅಕ್ರಮಗಳು ಕಂಡುಬಂದಿರುವುದರಿಂದ ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದೆ ಅಂದಾಜು 20 ಲೀಟರ್ ಬೆಲ್ಲದ ಕೊಳೆ, 2.5 ಲೀಟರ್ ಕಳ್ಳಬಟ್ಟಿ ಮದ್ಯ ಜಪ್ತಿ ಮಾಡಲಾಗಿದೆ ಎಂದು ಯಾದಗಿರಿ ಅಬಕಾರಿ ಉಪ ಆಯುಕ್ತರು ಶಾರಾದ ಸಿ.ಕೋಲಕಾರ ಅವರು ತಿಳಿಸಿದ್ದಾರೆ.

ಪ್ರಕರಣ ಸಂ.03, 2025ರ ಜನವರಿ 10 ರಂದು ಅಬಕಾರಿ ಜಂಟಿ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ ಹಾಗೂ ಶ್ರೀಮತಿ ಶಾರದಾ ಸಿ. ಕೋಲಕಾರ ಅಬಕಾರಿ ಉಪ ಆಯುಕ್ತರು, ಯಾದಗಿರಿ ರವರ ನಿರ್ದೇಶನದ ಮೇರೆಗೆ ಶ್ರೀ ಹರ್ಷರಾಜ್ ಬಿ. ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ ಶಹಾಪೂರ ರವರ ಮಾರ್ಗದರ್ಶನದಲ್ಲಿ ಖಚಿತ ಭಾತ್ಮಿಯ ಮೇರೆಗೆ ಶ್ರೀ ಮಲ್ಲಿಕಾರ್ಜುನ ಹನಗಂಡಿ. ಅಬಕಾರಿ ನಿರೀಕ್ಷಕರು ಮತ್ತು ಶ್ರೀ ಪಾಂಡುರಂಗ ಅಬಕಾರಿ ಉಪ ನಿರೀಕ್ಷಕರು, ವಲಯ ಯಾದಗಿರಿ, ಅಬಕಾರಿ ಮುಖ್ಯ ಪೇದೆಯಾದ ಶ್ರೀ ಮಹ್ಮದ ರಫೀ, ಶ್ರೀ ಜಂಬುನಾಥ ಪೂಜಾರಿ, ಶ್ರೀ ಶರೀಫ್ ವಾಲೀಕರ್, ಅಬಕಾರಿ ಪೇದೆಗಳಾದ ಶ್ರೀ ಶೇಖರಮೋಹನ್, ಶ್ರೀ ಶರಣು, ಶ್ರೀ ಪರಶುರಾಮ ಜಾಧವ್, ವಾಹನ ಚಾಲಕರಾದ ಶ್ರೀ ಸಿದ್ರಾಮ ರೆಡ್ಡಿ, ಗೃಹ ರಕ್ಷಕದಳ ಸಿಬ್ಬಂದಿಯಾದ ಕು. ಮೇನಕಾ, ಶ್ರೀ ಮಲ್ಲಪ್ಪ ಬಿ. ಶ್ರೀ ಗುಲಾಮ ಹುಸೇನ್, ಶ್ರೀ ಅರುಣಕುಮಾರ ಮತ್ತು ಶ್ರೀ ಅಂಬರೇಶ್ ಸಿಬ್ಬಂದಿಯವರೊಂದಿಗೆ ಕೂಡಿಕೊಂಡು ಗುರುಮಿಠಕಲ್ ತಾಲೂಕಿನ ಎಂಪಾಡ್ ತಾಂಡಾದಲ್ಲಿ ಅಬಕಾರಿ ದಾಳಿಗೆ ಸಮಯದಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿ ಸಂಗ್ರಹ ಮತ್ತು ಮಾರಾಟದ ಬಗ್ಗೆ ಮಾಹಿತಿ ಬಂದ ಹಿನ್ನಲೆಯಲ್ಲಿ ಬಾತ್ಮಿಯಂತೆ ಮನೆ ನ:1/38 ರಲ್ಲಿ ಬಂದು ಪಂಚರ ಸಮ್ಮುಖದಲ್ಲಿ ಸದರಿ ಮನೆಯನ್ನು ಶೋದಿಸಿದಾಗ ಮನೆಯಲ್ಲಿ ಚಾಲ್ತಿ ಬಟ್ಟಿ ಇದ್ದು ಅದರಲ್ಲಿ ಅಂದಾಜು 20 ಲೀಟರ್ ಬೆಲ್ಲದ ಕೊಳೆ ಮತ್ತು 2.5 ಲೀಟರ್ ಕಳ್ಳಬಟ್ಟಿ ಸರಾಯಿ ಇರುವುದು ಕಂಡು ಬಂದಿತು, ನಂತರ ಮನೆಯನ್ನು ಶೋಧಿಸಲಾಗಿ ಯಾವುದೇ ರೀತಿಯ ವ್ಯಕ್ತಿಯ ಬಗ್ಗೆ ಸುಳ್ಳು ಸಿಗಲಿಲ್ಲ ನಂತರ ಸದರಿ ಮನೆಯ ಮಾಲೀಕನ ಮೇಲೆ ಮತ್ತು ಓಡಿಹೋಗಿ ಪರಾರಿಯಾದ ಆರೋಪಿತನ ಮೇಲೆ ಪ್ರಕರಣವನ್ನು ದಾಖಲಿಸಲಾಯಿತು. ನಂತರ ಎಲ್ಲ ವಿದ್ಯಮಾನವನ್ನು ಃಓಖಖ ಕಾಯ್ದೆಯಂತೆ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಗಿರುತ್ತದೆ. ಓಡಿ ಹೋಗಿ ಪರಾರಿಯಾದ ಮತ್ತು ಮನೆಯ ಮಾಲೀಕನನ್ನು ಪತ್ತೆ ಹಚ್ಚಿ ಬಂದಿಸಬೇಕಾಗಿರುತ್ತದೆ. ಇಬ್ಬರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ:ಮಹಾದೇವಪ್ಪ



ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ;ಜ.5:ಶಿಕ್ಷಕ ವೃತ್ತಿ ಅಂತ್ಯಂತ ಶ್ರೇಷ್ಠವಾದದು ನೀವು ಇದನ್ನು ಆಯ್ಕೆ ಮಾಡಿಕೊಂಡಿದ್ದೀರಿ ಇದರ ಮಹತ್ವ ಹೆಚ್ಚಾಗಲು ಉತ್ತಮ ಸಾಧನೆ ನಮ್ಮದಾಗಬೇಕು ಎಂದು ಮುಖ್ಯಗುರು ಮಹಾದೇವಪ್ಪ ಅಭಿಪ್ರಾಯಪಟ್ಟರು.

ಸಮೀಪದ ಕ್ಯಾತ್ನಾಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾ ವರ್ಧಕ ಡಿ.ಎಲ್. ಇಡಿ ಕಾಲೇಜು ಪ್ರಶಿಕ್ಷಣಾರ್ಥಿಗಳಿಂದ ಹಮ್ಮಿಕೊಂಡ ರೂಢಿಪಾಠಗಳ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ತರಬೇತಿಯಲ್ಲಿ ಪಡೆದ ಅನುಭವವನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಶಿಕ್ಷಕರು ನಾವಾಗಬೇಕು. ಸತತ ಅಧ್ಯಯನ ಹಾಗೂ ನವೀನ ಬೋಧನಾ ವಿಧಾನ ಅತಿ ಮುಖ್ಯವಾಗಿದೆ ಎಂದು ಹೇಳಿದರು.

ಡಿ.ಎಲ್.ಇಡಿ ಕಾಲೇಜಿನ ಉಪನ್ಯಾಸಕ ಸಾಬಯ್ಯ ರಾಯಪ್ಪನೋರ, ಶಿಕ್ಷಕರಾದ ತಾಯಪ್ಪ, ಪ್ರೀತಿ, ಅತಿಥಿ ಶಿಕ್ಷಕರಾದ ಕವಿತಾ, ಮಂಜುಳಾ, ಶಿಕ್ಷಕ ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.

## ಅಕ್ರಮವಾಗಿ 35 ಲೀ ಬೆಲ್ಲದ ಕೊಳೆ ಮತ್ತು 12 ಕಳ್ಳಬಟ್ಟಿ ಜಪ್ತಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 13, ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ನಕಲಿ ಮದ್ಯ, ಅಕ್ರಮ ಮದ್ಯ, ಕಲಬೆರಕೆ ಸೇಂದಿ, ಕಳ್ಳಭಟ್ಟಿ ಸಾರಾಯಿ ಹಾಗೂ ಇತರೆ ಅಬಕಾರಿ ಅಕ್ರಮ ಪದಾರ್ಥಗಳ ತಯಾರಿಕೆ ಸಾಗಾಣಿಕೆ ಸಂಗ್ರಹಣೆ ಹಾಗೂ ಮಾರಾಟಗಳಂತಹ ಅಕ್ರಮ ಚಟುವಟಿಕೆಗಳು ನಡೆ–ಯದಂತೆ, ತಡೆಗಟ್ಟಲು ಜಿಲ್ಲೆ ಮತ್ತು ತಾಲ್ಲೂಕಿನಾದ್ಯಂತ ವಿಶೇಷ ತನಿಖಾ ತಂಡಗಳನ್ನು ರಚಿಸಿಕೊಂಡು ಜಾರಿ ಮತ್ತು ತನಿಖೆಯನ್ನು ಕೈಗೊಳ್ಳುತ್ತಿರುವಾಗ ಅಬಕಾರಿ ಅಕ್ರಮಗಳು ಕಂಡುಬಂದಿರುವುದರಿಂದ ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದೆ ಅಕ್ರಮವಾಗಿ 35 ಲೀ ಬೆಲ್ಲದ ಕೊಳೆ ಮತ್ತು 12 ಕಳ್ಳಬಟ್ಟಿ ಮದ್ಯ ಜಪ್ತಿ ಮಾಡಲಾಗಿದೆ ಎಂದು ಯಾದಗಿರಿ ಅಬಕಾರಿ ಉಪ ಆಯುಕ್ತರು ಶಾರದಾ ಸಿ.ಕೋಲಕಾರ ಅವರು ತಿಳಿಸಿದ್ದಾರೆ.

ಪ್ರಕರಣ ಸಂ.2, 2025ರ ಜನವರಿ 10 ರಂದು ಅಬಕಾರಿ ಜಂಟಿ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ ಹಾಗೂ ಶ್ರೀಮತಿ ಶಾರದಾ ಸಿ. ಕೋಲಕಾರ ಅಬಕಾರಿ ಉಪ ಆಯುಕ್ತರು, ಯಾದಗಿರಿ ಅವರ ನಿರ್ದೇಶನದ ಮೇರೆಗೆ ಶ್ರೀ ಹರ್ಷರಾಜ್ ಬಿ. ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ ಶಹಾಪೂರ ಅವರ ಮಾರ್ಗದರ್ಶನದಲ್ಲಿ ಖಚಿತ ಭಾತ್ಮಿಯ ಮೇರೆಗೆ ಶ್ರೀ ಜಟ್ಟಪ್ಪ ಬೇಲೂರು. ಅಬಕಾರಿ ನಿರೀಕ್ಷಕರು ಮತ್ತು ಶ್ರೀ ಸುರೇಶ ಮಳೇಕರ್ ಅಬಕಾರಿ ಉಪ ನಿರೀಕ್ಷಕರು, ಶಹಾಪುರ ಉಪ ವಿಭಾಗ ಶಹಾಪುರ, ಅಬಕಾರಿ ಮುಖ್ಯ ಪೇದೆಯಾದ ಶ್ರೀ ಮಡಿವಾಳ, ವಾಹನ ಚಾಲಕರಾದ ಶ್ರೀ ಮಲ್ಲಪ್ಪ, ಗೃಹ ರಕ್ಷಕದಳ ಸಿಬ್ಬಂದಿಯಾದ ಶ್ರೀ ದೇವಿಂದ್ರಪ್ಪ, ಶ್ರೀ ವಿಕ್ರಂ ಮತ್ತು ಕು. ಪ್ರೇಮಾ ಸಿಬ್ಬಂದಿಯವರೊಂದಿಗೆ ಕೂಡಿ–ಕೊಂಡು ಯಾದಗಿರಿ ಜಿಲ್ಲೆಯ ಗುರುಮಿಟ್ಕಲ್ ತಾಲೂಕಿನ ಯಂಪಾಡ ತಾಂಡದ ಸುಭಾಷ್ ನಗರ ದಲ್ಲಿನ ಶಾಂತಿಬಾಯಿ ಗಂಡ ಚಂದ್ರಾಮ್ ಎಂಬುವಳಿಗೆ ಸೇರಿದ ಮನೆಯಲ್ಲಿ ಅಕ್ರಮವಾಗಿ 35 ಲೀ ಬೆಲ್ಲದ ಕೊಳೆ ಮತ್ತು 12 ಕಳ್ಳಭಟ್ಟಿ ಸಾರಾಯಿನ್ನು ತಯಾರಿಸಿ ತನ್ನ ವಾಸದ ಮನೆಯಲ್ಲಿ ಮಾರಾಟ ಮಾಡಲು ಸಂಗ್ರಹಿಸಿಟ್ಟಿದ್ದು, ಸದರಿ ಆರೋಪಿಗಳ ಮನೆಯ ಮೇಲೆ ಉಪ ವಿಭಾಗ ಸಿಬ್ಬಂದಿಯೊಂದಿಗೆ ಅಬಕಾರಿ ದಾಳಿ ಮಾಡಿ, ದಾಳಿ ಸಮಯಕ್ಕೆ ಸದರಿ ಆರೋಪಿತಳು ನಾಪತ್ತೆಯಾಗಿದ್ದು, ಆತಳ ವಿರುದ್ಧ ಶ್ರೀ ಜಟ್ಟಪ್ಪ ಬೇಲೂರು. ಅಬಕಾರಿ ನಿರೀಕ್ಷಕರು ಶಹಾಪುರ ಉಪ ವಿಭಾಗ ಶಹಾಪುರ ರವರು ಪ್ರಕರಣವನ್ನು ದಾಖಲಿಸಿಕೊಂಡಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೋಮಾತೆ ಹಸುಗಳ ಕೆಚ್ಚಲು ಕತ್ತರಿಸಿರುವುದು ಪೈಶಾಚಿಕ ಕೃತ್ಯ : ಡಾ ಅಂಬಾರಾಯ ಅಷ್ಠಗಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.13:ಗೋಮಾತೆ ಎಂದು ಪೂಜಿಸಲ್ಪಡುವ ಹಸುಗಳ ಕೆಚ್ಚಲನ್ನು ಕತ್ತರಿಸಿರುವುದು ಪೈಶಾಚಿಕ, ಹೇಯ ಮತ್ತು ಅಮಾನುಷ ಕೃತ್ಯ ಎಂದು ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಡಾ. ಅಂಬಾರಾಯ ಅಷ್ಠಗಿ ಖಂಡಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ ತಾತ್ಸಾರ ಧೋರಣೆ ಅನುಸರಿಸುತ್ತಿದೆ. ಮೊನ್ನೆಯಷ್ಟೇ ಗೋಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಪ್ರಕಟಿಸಿರುವುದು ಇದಕ್ಕೆ ತಾಜಾ ಉದಾಹರಣೆಯಾಗಿದೆ.



ಇರಿಯುವುದು, ಕತ್ತರಿಸುವುದನ್ನು ಕೇಳಿದ್ದೇವೆ, ಆದರೆ ಮಾತೃ ಕೊರತೆ ನೀಗಿಸಲು ಕ್ಷೀರಧಾರೆ ಹರಿಸುವ ಕೆಚ್ಚಲನ್ನೇ ಕತ್ತರಿಸುವಷ್ಟು ಪರಮ ನೀಚ ಕೃತ್ಯಕ್ಕೆ ಇಳಿದಿರುವ ಘಟನೆ ಕರ್ನಾಟಕದ ರಾಜಧಾನಿಯಲ್ಲೇ ನಡೆಯುತ್ತಿದೆ ಎಂದರೆ ಇದರ ಹಿಂದಿರುವ ಕುಮ್ಮಕ್ಕಿನ ಶಕ್ತಿಯಾವುದು ಎನ್ನುವುದು ಊಹಿಸಿಕೊಳ್ಳದಷ್ಟು ಕರುನಾಡಿನ ಜನತೆ ಮುಗ್ಧರಲ್ಲ, ಈ ರಾಜ್ಯ ಆಳುತ್ತಿರುವವರ ಮನಸ್ಥಿತಿ ಯಾರ ಪರವಿದೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ ಎಂದು ಡಾ ಅಂಬಾರಾಯ ಅಷ್ಠಗಿ ಕುಟುಕಿದ್ದಾರೆ. ದಿನದಿಂದ ದಿನಕ್ಕೆ ಜನರ ಮೇಲೆ ಇದೀಗ ಪ್ರಾಣಿ ಸಂಕುಲದ ಮೇಲೆ ನಡೆಯುತ್ತಿರುವ ಅಟ್ಟಹಾಸ ಮೇರೆ ಮೀರುತ್ತಿದೆ. ಜನರ ತಾಳ್ಮೆಯ ಕಟ್ಟೆ ಒಡೆಯುವ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ಎಚ್ಚೆತ್ತುಕೊಂಡು ಇಂತಹ ಪೈಶಾಚಿಕ ಕೃತ್ಯಗಳ ಹಿಂದಿರುವ ಶಕ್ತಿಯನ್ನು ಬಗ್ಗು ಬಡಿದು ಈ ರೀತಿಯ ಅಮಾನುಷ ಕೃತ್ಯಗಳಿಗೆ ಕಡಿವಾಣ ಹಾಕಬೇಕೇಂದು ಡಾ ಅಂಬಾರಾಯ ಅಷ್ಠಗಿ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

# ಮೂಲ ಸೌಕರ್ಯ ವಂಚಿತ ಬಂದಳ್ಳಿ ಏಕಲವ್ಯ ಮಾದರಿ ವಸತಿ ಶಾಲೆ ಪ್ರತಿಭಟನೆಗಳಿದ ವಿದ್ಯಾರ್ಥಿಗಳು ಡೀಸಿ ಬರುವವರೆಗೂ ಕದಲಲ್ಲ ಎಂದು ಪಟ್ಟು

(ಎಂ ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಬಂದಳ್ಳಿ ಗ್ರಾಮದಲ್ಲಿ ಬರುವ ಪೂರ್ಣ ಪ್ರಮಾಣದ ವಸತಿ ನಿಲಯಗಳು

ಆರಂಭವಾಗಿದ್ದರೂ ಮೂಲಭೂತ ಸೌಕರ್ಯದಿಂದ ಸಂಪೂರ್ಣ ವಂಚಿತವಾಗಿದೆ.

ಸೌಲಭ್ಯ ಒದಗಿಸುವಲ್ಲಿ ಅಧಿಕಾರಿಗಳು ಮುಂದಾಗಿಲ್ಲ. ವಸತಿ ನಿಲಯಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ. ಆದರೆ, ವಿದ್ಯಾರ್ಥಿಗಳ ಗೋಳು ಹೇಳತೀರದಾಗಿದೆ.



ಒಂದೊಂದು ಕಡೆ ಒಂದೊಂದು ಸಮಸ್ಯೆ ಕಂಡು ಬರುತ್ತಿದೆ. ಊಟ, ಸೋಪ್, ಡ್ರೆಸ್ , ಟಾಯ್ಲೆಟ್ ಆಟದ ಕಿಟ್, ನೀರಿನ ಸೌಲಭ್ಯ, ಬೆಡ್, ಕೋಣೆಗಳ ಕೊರತೆ, ಶೌಚಾಲಯ, ಕೋಣೆ, ವಿದ್ಯುತ್ ಹೀಗೆ ಸಮಸ್ಯೆಗಳ ಪಟ್ಟಿ ದೊಡ್ಡದಿದೆ.

ಊಟದ ವ್ಯವಸ್ಥೆ ಸರಿಯಿಲ್ಲ ಎಂದು ಇಂದು ಏಕಲವ್ಯ ವಸತಿ ಶಾಲೆಯಿಂದ ಮಕ್ಕಳು ಕಾಲುನಡಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದರು, ಶಾಲಾ ಮಕ್ಕಳ ಆಗಮನದಿಂದ ಎಚ್ಚೆತ್ತ ಅಧಿಕಾರಿಗಳು ಏಕ ಎಕಿ ಮಕ್ಕಳ ಹತ್ತಿರ ಬಂದು ಸಮಸ್ಯೆ ಪರಿಹಾರ ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ.

ಅಧಿಕಾರಿಗಳು ಪ್ರತಿ ಬಾರಿ ಇದೆ ಮಾತನ್ನು ಹೇಳುತ್ತಾರೆ ಆದರೆ ಯಾವುದೇ ಒಂದು ಕೆಲಸ ಸರಿಯಾದ ರೀತಿಯಲ್ಲಿ ಮಾಡುವುದಿಲ್ಲ, ವಾರ್ಡನ್ ಆಗ್ಲಿ ಅಥವಾ ಅಡುಗೆ ಮಾಡುವವರಾಗಲಿ ಅಧಿಕಾರಿಗಳ ಮಾತೆ ಕೇಳುವುದಿಲ್ಲ.

ಅಧಿಕಾರಿಗಳು ಬರುವ ದಿನ ಒಳ್ಳೆಯ ಊಟ ನೀಡುತ್ತಾರೆ ಅಧಿಕಾರಿಗಳು ಬಂದು ಹೋದ ನಂತರ ಮತ್ತೆ ನಮಗೆ ಅದೇ ಪರಿಸ್ಥಿತಿ ಎದುರಾಗುತ್ತೆ, ನೀವೇ ಸಾಕಷ್ಟು ಬಾರಿ ಬಂದಿದ್ದೀರಿ ಆದರೆ ಇಲ್ಲಿವರೆಗೆ ನಮ್ಮ ಸಮಸ್ಯೆಗೆ ಯಾವುದೇ ಪರಿಹಾರ ಸಿಕ್ಕಿಲ್ಲ ಎಂದು ಜಿಲ್ಲಾ ಪರಿಶಿಷ್ಟವರ್ಗಗಳ ಕಲ್ಯಾಣ ಅಧಿಕಾರಿ ಸಿದ್ದಪ್ಪ ಅಣಬಿ ಅಧಿಕಾರಿಗೆ ಮರು ಪ್ರಶ್ನೆ ಹಾಕಿದ ವಿದ್ಯಾರ್ಥಿಗಳು,

ವಿದ್ಯಾರ್ಥಿಗಳ ಮರು ಪ್ರಶ್ನೆಗೆ ತಬ್ಬಿಬ್ಬದ ಅಧಿಕಾರಿ

ಇನ್ನು ವಸತಿ ಶಾಲೆಯ ವಾರ್ಡನ್ ಗಳು ತಾವು ಆಡಿದ್ದೆ ಆಟ ತಾವು ನಡೆದಿದ್ದೇ ದಾರಿಯನ್ನು ರೀತಿಯಲ್ಲಿ ವರ್ತನೆ ಮಾಡುತ್ತಾರೆ, ಡಿಪ್ಟೇಶನ್ ಇರುವ ವಾರ್ಡನ್ ವಾರಕ್ಕೊಂದು ಬಾರಿ ಬಂದು ನಮ್ಮನ್ನೇ ಬೈದು ಹೋಗುತ್ತಾನೆ ನಮ್ಮ ಸಮಸ್ಯೆಯನ್ನು ಯಾರು ಪರಿಹರಿಸುತ್ತಿಲ್ಲವೆಂದು ಮಕ್ಕಳು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಪರಿಶಿಷ್ಟವರ್ಗಗಳ ಕಲ್ಯಾಣ ಅಧಿಕಾರಿ ಸಿದ್ದಪ್ಪ ಅಣಬಿ ಅವರ ಭರವಸೆಗೂ ಕ್ಯಾರ ಎನ್ನದ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳಿಗೆ ಭೇಟಿಯಾಗುವರೆಗೂ ನಾವು ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತಿದ್ದಾರೆ.

# ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲರವರ ಪ್ರಾಣ ಉಳಿಸಲು ಕ್ರಮಕ್ಕೆ ಆಗ್ರಹ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,: ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ಇಂದು ನಗರದ ಜಿಲ್ಲಾಧಿಕಾರಿ ಕಚೇರಿಯ ಬಳಿ ಪ್ರತಿಭಟನೆ ಮಾಡಲಾಯಿತು.

ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರು ಮಾತನಾಡುತ್ತಾ ಐತಿಹಾಸಿಕ ದೆಹಲಿ ರೈತ ಹೋರಾಟದ ವಾಪಸ್ಸಾತಿ ಸಂದರ್ಭದಲ್ಲಿ ನೀಡಿದ್ದ ಲಿಖಿತ ಭರವಸೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಮರಣಾಂತ ಉಪವಾಸ ಕುಳಿತಿರುವ ಹಿರಿಯ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲರವರ ಪ್ರಾಣ ಉಳಿಸಲು ತಕ್ಷಣ ಕೇಂದ್ರ ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹಿಸಿದರು.

ಹಾಗೂ ಪ್ರಮುಖ ಬೇಡಿಕೆಗಳ ಹಕ್ಕೋತ್ತಾಯ ಮಾಡಿದರು.

ಹಿರಿಯ ರೈತ ನಾಯಕ ಶ್ರೀ ಜಗಜಿತ್ ಸಿಂಗ್ ದಲ್ಲೇವಾಲರವರ ಪ್ರಾಣ ಉಳಿಸಲು ಕ್ರಮ ವಹಿಸಬೇಕು ಕೂಡಲೇ ಸಂಯುಕ್ತ ಕಿಸಾನ್ ಮೋರ್ಚಾ(ಎಸ್ ಕೆ ಎಂ) ನಾಯಕತ್ವದ ಜೊತೆ ಹಾಗೂ ದೆಹಲಿ ಗಡಿಗಳಲ್ಲಿ ಹೋರಾಟ ನಿರತರ ಜೊತೆ ಮಾತುಕತೆ ಆರಂಭಿಸಬೇಕು, ಎಲ್ಲಾ ರೈತರ ಕೃಷಿ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆ ಖಾತರಿ ನೀಡುವ ಕಾನೂನು ಜಾರಿ ಮಾಡಬೇಕು, ಎಲ್ಲಾ ರೈತರ ಎಲ್ಲಾ ರೀತಿಯ ಕೃಷಿ ಸಾಲಗಳನ್ನು ಮನ್ನಾ ಮಾಡಬೇಕು,.ವಿದ್ಯುತ್ ಖಾಸಗೀಕರಣ ಮಾಡಬಾರದು. ವಿವಿಧ ಕಡೆ ನಡೆಯುತ್ತಿರುವ ಖಾಸಗೀಕರಣ ಹಾಗೂ ಪಂಪ್ ಸೆಟ್ ಮೀಟರೀಕರಣದ ಪ್ರಯತ್ನ ಕೂಡಲೇ ನಿಲ್ಲಿಸಬೇಕು. 60 ವರ್ಷ ದಾಟಿರುವ ಎಲ್ಲಾ ಕೃಷಿಕರಿಗೆ 5000 ರೂ ಮಾಸಿಕ ಪಿಂಚಣಿ ನೀಡಬೇಕು,.ಐತಿಹಾಸಿಕ ದೆಹಲಿ ರೈತ ಹೋರಾಟ ಮುಂದಿಟ್ಟಿದ್ದ ಎಲ್ಲಾ ಹಕ್ಕೋತ್ತಾಯಗಳನ್ನು ಈಡೇರಿಸಬೇಕು, ರೈತ ವಿರೋಧಿ, ಕರಾಳ ಕೃಷಿ ಕಾಯ್ದೆಯ ತದ್ರೂಪಾಗಿರುವ ಕೃಷಿ ಮಾರುಕಟ್ಟೆ ರಾಷ್ಟ್ರೀಯ ಚೌಕಟ್ಟು ಧೋರಣೆ ವಾಪಸ್ಸು ಪಡೆಯಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಖಂಡರರಾದ ಗೋವಿಂದ್, ಶಿವಶಂಕರ್ , ಲೇಪಾಕ್ಷಿ, ಸಂಗನಕಲ್ಲು ಕೃಷ್ಣಪ್ಪ ವಸಂತ ಕಾಳೆ , ಅರುಣ , ಗುರಳ್ಳಿ ರಾಜ, ಸೇರಿದಂತೆ ಹಲವಾರು ನಾಯಕರು ಉಪಸ್ಥಿತರಿದ್ದರು

# ಸ್ವಾಮಿ ವಿವೇಕಾನಂದರು ಪ್ರಪಂಚ ಕಂಡ ಮಹಾನ್ ತತ್ವಜ್ಞಾನಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.13:ಸ್ವಾಮಿ ವಿವೇಕಾನಂದರು ಪ್ರಪಂಚ ಕಂಡ ಮಹಾನ್ ತತ್ವಜ್ಞಾನಿಗಳಲ್ಲೊಬ್ಬರು. ಎಲ್ಲ ಕಾಲದ ಯುವ ಜನಾಂಗಕ್ಕೆ ಸ್ಫೂರ್ತಿ ತುಂಬುವ ಧೀಮಂತ ಶಕ್ತಿ. ಅವರ ಸಂದೇಶಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಂಡರೆ ಯಶಸ್ಸು ಅವರನ್ನು ಹಿಂಬಾಲಿಸುತ್ತದೆ ಎಂದು ಸಿದ್ದಪ್ಪ ಭಗವತಿ ಹೇಳಿದರು.

ನಗರದ ರಾಮ ಮಂದಿರ ಸಮೀಪವಿರುವ ವಿವೇಕಾನಂದ ವಿದ್ಯಾ ನಿಕೇತನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ನಿಮಿತ್ತ, ರಾಷ್ಟ್ರೀಯ ಯುವ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿದ್ದಪ್ಪ ಭಗವತಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ವಿವೇಕಾನಂದರ ತತ್ವಾದರ್ಶಗಳನ್ನು ಪ್ರತಿ ವಿದ್ಯಾರ್ಥಿಯೂ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ಸನ್ಮಾರ್ಗದಲ್ಲಿ ನಡೆದರೆ ಸುಲಭವಾಗಿ ತಮ್ಮ ಗುರಿ ತಲುಪಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ನಂತರ ಮಕ್ಕಳಿಗೆ ವಿವೇಕಾನಂದರ ಜೀವನಾಧಾರಿತ ಕಿರುಚಿತ್ರ ತೋರಿಸಲಾಯಿತು ಜೊತೆಗೆ ಸರ್ವ ಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣವನ್ನು ಕೇಳಿಸಲಾಯಿತು.

ಕಾರ್ಯಕ್ರಮದಲ್ಲಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಸುವರ್ಣ ಭಗವತಿ, ಪ್ರಾಂಶುಪಾಲ ಸಿದ್ದಪ್ಪ ಭಗವತಿ, ಮುಖ್ಯಗುರು ಅಂಬಿಕಾ ರೆಡ್ಡಿ, ಶೈಕ್ಷಣಿಕ ಸಂಯೋಜಕಿ ಸುಮಾ ಭಗವತಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕಮಲನಗರ ಪೊಲೀಸರ ಯಶಸ್ವಿ ಕಾರ್ಯಾಚರಣೆ ಕಳೆದ ಎತ್ತುಗಳನ್ನು ಮರಳಿ ರೈತರಿಗೆ ಒಪ್ಪಿಸಿದ್ದಾರೆ:ಶಿವಾನಂದ ಪವಾಡಶೆಟ್ಟಿ ಮೆಚ್ಚುಗೆ




ಮಲ್ಲಮ್ಮ ನುಡಿ ವಾರ್ತೆ

(ಪರಮೇಶ ರಾಂಪುರೆ)

ಕಮಲನಗರ: ಕಳೆದ ವಾರ ಸತೀಷ ಪಾಂಚಾವರೆ ಅವರು ಹೊಲದಲ್ಲಿ ಕಟ್ಟಿದ ಎತ್ತುಗಳನ್ನು ಕಳೆದು ಹೋಗಿರುವ ಬಗ್ಗೆ ಕಮಲನಗರ ಪೊಲೀಸ ಠಾಣೆಯಲ್ಲಿ ದೂರು ನೀಡಿದರು. ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿ ಪೊಲೀಸರು, ಎತ್ತುಗಳನ್ನು ಹುಡುಕಿ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಪ್ರಕರಣದಲ್ಲಿ ಕಳುವಾದ ಎರಡು ಎತ್ತುಗಳ ಹಾಗೂ ಆರೋಪಿತರ ಪತ್ತೆ ಕುರಿತು ಮಾನ್ಯ ಪೊಲೀಸ ಅಧೀಕ್ಷಕರು ಬೀದರ ಮತ್ತು ಹೆಚ್ಚುವರಿ ಪೊಲೀಸ ಅಧೀಕ್ಷಕರು ಬೀದರರವರ ನಿರ್ದೇಶನದಂತೆ, ಶ್ರೀ ಶಿವಾನಂದ ಪವಾಡಶೆಟ್ಟಿ ಮಾನ್ಯ ಪೊಲೀಸ ಉಪಾಧೀಕ್ಷಕರು ಭಾಲ್ಕಿ ಉಪ ವಿಭಾಗ ಮತ್ತು ಶ್ರೀ ಅಮರಪ್ಪ ಶಿವಬಲ್ ಕಮಲನಗರ ವೃತ್ತ ರವರ ಸೂಕ್ತ ಮಾರ್ಗದರ್ಶದಲ್ಲಿ ಕಾರ್ಯ ಪ್ರವೃತ್ತರಾದ ಕಮಲನಗರ ಪೊಲೀಸ ಠಾಣೆಯ ಶ್ರೀ ಚಂದ್ರಶೇಖರ ಪಿ.ಎಸ್.ಐ (ಕಾ.ಸೂ), ಶ್ರೀ ಬಾಲಾಜಿ ಪಿ.ಎಸ್.ಐ (ತನಿಖೆ) ಹಾಗೂ ಸಿಬ್ಬಂದಿಯವರಾದ ಇಮಾನ ಸಿ.ಹೆಚ್.ಸಿ–016, ಲೋಕೇಶ ಸಿ.ಹೆಚ್. ೦ಟಿ 915. ಪ್ರಶಾಂತ ಸಿಪಿಸಿ – 1155. ಸಂತೋಷಕುಮಾರ ಸಿಪಿಸಿ–1290, ಪರಶುರಾಮ ಸಿಪಿಸಿ–1736, ಹಾಗೂ ವಸಂತ ಎ.ಆರ್. ಎಸ್.ಐ ರವರುಗಳು ಸದರಿ ಪ್ರಕರಣದಲ್ಲಿನ ಆರೋಪಿತರನ್ನು ದಿನಾಂಕ: 13/01/2025 ರಂದು ಪತ್ತೆ ಮಾಡಿ ಆರೋಪಿತರಿಂದ ಪ್ರಕರಣದಲ್ಲಿ ಕಳ್ಳುವಾದ ಎರಡು ಎತ್ತುಗಳು ಅ.ಕೀ.–1,00,000/– ರೂಪಾಯಿದಷ್ಟು ಜಪ್ತಿ ಮಾಡಿ ಆರೋಪಿ ಹಾಗೂ ಸದರಿ ಮುದ್ದೆ ಮಾಲನ್ನು ವಶಕ್ಕೆ ಪಡೆದುಕೊಂಡು ನಂತರ ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡು ಜಪ್ತಿ ಮಾಡಿರುವ ಎರಡು ಎತ್ತುಗಳನ್ನು ಫಿರ್ಯಾದಿಗೆ ಒಪ್ಪಿಸಿದ್ದು, ಸದರಿ ತಂಡದ ಯಶಸ್ವಿ ಕಾರ್ಯವನ್ನು ಮಾನ್ಯ ಪೊಲೀಸ್ ಅಧೀಕ್ಷಕರು ಬೀದರ ರವರು ಶ್ಲಾಘಿಸಿರುತ್ತಾರೆ.

# ಜನವರಿ 17 ರಿಂದ 20ರವರೆಗೆ ನಗರದಲ್ಲಿ ಕಲ್ಯಾಣ ಕರ್ನಾಟಕ ವಿಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ:ಜ:13:ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ , ಜಿಲ್ಲಾ ಸಂಸ್ಥೆ ಯಾದಗಿರಿ, ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಕಲ್ಯಾಣ ಕರ್ನಾಟಕ ವಿಭಾಗದ ದ್ವಿತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಇದೇ ಜನವರಿ 17 ರಿಂದ 20ರವರೆಗೆ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಜನವರಿ 17 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇದರ ಉದ್ಘಾಟನೆ ನಡೆಯಲಿದ್ದು, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಈ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಗೃಹ ಸಚಿವರು ಹಾಗೂ ಕರ್ನಾಟಕ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತರು ಪಿ.ಜಿ.ಆರ್.ಸಿಂಧ್ಯ ಜಾಂಬೋರೇಟ್ ಕೈಪಿಡಿ ಬಿಡುಗಡೆ ಮಾಡುವರು. ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಅವರು ಅಧ್ಯಕ್ಷತೆ ವಹಿಸುವರು.

ಯಾದಗಿರಿ ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಧ್ಯಕ್ಷರು ಸುರೇಶ್ ಆರ್.ಸಜ್ಜನ್ ನೆನಪಿನ ಕಾಣಿಕೆ ವಿತರಿಸುವರು. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಖಾತೆ ಸಚಿವ ಶರಣ ಪ್ರಕಾಶ್ ಪಾಟೀಲ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಶ್ರೀ ಪ್ರೀಯಾಂಕ ಖರ್ಗೆ, ಅರಣ್ಯ ಪರಿಸರ, ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ , ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಶಿವರಾಜ್ ತಂಗಡಗಿ, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವರಾದ ಎನ್. ಎಸ್.ಬೋಸರಾಜು, ರಾಯಚೂರು ಲೋಕಸಭಾ ಕ್ಷೇತ್ರದ ಸಂಸದ ಜಿ.ಕುಮಾರನಾಯಕ, ಕಲ್ಬುರ್ಗಿ ಲೋಕಸಭಾ ಕ್ಷೇತ್ರದ ಸಂಸದ ರಾಧಾಕೃಷ್ಣದೊಡಮನಿ, ಪೌರಾಡಳಿತ ಹಾಗೂ ಹಜ್ ಖಾತೆ ಸಚಿವರಾದ ರಹೀಮ್ ಖಾನ್, ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯಸಿಂಗ್ ಧರ್ಮಸಿಂಗ್, ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ, ಬಿ.ಆರ್.ಪಾಟೀಲ್, ಕರ್ನಾಟಕ ವಿಧಾನ ಪರಿಷತ್ತು ವಿರೋದ ಪಕ್ಷದ ನಾಯಕರು. ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಬಿ.ಜಿ. ಪಾಟೀಲ್, ಚಂದ್ರಶೇಖರ ಬಿ.ಪಾಟೀಲ್, ಶಶಿಲ್ ನಮೋಶಿ, ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ, ಸುರಪುರ ಶಾಸಕ ರಾಜಾ ವೇಣುಗೋಪಾಲ್ ನಾಯಕ, ನಗರಸಭೆ ಅಧ್ಯಕ್ಷ ಲಲಿತಾ ಅನಪುರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವಿನಾಯಕ ಮಾಲಿಪಾಟೀಲ್ , ಜಿಲ್ಲಾಧಿಕಾರಿ ಡಾ.ಸುಶೀಲ. ಬಿ. ಜಿ.ಪಂ. ಸಿಇಓ ಲವೀಶ ಒರಡಿಯಾ, ಎಸ್.ಪಿ ಪೃಥ್ವಿಕ್ ಶಂಕರ್, ಕಲ್ಬುರ್ಗಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಡಾ.ಆಕಾಶ್ .ಎಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ವಿಶೇಷ ಆಹ್ವಾನಿತರಾಗಿ ಗಣ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿರುವರು. ಜನವರಿ 17ರಂದು ಬೆಳಿಗ್ಗೆ 7–30ಗಂ–ಟೆಗೆ ಜಾಂಬೋರೇಟ್ ಯಾಲಿಗೆ ಚಾಲನೆ ದೊರೆಯಲಿದೆ. ಜನವರಿ 17 ರಿಂದ 20ರವರೆಗೆ ಪ್ರತಿ ದಿನ ಮಕ್ಕಳ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ.

ಜನೆವರಿ 20ರಂದು ಸಂಜೆ 4 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಜಾಂಬೋರೇಟ್ ನ ಸಮಾರೋಪ

# ಸಂಕ್ರಾಂತಿ ಹಬ್ಬ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ತಾಲೂಕಿನ ಡಾ. ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆ ಹಾಗೂ ಶ್ರೀ ಗುರಪ್ಪಾ ಟೊಣ್ಣೆ ಪ್ರಾಥಮಿಕ ಶಾಲೆಯಲ್ಲಿ ಸಂಕ್ರಾಂತಿ ಹಬ್ಬ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ ಹಮ್ಮಿಕೊಳಲಾಯಿತು ಕ್ರಾಯಕ್ರಮದಲ್ಲಿ ಐದು ದಂಪತಿಗಳಿಗೆ ವಿಶೇಷ ಆಹ್ವಾನಿಸಲಾಗಿತ್ತು ಮತ್ತು ಮಕ್ಕಳ ಸಾಂಕ್ರತಿಕ ಕಾರ್ಯಕ್ರಮದೊಂದಿಗೆ ವಿಜ್ರಂಬಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷಿಯ ಸ್ಥಾನವಹಿಸಿದ ಶಾಲೆಯ ಆಡಳಿತಾಧಿಕಾರಿಗಳಾದ ಶ್ರೀ ಚನ್ನಬಸವ ಘಾಳೆಯವರು ಮಕ್ಕಳನ್ನು ಉದ್ದೇಶಿಸಿ ಮನುಷ್ಯನಿಗೆ ಶಾಂತೆ, ನೆಮ್ಮದಿಯನ್ನು ತರುವುದೇ ಧರ್ಮದ ಉದ್ದೇಶ ಎಂದಿದ್ದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಅವರು ಅನೆರುಕಾದ ಚಿಕಾಗೊ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಐತಿಹಾಸಿಕ ಭಾಷಣಕ್ಕೆ 125 ವರ್ಷ ತುಂಬುತ್ತಿದೆ ಹತ್ತೊಂಭತ್ತನೆ ಶತಮಾನದಲ್ಲಿ ಜಗತ್ತಿನ ಸನಾತನ ಧರ್ಮದ ಸಸ್ಯವನ್ನು ಎತ್ತಿಹಿಡಿಯಲು ಭಾರತದಲ್ಲಿ ಅವತರಿಸಿದ ಮಹಾ ಪುರುಷ ಸ್ವಾಮಿ ವಿವೇಕಾನಂದರು ಎಂದು ಹೇಳಿದರು. ಮತ್ತು ಸಂಕ್ರಾಂತಿ ಹಬ್ಬವನ್ನು ನಮ್ಮ ಶಾಲೆಯಲ್ಲಿ ಆಚರಿಸುವ ಮುಖಾಂತರ ನಮ್ಮ ಸಂಸ್ಕ ತಿಯನ್ನು ಉಳಿಸಿ ಬೆಳೆಸಬೇಕೆಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ನಿತೀನ ಪಾಂಡ್ರೆ ಉದ್ಯಮೆಗಳು ಉದಗಿರ ರವರು ನೆರವೆರಿಸಿದರು.

ಶಾಲೆಯ ಸಿಬ್ಬಂಧ್ದಿಗಳಾದ ಪಲ್ಲವಿ ನಾಯ್ಕು, ರಾಜೇಶ್ವರಿ ಬಿರಾದರ, ಪೂಜಾ ಬಿರಾದರ, ದಿವ್ಯಾ ನಾಯ್ಕು, ವಿಜಯಲಕ್ಷ್ಮಿ ಎಕಲಾರೆ, ರಾಗಿಣಿ ದೇಶಮುಖ, ಕಪಿಲ ಹೂಗಾರ, ಸುಭಾಷ ಧರಣೆ, ನಿಜಲಿಂಗಯ್ಯಾ ಸ್ವಾಮಿ ಅನೇಕ ಶಿಕ್ಷಕವೃಂದ ಉಪಸ್ಥಿತರಿದರು. ಕಾರ್ಯಕ್ರಮದಲ್ಲಿ ನಿರೂಪಣೆ ಶಾಲೆಯ ವಿದ್ಯಾರ್ಥಿಗಳಾದ ವೈಷ್ಣವಿ ಶಿವಕುಮಾರ, ಸೋನಿ ಮಲ್ಲಿಕಾರ್ಜುನ, ವಂದನಾರ್ಪಣೆಯನ್ನು ಶಾಲೆಯ ವಿದ್ಯಾರ್ಥಿ ಸೃಷ್ಟಿ ಅನುಪ ನೆರವೇರಿಸಿದರು.

# ಮೊಬೈಲ್ ಹ್ಯಾಕ್ ಮಾಡಿ ಪತ್ರಕರ್ತನಿಗೆ 1.50 ಲಕ್ಷ ರೂ.ವಂಚನೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.13– ಅಪರಿಚಿತ ವ್ಯಕ್ತಿಗಳು ಪತ್ರಕರ್ತರೊಬ್ಬರ ಮೊಬೈಲ್ ಹ್ಯಾಕ್ ಮಾಡಿ ಆರ್.ಬಿ.ಎಲ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮತ್ತು ಪರ್ಸನಲ್ ಲೋನ್ ಮುಖಾಂತರ 1,50,802 ರೂಪಾಯಿ ಪಡೆದುಕೊಂಡು ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಪತ್ರಕರ್ತ ರಾಜಕುಮಾರ ವಿಶ್ವನಾಥ ಹೇಮನೂರ (39) ಎಂಬುವವರಿಗೆ ವಂಚನೆ ಮಾಡಲಾಗಿದ್ದು, ಅವರು ಈ ಸಂಬಂಧ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

1210 ಗ್ರಾಂ ಗಾಂಜಾ ಜಪ್ತಿ

ನಗರದ ನೂರಾನಿ ಮಹೋಲ್ಲಾದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ರೋಜಾ ಪೊಲೀಸ್ ಠಾಣೆ ಪಿಐ ಅನೀಸ್ ಅಹಮದ್ ಎ.ಮುಜಾವರ್ ಮತ್ತು ಸಿಬ್ಬಂದಿಗಳಾದ ಭೀಮಾಶಂಕರ, ನಿತ್ಯಾನಂದ, ಲಕ್ಷ್ಮಿಕಾಂತ, ಹುಲಗಪ್ಪ ಅವರು ದಾಳಿ ನಡೆಸಿ ಜಂ ಜಂ ಕಾಲೋನಿಯ ಮೊಹಮ್ಮದ್ ಅಶ್ಫಾಕ್ (37) ಎಂಬಾತನನ್ನು ಬಂಧಿಸಿ 12,100 ರೂ.ಮೌಲ್ಯದ 1210 ಗ್ರಾಂ.ಗಾಂಜಾ ಜಪ್ತಿ ಮಾಡಿದ್ದಾರೆ. ರೋಜಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಾಲ್ವರು ಮಕ್ಕಳು ಜಲ ಸಮಾಧಿ

ಮಲ್ಲಮ್ಮ ನುಡಿ ವಾರ್ತೆ

ವಿಜಯಪುರ:ಜ.13:ನಾಲ್ಕು ಮಕ್ಕಳನ್ನು ಕಾಲುವೆಗೆ ಎಸೆದು ತಾನೂ ಕಾಲುವೆಗೆ ಹಾರಿ ತಾಯಿಯೊಬ್ಬಳು ಆತ್ಮಹತ್ಯೆಗೆ ಯತ್ನಿಸಿದ್ದು, ನಾಲ್ಕು ಮಕ್ಕಳು ಜಲಸಮಾಧಿಯಾಗಿದ್ದಾರೆ. ತಾಯಿಯನ್ನು ಸ್ಥಳೀಯರು ಕಾಪಾಡಿದ ಘಟನೆ ವಿಜಯಪುರ ಜಿಲ್ಲೆ ನಿಡಗುಂದಿ ತಾಲೂಕಿನ ಬೇನಾಳ ಬಳಿಯ ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಯಲ್ಲಿ ಸೋಮವಾರ ನಡೆದಿದೆ. ಕೊಲ್ಹಾರ ತಾಲ್ಲೂಕಿನ ತೆಲಗಿ ಗ್ರಾಮದ ತನು ನಿಂಗರಾಜ ಭಜಂತಿ (5), ರಕ್ಷಾ ನಿಂಗರಾಜ ಭಜಂತ್ರಿ (3), ಹಸೇನ ನಿಂಗರಾಜ ಭಜಂತ್ರಿ ಹಾಗೂ ಹುಸೇನ ನಿಂಗರಾಜ ಭಜಂತ್ರಿ (13 ತಿಂಗಳು) ಮೃತ ಮಕ್ಕಳು. ಮಕ್ಕಳ ತಾಯಿ ಭಾಗ್ಯ ಭಜಂತ್ರಿ ಎಂಬುವಳನ್ನು ಸ್ಥಳೀಯರು ಕಾಪಾಡಿದ್ದಾರೆ. ತಾಯಿ ಬದುಕುಳಿದಿದ್ದಾಳೆ. ಆಕೆಯ ನಾಲ್ವರು ಮಕ್ಕಳು ಜಲ ಸಮಾಧಿಯಾಗಿದ್ದಾರೆ. ಕೌಟುಂಬಿಕ ಕಾರಣವೇ ಘಟನೆಗೆ ಕಾರಣ ಎನ್ನಲಾಗಿದೆ.

# ಚೀನಾ ವೈರಸ್ ಮುಂಜಾಗ್ರತೆ ಅವಶ್ಯ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಜ.13:ಚೀನಾದಲ್ಲಿ ಹ್ಯುಮನ್ ಮೆಟಾನ್ಯೂಮೋ ವೈರಸ್ ರೋಗದ ಬಗ್ಗೆ ಭಯ ಪಡುವ ಅವಶ್ಯಕತೆ ಇಲ್ಲ. ಆದರೆ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಅವಶ್ಯವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳಸಭಾಂಗಣದಲ್ಲಿ ಜರುಗಿದ ಹ್ಯುಮನ್ ಮೆಟಾನ್ಯೂಮೋ ವೈರಸ್ ರೋಗದ ಮುಂಜಾಗ್ರತಾ ಕ್ರಮಗಳ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಭಾರತ ಸರಕಾರ ಈ ವೈರಸ್ ಬಗ್ಗೆ ವಿವರಣೆ ನೀಡಿದ್ದು, ಇದು ಒಂದು ಉಸಿರಾಟದ ತೊಂದರೆಯನ್ನು ಉಂಟು ಮಾಡುವ ವೈರಸ್ ಆಗಿದೆ. ಚಳಿಗಾಲದಲ್ಲಿ ಶೀತ ಮತ್ತು ಜ್ವರದ ಲಕ್ಷಣಗಳನ್ನು ಉಂಟು ಮಾಡುತ್ತಿದ್ದು, ಭಯ ಪಡದೇ ಮುಂಜಾಗ್ರತಾ ವಹಿಸುವುದು ಅವಶ್ಯವಾಗಿದೆ ಎಂದು ತಿಳಿಸಿದರು.

ವಿಶೇಷವಾಗಿ ಹಿರಿಯ ಮತ್ತು ಕಿರಿಯ ವಯಸ್ಕರಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಇಲ್ಲಿಯವರೆಗೆ ಬಾಗಲಕೋಟೆ ಜಿಲ್ಲೆಯಲ್ಲಿ ಹ್ಯುಮೆನ್ ಮೇಟಾ ನ್ಯೂವೋ ವೈರಸ್ ರೋಗದ ಪ್ರಕರಣಗಳು ವರದಿಯಾಗಿರುವದಿಲ್ಲ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ ಸಾಮಾನ್ಯ ಶೀತ ಅಂತಹ ಚಾಲ್ತಿಯಲ್ಲಿರುವ ಉಸಿರಾಟದ ಸೋಂಕುಗಳ ಅಂಕಿ ಅಂಶಗಳನ್ನು ವಿಶ್ಲೇಷಿಸಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಡಿಸೆಂಬರ 2024ರ ವರದಿಯಲ್ಲಿ ಪ್ರಕಾರಣಗಳ ಸಂಖ್ಯೆಯಲ್ಲಿ ಯಾವುದೇ ಗಮನಾರ್ಹ ಏರಿಕೆ ಕಂಡು ಬಂದಿರುವುದಿಲ್ಲ. ನಾಗರಿಕರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮತ್ತು ಸೋಂಕು ಹರಡುವದನ್ನು ತಡೆಗಟ್ಟಲು ಕೆಲವು ಅಂಶಗಳನ್ನು ಪಾಲಿಸುವುದು ಅವಶ್ಯವಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಲ್ಲಿಕಾರ್ಜುನ ಡಿ.ಎನ್ ಚೀನಾ ವೈರಸ್ ರೋಗದ ಬಗ್ಗೆ ಹಾಗೂ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಣೆ ನೀಡಿದರು. ಕೆಮ್ಮುವಾಗ, ಸೀನುವಾಗ ಮೂಗಿಗೆ ಕರವಸ್ತ್ರ ಅಥವಾ ಟಿಶ್ಯೂ ಪೇಪರ್ ಹಿಡಿಯಬೇಕು. ಸಾಬೂನು ಮತತು ನೀರಿನಿಂದ ಅಥವಾ ಸೈನಿಟೈಜರ್‌ನಿಂದ ಮೇಲಿಂದ ಮೇಲೆ ಕೈಗಳನ್ನು ತೊಳೆಯಬೇಕು. ಜನಸಂದನಿ ಇರುವ ಪ್ರದೇಶಗಳಿಂದ ದೂರ ಇರಬೇಕು. ಜ್ವರ ಕೆಮ್ಮು ಮತ್ತು ಶೀತವಿದ್ದಲ್ಲಿ ಸಾರ್ವಜನಿಕ ಸ್ಥಳಗಳಿಗೆ ಭೇಟಿ ತಡೆಯಬೇಕು. ಉತ್ತಮ ವಾತಾವರಣ ಇರುವ ಜಾಗಗಳಿಗೆ ಆದ್ಯತೆ ನೀಡಬೇಕು. ಸಾಕಷ್ಟು ನೀರು ಕುಡಿಯುವುದು ಹಾಗೂ ಪೌಷ್ಠಿಕ ಆಹಾರವನ್ನು ಸೇವಿಸಬೇಕು ಎಂದರು.

ಕರವಸ್ತ್ರ ಅಥವಾ ಟಿಶ್ಯೂ ಪೇಪರ್‌ನ್ನು ಮರು ಬಳಕೆ, ಅನಾರೋಗ್ಯದಿಂದ ಬಳಲುವ ಜನರೊಂದಿಗೆ ನಿಕಟ ಸಂಪರ್ಕ, ತಾವಲ್, ಲಿನಿನ್ ಹಂಚಿಕೊಳ್ಳುವು ಮಾಡಬಾರದು. ಕಣ್ಣು, ಮೂಗು ಹಾಗೂ ಬಾಯಿಯನ್ನು ಆಗಾಗ ಸ್ಪರ್ಶಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ಮಾಡಬಾರದು. ವೈದ್ಯರನ್ನು ಸಂಪರ್ಕಿಸದೇ ಸ್ವಔಷಧಿಗಳನ್ನು ತೆಗೆದುಕೊಳ್ಳಬಾರದು. ಸಾರ್ವಜನಿಕರು ಜ್ವರ, ಕೆಮ್ಮು, ನೆಗಡಿ ಕಂಡು ಬಂದಲ್ಲಿ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯಲು ತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ದಯಾನಂದ ಕರೇನ್ನವರ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಕುಸುಮಾ ಮಾಗಿ ಉಪಸ್ಥಿತರಿದ್ದರು.

# ಸಮಾನತೆಯ ಸಮಾಜ ನಿರ್ಮಾಣಕ್ಕೆ ಮುಂದಾಗಿ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಜ13 : ಎಲ್ಲರೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು ಎಂದು ಬಾಗಲಕೋಟೆ ಜಿಲ್ಲಾಧಿಕಾರಿ ಜಾನಕಿ ಕೆಎಂ ಹೇಳಿದರು.

ನವನಗರದ ಕಲಾಭವನದಲ್ಲಿ ನಡೆದ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಶ್ರೀ ಕಾಳಿದಾಸ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಮತ್ತು ಹೈಸ್ಕೂಲ್ ವಿಭಾಗದ 5ನೇ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಲ್ಲಿ ನೆರೆದಿರುವವರು ಪಾಲಕರು ಶಿಕ್ಷಕರು ವಿದ್ಯಾರ್ಥಿಗಳು ಎಲ್ಲರೂ ಒಂದೇ ಸಮಾಜದವರಲ್ಲ, ಎಲ್ಲರೂ ವಿವಿಧ ಸಮಾಜದವರಾಗಿದ್ದಿರಿ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಪಡೆದುಕೊಂಡು ಸಮಾನತೆಯ ಸಮಾಜ ನಿರ್ಮಾಣ ಮಾಡಲಿಕ್ಕೆ ಹೆಜ್ಜೆ ಹಾಕಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಜಿ. ಎಸ್. ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಎಸ್. ಬಡದಾನಿ, ಕಾರ್ಯದರ್ಶಿ ಟಿ. ಬಿ. ಕುರುಬರ, ನಿರ್ದೇಶಕರಾದ ಎನ್. ವೈ. ನೀಲಾರ್, ಎಸ್. ಎಸ್. ದೊಡ್ಡಮನಿ, ವಿ. ಎಂ. ಪಾಟೀಲ್, ಸಿಬಿಎಸ್‌ಸಿ ಶಾಲೆಯ ಪ್ರಾಂಶುಪಾಲ ಮೇಲ್ವಿನ್ ಬಾಬಿ ಮರ್ಜಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪೂಜಾರಿ, ಪ್ರೌಢಶಾಲೆಯ ಪ್ರಾಚಾರ್ಯ ವಿರಕ್ತಮಠ ಹಾಗೂ ಪದವಿ ಕಾಲೇಜಿನ ಪ್ರಾಚಾರ್ಯ ಆರ್. ಎಫ್. ಚವ್ಹಾಣ ಸೇರಿದಂತೆ ಶಿಕ್ಷಕರು ಸಿಬ್ಬಂದಿ ವರ್ಗ ಹಾಗೂ ಇತರರು ಉಪಸ್ಥಿತರಿದ್ದರು. ತದನಂತರದಲ್ಲಿ ಸುಮಾರು 5 ಗಂಟೆಗಳ ಕಾಲ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳು ಜರುಗಿದವು.

# ದೋಷಪೂರಿತ ವಾಹನ ಸೈಲೆನ್ಸ್‌ರಗಳ ನಾಶ



**ಮಲ್ಲಮ್ಮ ನುಡಿ ವಾರ್ತೆ**

ಶಿವಮೊಗ್ಗ,ಡಿ.29:ಸಾರ್ವಜನಿಕರ ಸಮ್ಮುಖದಲ್ಲಿಯೇ ಸಾವಿರಾರು ಹಾಫ್ ಹೆಲ್ಮೆಟ್, ದೋಷಪೂರಿತ ಬೈಕ್ ಸೈಲೆನ್ಸರ್ ಹಾಗೂ ಪ್ರಖರ ಬೆಳಕು ಹೊರಹೊಮ್ಮುವ ಎಲ್‌ಇಡಿ ಲೈಟ್ ಗಳ ಮೇಲೆ ಬುಲ್ಡೋಜರ್ ಹರಿಸಿ ಪೊಲೀಸರು ನಾಶಗೊಳಿಸಿದ ಘಟನೆ ಭದ್ರಾವತಿ ನಗರದ ರಂಗಪ್ಪ ಸರ್ಕಲ್ ನಲ್ಲಿ ನಡೆಯಿತು.

ಈ ಹಿಂದೆ ಭದ್ರಾವತಿ ನಗರದಲ್ಲಿ ನಡೆಸಿದ ವಿಶೇಷ ಕಾರ್ಯಾಚರಣೆ ವೇಳೆ, ಪೊಲೀಸರು ಸದರಿ ದೋಷಪೂರಿತ ವಸ್ತುಗಳನ್ನು ವಶಕ್ಕೆ ಪಡೆದಿದ್ದರು. ಸುಮಾರು 3000 ಸಾವಿರ ಹಾಫ್ ಹೆಲ್ಮೆಟ್, 20 ಸೈಲೆನ್ಸರ್, 50 ಪ್ರಕರ ಬೆಳಕಿನ ಲೈಟ್ ಗಳ ಮೇಲೆ ಬುಲ್ಡೋಜರ್ ಹರಿಸಿ ನಾಶಗೊಳಿಸಲಾಗಿದೆ ಎಂದು ಪೊಲೀಸ್ ಇಲಾಖೆಯು ಭಾನುವಾರ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ, ಸಂಚಾರಿ ನಿಯಮ ಪಾಲನೆ ಕುರಿತಂತೆ ನಾಗರೀಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪೊಲೀಸ್ ಇಲಾಖೆಯು, ಸಾರ್ವಜನಿಕರ ಸಮ್ಮುಖದಲ್ಲಿಯೇ ಬುಲ್ಡೋಜರ್ ಕಾರ್ಯಾಚರಣೆ ನಡೆಸಿತು.

ಇದನ್ನು ವೀಕ್ಷಿಸಲು ಸ್ಥಳದಲ್ಲಿ ನೂರಾರು ನಾಗರೀಕರು ನೆರೆದಿದ್ದರು..ಈ ಸಂದರ್ಭದಲ್ಲಿ ಜಿಲ್ಲಾ ರಕ್ಷಣಾಧಿಕಾರಿ ಜಿ ಕೆ ಮಿಥುನ್ ಕುಮಾರ್, ಹೆಚ್ಚುವರಿ ಎಸ್ಪಿ ಅನಿಲ್ ಕುಮಾರ್ ಭೂಮರೆಡ್ಡಿ, ಭದ್ರಾವತಿ ಡಿವೈಎಸ್ಪಿ ನಾಗರಾಜ್, ಇನ್ಸ್‌ಪೆಕ್ಟರ್ ಜಗದೀಶ್ ಹಂಚಿನಾಳ್, ನಾಗಮ್ಮ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳ ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಹುಮನಾಬಾದ:ತಾಲ್ಲೂಕಿನ ಕಠ್ಠಳ್ಳಿ ಗ್ರಾಮದ ಭವಾನಿ ಮಾತೆಯ ದೇವಸ್ಥಾನದ ಆವರಣದಲ್ಲಿ ಆಕಾಶ್ ಪವಿತ್ರರವರ 25ನೇ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತ್ತು. ಈ ಸಂದರ್ಭದಲ್ಲಿ ಬೀದರ ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ದಯಾನಂದ ಮೇತ್ರಿರವರು ಆಕಾಶ್‌ರವರಿಗೆ ಸನ್ಮಾನಿಸಿ ಕೇಕ್ ತಿನ್ನುಸುವ ಮೂಲಕ ಜನ್ಮದಿನದ ಶುಭಾಶಯ ಕೋರಿದರು. ಭೀಮ ಆರ್ಮಿ ತಾಲ್ಲೂಕಾ ಅಧ್ಯಕ್ಷ ಅನೀಲ್ ದೊಡ್ಡಿ, ಸೋಮು ಡಾಂಗೆ, ಚವ್ಹಾಣ ಹಾಗೂ ಇತರರು ಇದ್ದರು. (ಮಲ್ಲಮ್ಮ ನುಡಿ ಚಿತ್ರ)

# ಆಪ್ ಸರ್ಕಾರಕ್ಕೆ ದೆಹಲಿ ಕೋರ್ಟ್ ತರಾಟೆ

**ಮಲ್ಲಮ್ಮ ನುಡಿ ವಾರ್ತೆ**




ನವದೆಹಲಿ, ಜ.13– ಕಂಟ್ರೋಲರ್ ಮತ್ತು ಆಡಿಟರ್ ಜನರಲ್ –ಸಿಎಜಿ) ವರದಿ ಮಂಡನೆ ವಿಳಂಬಗೊಳಿಸಿದ ದೆಹಲಿ ಸರ್ಕಾರದ ಕ್ರಮವನ್ನು ಉಚ್ಚ ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿದೆ.

ಸಿಎಜಿ ವರದಿ ನಿಭಾಯಿಸುವ ಬಗ್ಗೆ ದೆಹಲಿ ಹೈಕೋರ್ಟ್ ಆಮ್ ಆದ್ಮಿ ಪಕ್ಷ ನೇತೃತ್ವದ ದೆಹಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದು ನಿಮ್ಮ ಕಾಲು ನೀವೇ ಎಳೆದುಕೊಂಡಿದ್ದೀರಿ ಎಂದು ಹೇಳಿದೆ.

ನ್ಯಾಯಮೂರ್ತಿ ಸಚಿನ್ ದತ್ತಾ ಅವರಿದ್ದ ಏಕಸದಸ್ಯ ಪೀಠ, ವಿಧಾನಸಭೆ ಅಧಿವೇಶನ ನಡೆಯದಂತೆ ಸರ್ಕಾರ ತನ್ನ ಕಾಲುಗಳನ್ನು ಎಳೆದಿದೆ ಎಂದು ಹೇಳಿದೆ

“ನೀವು ನಿಮ್ಮ ಪಾದಗಳನ್ನು ಎಳೆದಿರುವ ರೀತಿ ನಿಮ್ಮ ಪ್ರಾಮಾಣಿಕ ನಂಬಿಕೆಗಳ ಬಗ್ಗೆ ಅನುಮಾನ ಹುಟ್ಟುಹಾಕುತ್ತದೆ. ನೀವು ತ್ವರಿತವಾಗಿ ವರದಿಗಳನ್ನು ಸ್ಪೀಕರ್‌ಗೆ ರವಾನಿಸಬೇಕು ಮತ್ತು ಸದನದಲ್ಲಿ ಚರ್ಚೆಯನ್ನು ಪ್ರಾರಂಭಿಸಬೇಕು” ಎಂದು ನ್ಯಾಯಾಲಯ ಹೇಳಿದೆ.

ಸಿಎಜಿ ವರದಿಗಳನ್ನು ಲೆಫ್ಟಿನೆಂಟ್ ಗವರ್ನರ್ ವಿಕೆ ಸಕ್ಸೇನಾ ಅವರಿಗೆ ಕಳುಹಿಸುವಲ್ಲಿ ದೆಹಲಿ ಸರ್ಕಾರ ವಿಳಂಬ ಮಾಡಿರುವುದು ಮತ್ತು ಸರ್ಕಾರ ಈ ವಿಷಯವನ್ನು ನಿಭಾಯಿಸಿದ ರೀತಿ ” ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ಅನುಮಾನಗಳನ್ನು” ಹುಟ್ಟುಹಾಕಿದೆ ಎಂದು ತರಾಟೆಗೆ ತೆಗೆದು–ಕೊಂಡಿದೆ.

ಸಿಎಜಿ ವರದಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಮದ್ಯನೀತಿ ಅನುಷ್ಠಾನದಲ್ಲಿ ಅವ್ಯವಹಾರ ಆಗಿದೆ ಎಂದು ಹೇಳಿತ್ತು.ಈ ಕುರಿತು ದೆಹಲಿ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರಿಗೂ ಸಿಎಜಿ ವರದಿ ಸಲ್ಲಿಸಲಾಗಿತ್ತು

# ಸೂಫಿ ಸಂತರಿಂದ ವಚನ ಭೋದನೆ ಬಸವಣ್ಣನವರು ಯಾವ ಜಾತಿಗೆ ಸಮಿತರಲ್ಲ




**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟ ; ಬಸವ ಧರ್ಮ ಪೀಠದ ಏಳಿಗೆಗಾಗಿ ಸದಾ ರಾಷ್ಟ್ರೀಯ ಬಸವದಳದ ಗಣ ನಾಯಕರು ಸದ್ದಾ ಸಿದ್ದರಾಗಿ ದುಡಿಯಬೇಕು ಹಾಗೂ ಸದಾ ನಾವು ಮಾತೆ ಮಹಾದೇವಿ ಹಾಗೂ ಲಿಂಗಾನಂದ ಸ್ವಾಮಿಗಳು ಯಾವ ರೀತಿ ಬಸವಣ್ಣನವರ ತತ್ವ ಸಿದ್ದಾಂತಗಳ ಪ್ರಚಾರ ಮಾಡಿದರು ಅದೇ ರೀತಿ ನಾವು ಮಾಡಬೇಕು ಎಂದು ರಾಷ್ಟ್ರೀಯ ಬಸವದಳದ ರಾಜ್ಯ ಅಧ್ಯಕ್ಷ ಶ್ರೀ ಬಸವರಾಜ ಪಾಟೀಲ ಶಿವಪೂರ ನುಡಿದರು.

ಅವರು ಇಂದು ಸ್ವಾಭಿಮಾನಿ ಶರಣ ಮೇಳದ ಎರಡನೇ ದಿನ ಗೋಷ್ಠಿಯಲ್ಲಿ ಮಾತನಾಡಿದರು.

ಧರ್ಮದ ಏಳಿಗೆಗಾಗಿ ಮೂಢನಂಬಿಕೆ ಜೀವನದಲ್ಲಿ ಅಳವಡಿಸಿಕೊಳ್ಳಬಾರದು. ವಿಶ್ವ ಗುರು ಬಸವಣ್ಣನವರು ಸಮಾಜ ಧಾರ್ಮಿಕ ತತ್ವ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮೂಢನಂಬಿಕೆ ವಿರೋಧಿಸುತ್ತೇವೆ ಆದರೆ ಯೋಗಿ ಶಿವನ ತತ್ವ ನಾವು ಅಳವಡಿಸಿಕೊಳ್ಳುತ್ತೇವೆ ವಿನಹ ವಿರೋಧಿಗಳು ನಾವಲ್ಲ. ನಮ್ಮ ಧರ್ಮ ಸ್ವತಂತ್ರ ಧರ್ಮ ಲಿಂಗಾಯತ ಧರ್ಮ ವಿಶ್ವಗುರು ಬಸವಣ್ಣನವರು ನೀಡಿರುವ ಕೊಡುಗೆ ಅಪಾರ

ಸ್ವಾಭಿಮಾನಿ ಶರಣ ಮೇಳದ ಉದ್ದೇಶ ಮೂಲ ಮಾತಾಜಿ ಹಾಗೂ ಅಪ್ಪಾಜಿಯವರ ಬಸವಣ್ಣನವರ ತತ್ವ ಸಿದ್ದಾಂತವು ಜೀವನದಲ್ಲಿ ಅಳವಡಿಸಿಕೊಂಡು ಹೋಗುವುದೇ ಇರುವ ಕಾರಣ ಸ್ವಾಭಿಮಾನಿ ಶರಣ ಮೇಳ ಮಾಡಲಾಗಿದೆ. ಜಗತ್ತಿನಲ್ಲಿ ಎಲ್ಲರುಇ ಹೆಚ್ಚಿನ ಪ್ರಮಾಣದಲ್ಲಿ ಮಾಡಬಹುದು ಹಾಗೂ ಬಸವಣ್ಣನವರ ವಿಚಾರಗಳನ್ನು ಪ್ರತಿಯೊಬ್ಬ ರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸ್ವಾಮಿಜಿ ನುಡಿದರು.

ಬಂಡಿ ಮಂಜುನಾಥ; ಕುವೆಂಪು ಹೇಳಿದಂತೆ ಆಕಾಶದ ಬೆಳಕಾಗಿ ನೀ ಬಂದೆ ಎಂಬಂತೆ ಬಸವಣ್ಣನವರ ತತ್ವಗಳನ್ನು ಪ್ರಚಾರ ಮಾಡಿದ್ದಾರೆ ಎಂಬುದು ಮಾತಾಜಿ ಅಪ್ಪಾಜಿಯವರ ಸೇವೆ ಸ್ಮರಣೀಯ. ಬಸವ ಧರ್ಮ ಪೀಠದ ಏಳಿಗೆಗಾಗಿ ನಾವೆಲ್ಲರೂ ದುಡಿಯೊಣ..

ಬಸವ ಧರ್ಮ ಪೀಠದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ ಎಲ್ಲರಿಗೂ ಧನ್ಯವಾದಗಳು

ನಿಜವಾದ ಸಂಗತಿಯನ್ನು ನಾನು ಮಾಧ್ಯಮದ ಮೂಲಕ ಹೊರ ಹಾಕಿದರೆ ವಿರೋಧಿಗಳು ಜೈಲು ಪಾಲಾಗುವ ಸಂದರ್ಭ ಗ್ಯಾರಂಟಿ..

ನಮಗೆ ನ್ಯಾಯಾಲಯದಲ್ಲಿ ನ್ಯಾಯ ಸಿಗುವ ಅವಕಾಶವಿದೆ ಎಂದು ಮಂಜುನಾಥ ಬಂಡಿ ಇಂದಿನ ಪೀಠದ ವಿರೋಧ ಆಕ್ರೋಶ. ವ್ಯಕ್ತ ಪಡಿಸಿದರು.

ಬಸವಣ್ಣನವರ ಹೆಸರು ಮಹಾತ್ಮ ಬಸವಣ್ಣನವರು ಎಂದು ಅಭಿಮಾನ ಇದೆ ಹಾಗೇ ಬಸವಣ್ಣನವರಿಗೆ ಯಾವ ಜಾತಿಯಿಲ್ಲ.. ಕನ್ನಡ ಸಾಹಿತ್ಯ ವಚನ ಸಾಹಿತ್ಯಸಿಮಿತವಾಗಿದೆ ಬಸವಣ್ಣನವರ ಯಾವುದೇ ಜಾತಿ ಮತ ಬೇದವಿಲ್ಲ. ಎಂದು ಶಶಿಕಾಂತ ಬಿರಾಜದಾರ ನುಡಿದರು.

ಬಸವಣ್ಣನವರು ನೀಡಿರುವ ಧರ್ಮ ವಿಶ್ವಧರ್ಮ ಲಿಂಗಾಯತ ಧರ್ಮ. ಹೀಗಾಗಿ ಪ್ರಜಾಪ್ರಭುತ್ವ ನೀಡಿಸ ಮೊಟ್ಟಮೊದಲ ವಿಶ್ವ ಮಾನವ ಸಂದೇಶವನ್ನು ನೀಡಿದರು.

ನಮ್ಮ ಜೀವನದ ಶಿಲ್ಪಿ ನಾವೆ ಇದಿವಿ ಶಶಿಕಾಂತ ನುಡಿದರು.

ಅಬ್ದುಲ್ ರಜಾಕ್ ಖಾದ್ರಿ ಧಾರವಾಡ ; ಮನುಷ್ಯ ಮನುಷ್ಯರಾಗಿ ಬಾಳಬೇಕು.. ಕೂಡಲಸಂಗಮ ಇದು ಎಲ್ಲರೂ ಸಂಗಮವಾದ ಪುಣ್ಯಕ್ಷೇತ್ರ. ಬಸವಣ್ಣನವರ ವಚನ ಹೇಳಿದಂತೆ ಇವನಮ್ಮವ ಇವನಮವ ಎಂಬಂತೆ ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡರೆ ಮಾನವ. ಇಲ್ಲ ಅಂದರೆ ಮನುಷ್ಯ ಹಾಗಾಗಿ ಪ್ರತಿಯೊಬ್ಬರೂ ಮಾನವರಾಗಿ ಬಾಳಬೇಕು ಎಂದು ಅಬ್ದುಲ್ ರಜಾಕ್ ಖಾದ್ರಿ ಅವರು ನುಡಿದರು.

ವೇದಿಕೆ ಮೇಲೆ ಸಿದ್ದರಾಮ ಚೈತನ್ಯ ಸ್ವಾಮಿಗಳು. ಅರೇಶಂಕರ ಮಠ ಕುಣಿಗಲ. ಪೂಜ್ಯ ಶ್ರೀ ಜಯಬಸವಾನಂದ ಸ್ವಾಮಿ ಚಿಕ್ಕಮಗಳೂರು. ಓಂಕಾರೇಶ್ವರ ಸ್ವಾಮಿ ಕಲ್ಯಾಣ ಬಸವೇಶ್ವರ ಮಠ ಸಾಲಹಳ್ಳಿ. ಪೂಜ್ಯ ಸತ್ಯದೇವಿ. ಹಾಗೂ ಮಾತೆ ಶಾಂತಾದೇವಿ. ಶಂಕರಲಿಂಗ ಸ್ವಾಮಿ. ಶ್ರೀ ಅಭಿನವ ಗುರುಲಿಂಗರೂಢರು. ಭಾನೂರ ಚನ್ನಪ್ಪ. ಸಂಜಯ ಪಾಟೀಲ್ ಗೋಕಾಕ ಸ್ವಾಗತ. ನಾಗೇಂದ್ರಪ್ಪ ನಿಂಬೂರಗೆ ನಿರೂಪಣೆ ಮಾಡಿದರು. ವಚನ ನೃತ್ಯ ಮಕ್ಕಳಿಂದ ಮಾಡಿದರು.

# ವಡಗಾಂವದಲ್ಲಿ ಜ. 16ರಿಂದ ವೀರಭದ್ರೇಶ್ವರ ಜಾತ್ರಾ ಮಹೋತ್ಸವ



**ಮಲ್ಲಮ್ಮ ನುಡಿ ವಾರ್ತೆ**

ಬೀದರ್:ಔರಾದ್ ತಾಲೂಕಿನ ವಡಗಾಂವ (ದೇಶಮುಖ) ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಕೂಡ ಜ. 16 ಮತ್ತು 17 ರಂದು ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಜನೆವರಿ 16 ರಂದು ಗುರುವಾರ ಬೆಳಿಗ್ಗೆ 9 ಗಂಟೆಗೆ ರುದ್ರಾಭಿಷೇಕ ರಾತ್ರಿ 8 ಗಂಟೆಗೆ ಗ್ರಾಮದ ಭಜನಾ ಮಂಡಳಿಯಿಂದ ಭಜನೆ, ವಚನ, ಗಾಯನ ಕಾರ್ಯಕ್ರಮ ನಡೆಯಲಿವೆ.

ಜನೆವರಿ 17 ರಂದು ಕ್ರವಾರ ಬೆಳಿಗ್ಗೆ 5.30 ಗಂಟೆಗೆ ಪಲ್ಲಕ್ಕಿ ಉತ್ಸವ 9 ಗಂಟೆಗೆ ಅಗ್ನಿ ಪೂಜೆ, ನಂತರ ಮಹಾಪ್ರಸಾದ ಹಾಗೂ ಸಾಯಂಕಾಲ 5.30 ಗಂ–ಟೆಗೆ ರಥೋತ್ಸವ ಕಾರ್ಯಕ್ರಮ ಜರುಗಲಿದೆ.


ಈ ಕಾರ್ಯಕ್ರಮದಲ್ಲಿ ವಚನ, ಭಾವಗೀತೆ, ಜಾನಪದ ಮತ್ತು ಭಜನೆ ಕಾರ್.ಕ್ರಮ ನೆರವೆರಲಿವೆ. ಕಾರ್ಯಕ್ರಮಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ತನು ಮನ, ಧನದಿಂದ ಸೇವೆ ಸಲ್ಲಿಸಿ ವೀರಭದ್ರೇಶ್ವರ ದೇವರ ಆಶಿರ್ವಾದ ಪಡೆಯಬೇಕೆಂದು ದೇವಸ್ಥಾನ ಕಮಿಟಿಯ ಅಧ್ಯಕ್ಷರಾದ ಬಸವರಾಜ ದೇಶಮುಖ ಹಾಗೂ ಗೌರವಾಧ್ಯಕ್ಷರಾದ ಶರಣಬಸಪ್ಪ ದೇಶಮುಖ ಮನವಿ ಮಾಡಿದ್ದಾರೆ.

# ನೇತ್ರ ತಪಾಸಣೆ ಶಿಬಿರ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಜನವರಿ 13, ಜಿಲ್ಲೆಯಾದ್ಯಂತ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಯಾದಗಿರಿ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಉಚಿತವಾಗಿ ನೇತ್ರ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಯಾದಗಿರಿ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ್ ಅವರು ತಿಳಿಸಿದ್ದಾರೆ. ಶಹಾಪೂರ ತಾಲ್ಲೂಕಿನಲ್ಲಿ 2025ರ ಜನವರಿ 16 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಶಹಾಪೂರ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದೆ. ವಡಗೇರಾ ತಾಲ್ಲೂಕಿನಲ್ಲಿ 2025ರ ಜನವರಿ 17 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ವಡಗೇರಾ ಸಮುದಾಯ ಆರೋಗ್ಯ ಕೇಂದ್ರ ನಡೆಯಲಿದೆ. ಸುರಪುರ ತಾಲ್ಲೂಕಿನಲ್ಲಿ 2025ರ ಜನವರಿ 18 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಸುರಪುರ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದೆ. ಹುಣಸಗಿ ತಾಲ್ಲೂಕಿನಲ್ಲಿ 2025ರ ಜನವರಿ 20 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಹುಣಸಗಿ ಸಮುದಾಯ ಆರೋಗ್ಯ ಕೇಂದ್ರ ನಡೆಯಲಿದೆ. ಯಾದಗಿರಿ ತಾಲ್ಲೂಕಿನಲ್ಲಿ 2025ರ ಜನವರಿ 21 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ನಡೆಯಲಿದೆ. ಗುರುಮಠಕಲ್ ತಾಲ್ಲೂಕಿನಲ್ಲಿ 2025ರ ಜನವರಿ 22 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಗುರುಮಠಕಲ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆಯಲಿದೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕರ ಸಂಕ್ರಾಂತಿ ಹಬ್ಬದ ಸಿದ್ದರಾಯ ಪಲ್ಲಕ್ಕಿ ಉತ್ಸವ



**ಮಲ್ಲಮ್ಮ ನುಡಿ ವಾರ್ತೆ**

ಇಂಡಿ: ತಾಲೂಕಿನ ಶಿರಗೂರ ಗ್ರಾಮದಲ್ಲಿ ಪ್ರತಿ ವರ್ಷದಂತೆ ಮಕರ ಸಂಕ್ರಾಂತಿ ಹಬ್ಬದ ನಿಮಿತ್ತ ಸಿದ್ಧರಾಯ್ ದೇವರ ಅದ್ದೂರಿ ಪಲ್ಲಕ್ಕಿ ಉತ್ಸವ ಗ್ರಾಮದ ಲಕ್ಷ್ಮಿ ದೇವಸ್ಥಾನದಿಂದ ಭೀಮನದಿ ತೀರದವರೆಗೂ ಮೆರವಣಿಗೆ ನಡೆದಿದ್ದು. ಗ್ರಾಮಸ್ಥರು ದೇವಸ್ಥಾನದ ಆವರಣದಲ್ಲಿ ಸುಮಾರು 40.000 ಕ್ಕೂ ಹೆಚ್ಚು ಬಣ್ಣ, ಬಣ್ಣದ ಅಲಂಕಾರದ ಮದ್ದು ಸುಡುತ್ತಾ ಡೊಳ್ಳಿನ ಕುಣಿತಕ್ಕೆ ಹೆಜ್ಜೆ ಹಾಕುತ್ತ ಸಂಭ್ರಮದಿಂದ ಆಚರಣೆ ಮಾಡಿದರು. ದೇವಸ್ಥಾನದ ಆವರಣದಲ್ಲಿ ಭಕ್ತಾದಿಗಳ ಜನ ಜಾಗೃತಿಯಿಂದ ಕೂಡಿದ್ದು ಸುಂದರವಾದ ಜಾತ್ರೆ ವಾತಾವರಣ ಕಂಡಿತು. ಗುಡಿಗೆ ಬಣ್ಣ ಬಣ್ಣದ ವಿದ್ಯುತ್ ದೀಪದ ಸರಮಾಲೆಗಳಿಂದ ಅಲಂಕಾರ ಮಾಡಿದ್ದು. ದೇವರಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಭಕ್ತಿಯಿಂದ ಎಳ್ಳು, ಬೆಲ್ಲ, ಸಕ್ಕರೆ, ಸಿಹಿ ಹಂಚಿ, ತನು ಮನಗಳಿಂದ ಖುಷಿಯನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಯಲ್ಲಪ್ಪ ಮಹಾರಾಯರು, ಸಿದ್ದಪ್ಪ ಮಹಾರಾಯರು, ಸಿದ್ದರಾಯ ದೇವರ ಕಮೀಟಿ ಅಧ್ಯಕ್ಷ ಶರಣಪ್ಪ ಪೂಜಾರಿ, ಗ್ರಾಪಂ ಮಾಜಿ ಅಧ್ಯಕ್ಷ ಬೀರಪ್ಪ ನಾವದಗಿ, ಗ್ರಾಪಂ ಸದಸ್ಯ ಶ್ರೀಶೈಲ್ ಗೌಳಿ, ಚಂದ್ರಶ್ಯಾ ಪೂಜಾರಿ, ಗ್ರಾಮಸ್ಥರು ಸೇರಿದಂತೆ ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

# ಸಮಾಜದ ಒಳಿತಿಗಾಗಿ ಬದುಕಿದ ನಿಜ ಕಾಯಕ ಯೋಗಿ ಸಿದ್ಧರಾಮೇಶ್ವರರು



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.14:12ನೇ ಶತಮಾನದ ಮಹಾಶರಣ ಸಿದ್ಧರಾಮೇಶ್ವರರು ಸಮಾಜದ ಒಳಿತಿಗಾಗಿ ಬದುಕಿದ ನಿಜವಾದ ಕಾಯಕ ಯೋಗಿ ಎಂದು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದರು.

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಛಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಿದ್ಧರಾಮೇಶ್ವರ ಜಯಂತಿ, ಸಂಕ್ರಾಂತಿ ಹಬ್ಬದ ಆಚರಣೆ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು.

ತನ್ನನ್ನು ತಾನು ಅರಿತು ಬಾಳಿದ ಸಿದ್ಧರಾಮೇಶ್ವರರು ಕೆರೆ, ಕಾಲುವೆ, ದೇವಸ್ಥಾನ, ಕಟ್ಟಿಸುವ ಮೂಲಕ ಕರ್ಮ ಮಾರ್ಗದಲ್ಲಿ ಸಾಗಿ ಮಾನವ ಜನ್ಮ ಸಾರ್ಥಕ ಎಂದು ನಿರೂಪಿಸಿದ್ದಾರೆ.

ಅವರ ವಚನಗಳು ಸಮಾಜದಲ್ಲಿರುವ ಸಕಲ ಜೀವಿಗಳಿಗೂ ಒಳಿತನ್ನು ಬಯಸಿವೆ. ಬದುಕು ಶ್ರೆ?ಷ್ಠವಾಗಬೇಕಾದರೆ ದುಡಿಮೆಯನ್ನು ಪೂಜಿಸಬೇಕು. ದುಡಿಮೆಯಲ್ಲಿ ಭಗವಂತನನ್ನು ಕಾಣಬೇಕು ಎಂದು ತಿಳಿಸುತ್ತವೆ.

ಹಾಗಾಗಿ ಪ್ರತಿಯೊಬ್ಬರೂ ಸೋಮಾರಿಗಳಾಗದೆ ದುಡಿಮೆಗೆ ಪ್ರಾಮುಖ್ಯತೆ ನೀಡಬೇಕು ಎಂದು ತಿಳಿಸಿದರು.

ಮನುಷ್ಯ ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಲ್ಲ ಎಂಬುದನ್ನು ಸಿದ್ಧರಾಮೇಶ್ವರರು 12ನೇ ಶತಮಾನದಲ್ಲಿಯೇ ತೋರಿಸಿ ಕೊಟ್ಟಿದ್ದಾರೆ. ಅವರನ್ನು ಸ್ಫೂರ್ತಿಯನ್ನಾಗಿಸಿಕೊಂಡು ಇಂದಿನ ಯುವ ಪೀಳಿಗೆ ಸಾಧನೆಯ ಶಿಖರವನ್ನೇರಬೇಕು ಎಂದು ಹೇಳಿದರು.

ಸಂಕ್ರಾಂತಿ ಹಬ್ಬ ನಮ್ಮಲ್ಲಿರುವ ವಿರಸ ಭಾವ ಮರೆಸಿ ಎಲ್ಲರೊಂದಿಗೆ ಪ್ರೀತಿ, ಸ್ನೇಹದಿಂದ ಇರಬೇಕು ಎನ್ನುವುದು ತಿಳಿಸುತ್ತದೆ. ಎಲ್ಲರೂ ಎಲ್ಲ, ಬೆಲ್ಲ ತಿಂದು ಬದುಕಿನಲ್ಲಿ ಸಿಹಿಯಾಗಿರಬೇಕು ಎಂದು ನುಡಿದರು. ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ವಚನಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಿದ ಶಿವಯೋಗಿ ಸಿದ್ಧರಾಮೇಶ್ವರರು ಅನುಭವ ಮಂಟಪದ ಧೃವತಾರೆ ಆಗಿದ್ದರು ಎಂದು ಬಣ್ಣಿಸಿದರು.

ಮಹಾಲಿಂಗ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ಸಂಸ್ಥೆ ನಿರ್ದೇಶಕ ಶಶಿಧರ ಕೋಸಂಬೆ, ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಇದ್ದರು. ಲಕ್ಷ್ಮಣ ಮೇತ್ರೆ ನಿರೂಪಿಸಿ, ವಂದಿಸಿದರು.


# ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ



ಮಲ್ಲಮ ನುಡಿ ವಾರ್ತೆ


ಬೀದರ. ಜ.14:ಜಿಲ್ಲಾಡಳಿತದ ವತಿಯಿಂದ ಮಂಗಳವಾರ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿಯನ್ನು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿ. ಸಹಾಯಕ ಆಯುಕ್ತ ಮೊಹ್ಮದ್ ಶಕೀಲ್ ಹಾಗೂ ಸಮಾಜದ ಗಣ್ಯರು ಸಿದ್ಧರಾಮೇಶ್ವರರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ, ಭೋವಿ ಸಮಾಜದ ಜಿಲ್ಲಾಧ್ಯಕ್ಷ ಮಾಣಿಕರಾವ ವಾಡೇಕರ್, ಬೀದರ ತಾಲ್ಲೂಕಾ ಅಧ್ಯಕ್ಷ ಪುಂಡಲೀಕ್ ನಿಂಗದಲ್ಲಿಕರ್, ರಮೇಶ ಹಳ್ಳಿಖೇಡ್, ಬಸವರಾಜ ಕಾಳೆ, ವಿಜಯಕುಮಾರ ಸೋನಾರೆ, ಶಿವಪುತ್ರಪ್ಪಾ ಪಾಟೀಲ್, ಸುರೇಶ ಪಾಟೀಲ್, ಸಂತೋಷ ಏಣಕುರೆ, ರಮೇಶ್ ಬಿರಾದಾರ, ಸೋಮನಾಥ ಸಂತಪುರೆ, ರಾಜು ಭೋವಿ, ಚಿತ್ರ ಭೋವಿ, ಅಶೋಕ್ ಗಡವಂತಿ, ನಾಗೇಶ್ ಭೋವಿ, ಚಂದು ಬೀದರ, ಅಶೋಕ್ ಮನ್ನಾಏಖೇಳಿ, ಮಾಣಿಕ ನಿಜಾಮಪುರ್, ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕಲಬುರಗಿ: ಕರ್ನಾಟಕ ಮಾಧ್ಯಮ ಮಾನ್ಯತಾ ಸಮಿತಿಯಲ್ಲಿ ಕಲ್ಬುರ್ಗಿಯ ಸುಮಾರು 50 ವರ್ಷದ ಹಳೆಯ ಪತ್ರಿಕೆ ದಿ. ಜಯಪ್ರಕಾಶ್ ಕುಲಕರ್ಣಿ ರವರು ಸಂಸ್ಥಾಪಕ ಸಂಪಾದಕರು ಅವರಿಂದ ಸ್ಥಾಪನೆಗೊಂಡ " ಕನ್ನಡ ಬಂಧು " ಕನ್ನಡ ದಿನ ಪತ್ರಿಕೆಯ ಸಂಪಾದಕರಾದ ಶ್ರೀ ಗುರುರಾಜ ಜೈ ಪಿ ಕುಲಕರ್ಣಿ ರವರಿಗೆ ಸರ್ಕಾರದಿಂದ ಮಾಧ್ಯಮ ಅಕಾಡೆಮಿ ಸದಸ್ಯರಾಗಿ ಆಯ್ಕೆ ಸಂದರ್ಭದಲ್ಲಿ ಬ್ರಾಹ್ಮಣ ಯುವ ಒಕ್ಕೂಟ ವತಿಯಿಂದ ಶ್ರೀಯುತರಿಗೆ ಸನ್ಮಾನ ಮಾಡಲಾಯಿತು ಇದೇ ಸಂದರ್ಭದಲ್ಲಿ ಸಂಘದ ಗೌರವ ಅಧ್ಯಕ್ಷರಾದ ಶ್ರೀ ಪಿ.ವಿ ಜೋಶಿ, ಕಾರ್ಯದರ್ಶಿ ಪ್ರಸನ್ನ ದೇಶಪಾಂಡೆ, ಶ್ರೀಪಾದ್, ರಮಾಕಾಂತ್ ನರಬೋಲಿ , ಡಾ. ಗುರುರಾಜ್, ನಿಖಿಲ್ ಜೋಶಿ, ಮಾರ್ಥಂಡ ಕುಲಕರ್ಣಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಯುವ ಪ್ರತಿಭೆಗಳನ್ನು ಗುರುತಿಸಲು ಹಲವು ಕ್ರೀಡೆ ಆಯೋಜನೆ :ಸಂಸದ ಹಿಟ್ನಾಳ್




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.14: ದಕ್ಷಿಣ ಭಾರತದ ಕುಂಭಮೇಳ ಎಂದೆ ಪ್ರಸಿದ್ಧವಾದ ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿಯುವಪ್ರತಿಭೆಗಳನ್ನು ಗುರುತಿಸಲು ಮ್ಯಾರಥಾನ್ ಸೇರಿದಂತೆ ಹಲವಾರು ಕ್ರೀಡಾ ಕಾರ್ಯಕ್ರಮಗಳನ್ನು ಕೊಪ್ಪಳ ನಗರದಲ್ಲಿ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಅವರು ಮಂಗಳವಾರ ಶ್ರೀ ಗವಿಸಿದ್ದೇಶ್ವರ ಜಾತೆ-ಯ ಅಂಗವಾಗಿ ಕೊಪ್ಪಳ ನಗರದಲ್ಲಿ ವಿವಿಧ ಸಂಘ-ಸಂಸ್ಥೆಗಳ ಸಹಯೊಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಮ್ಯಾರಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಕ್ರೀಡೆಗಳ ಆಯೋಜನೆಗೆ ಜಿಲ್ಲೆಯ ಜನಪ್ರತಿನಿಧಿಗಳು. ವಾಣಿಜ್ಯೋದ್ಯಮಿಗಳು ಹಾಗೂ ವಿವಿಧ ಸಂಘ-ಸಂಸ್ಥೆಯವರು ಸಹಕಾರ ನೀಡಿದ್ದಾರೆ. 15 ದಿನಗಳವರೆಗೆ ವಿವಿಧ ಕ್ರೀಡಾ ಕಾರ್ಯಕ್ರಮಗಳು ನಡೆಯಲಿವೆ. ಇದರ ಯಶಸ್ವಿಗೆ ಮಾಧ್ಯಮ ಪ್ರತಿನಿಧಿಗಳು ಎಲ್ಲಾ ಕಾರ್ಯಕ್ರಮಗಳ ಹೆಚ್ಚಿನ ಪ್ರಚಾರ ನೀಡುತ್ತಿದ್ದಾರೆ. ಎಲ್ಲರೂ ಸೇರಿ ಶ್ರೀ ಗವಿಸಿದ್ದೇಶ್ವರ ಜಾತೆ-ಗೆ ಮೆರಗು ತರೋಣ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಭಿನಂದನೆಗಳು ಎಂದು ಹೇಳಿದರು.

ಮಾಜಿ ಸಂಸದರಾದ ಸಂಗಣ್ಣ ಕರಡಿ ಅವರು ಮಾತನಾಡಿ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ಕಳೆದ ಹತ್ತು ವರ್ಷಗಳಿಂದ ಮ್ಯಾರಥಾನ್ ಕಾರ್ಯಕ್ರಮ ಆಯೋಜನೆ ಮಾಡುತ್ತಾ ಬರಲಾಗುತ್ತಿದೆ. ಇದರಿಂದ ಎಲ್ಲಾ ಕ್ರೀಡಾ ಪಟುಗಳನ್ನು ಒಟ್ಟಿಗೆ ಸೇರಿಸಲು ಅನುಕೂಲವಾಗಲಿದೆ ಮತ್ತು ಕ್ರೀಡಾ ಪಟುಗಳು ಇದರಲ್ಲಿ ಭಾಗವಹಿಸುವುದರಿಂದ ಅವರ ಉತ್ಸಾಹ ಇಮ್ಮಡಿ ಆಗಲಿದೆ ಎಂದು ಹೇಳಿದರು

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಮಾತನಾಡಿ ಮೈಸೂರು ದಸರಾದಂತೆ ನಮ್ಮಲ್ಲಿಯೂ ಬರುವ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಕ್ರೀಡಾ ಕಾರ್ಯಕ್ರಮಗಳು ನಡೆಯಬೇಕು. ಕ್ರೀಡೆಯಿಂದ ಯುವಕರು ಮಾನಸಿಕ ಮತ್ತು ದೈಹಿಕವಾಗಿ ಸಬಲರಾಗುತ್ತಾರೆ. ಇಂದಿನ ಒತ್ತಡ ಜೀವನ ಬದುಕಿನಲ್ಲಿ ಕ್ರೀಡೆ ತುಂಭಾ ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್. ಅರಸಿದ್ದಿ ಅವರು ಮಾತನಾಡಿ ಇಂದಿನ ಮ್ಯಾರಥಾನ್ ಕಾರ್ಯಕ್ರಮದಲ್ಲಿ ಹಲವಾರು ವಿದ್ಯಾರ್ಥಿಗಳು ಭಾಗವಹಿಸಿದ್ದು ಕ್ರೀಡೆ ಎಲ್ಲರಿಗೂ ಒಟ್ಟಿಗೆ ಸೇರಿಸುವದರ ಜೊತೆಗೆ ನಮ್ಮ ಆರೋಗ್ಯಕ್ಕೆ ಬಹಳ ಒಳ್ಳೆಯದು. ಇದರಲ್ಲಿ ಭಾಗವಹಿಸುವದು ಬಹಳ ಮುಖ್ಯವಾಗಿದೆ ಎಂದು ಹೇಳಿದರು

ಮ್ಯಾರಥಾನ್ ಓಟ ಹಳೆ ಆರ್.ಟಿ.ಓ ಕಛೇರಿ ಹತ್ತಿರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಆರಂಭವಾಗಿ. ಗಂಜ ಸರ್ಕಲ್. ಅಶೋಕ ವೃತ್ತ. ಗಡಿಯಾರ ಕಂಬದ ಮಾರ್ಗವಾಗಿ ಗವಿಮಠದವರೆಗೆ ನಡೆಯಿತು. ಇದರಲ್ಲಿ ಭಾಗವಹಿಸಿ ಪ್ರಥಮ. ದ್ವಿತೀಯ. ತೃತೀಯ ಸೇರಿದಂತೆ ಒಟ್ಟು ಎಂಟು ಸ್ಥಾನ ಪಡೆದ ಅಭ್ಯರ್ಥಿಗಳಿಗೆ ಗವಿಮಠದಲ್ಲಿ ಪ್ರಶಸ್ತಿ ಫಲಕದ ಜೊತೆಗೆ ನಗದು ಬಹುಮಾನವನ್ನು ಗಣ್ಯರಿಂದ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಕೆ. ಶ್ರೀನಿವಾಸ ಗುಪ್ತಾ. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಬಸವರಾಜ. ಕ್ರೀಡಾ ಇಲಾಖೆಯ ಅಧಿಕಾರಿ ವಿಠ್ಠಲ ಚಾಬಗೌಡರ, ಕೃಷ್ಣ ಇಟಂಗಿ ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರೆ ಹಲವಾರು ಜನರು ಭಾಗವಹಿಸಿದ್ದರು.

## ದೆಹಲಿ ಹೋರಾಟ ಬೆಂಬಲಿಸಿ ರೈತರ ಪ್ರತಿಭಟನೆ



ಮಲ್ಲಮ ನುಡಿ ವಾರ್ತೆ

ಬೀದರ. ಜ. 14 : ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿಗೆ ಆಗ್ರಹಿಸಿ ರೈತ ನಾಯಕ ಜಗಜೀತಸಿಂಗ್ ದಲ್ಲೆವಾಲ ಅವರು ನವದೆಹಲಿಯಲ್ಲಿ ನಡೆಸುತ್ತಿರುವ 45 ದಿನಗಳ ಆಮರಣಾಂತ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರಧಾನಿಗೆ ಬರೆದ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ಅವರಿಗೆ ಸಲ್ಲಿಸಿದರು.

'ಜಗಜೀತಸಿಂಗ್ ಅವರು 45 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರ ಆರೋಗ್ಯ ದಿನೇ ದಿನೇ ಕ್ಷೀಣಿಸುತ್ತಿದೆ. ಅವರಿಗೆ ಏನಾದರೂ ಹೆಚ್ಚು ಕಡಿಮೆಯಾದರೆ ಕೇಂದ್ರ ಸರ್ಕಾರ ಹೊಣೆ ಹೊರಬೇಕಾಗುತ್ತದೆ. ರೈತರ ವಿಷಯದಲ್ಲಿ ಪ್ರಧಾನಿ ಹುಡುಗಾಟಿಕೆ ನಡೆಸುತ್ತಿದ್ದಾರೆ. ರೈತರ ತುಟಿಗೆ ತುಪ್ಪ ಸವರಿ ತಮಾಷೆ ಮಾಡುತ್ತಿದ್ದಾರೆ. ಇದು ಸರಿಯಾದ ಧೋರಣೆಯಲ್ಲ. ಕೂಡಲೇ ಬೇಡಿಕೆ ಈಡೇರಿಸಬೇಕು' ಎಂದು ಒತ್ತಾಯಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ಆಣದೂರೆ, ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀಮಂತ ಬಿರಾದಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ, ರಾಜ್ಯ ಪ್ರತಿನಿದಿ ಚಂದ್ರಶೇಖರ ಜಮಖಂಡಿ, ಮುಖಂಡರಾದ ಪ್ರವೀಣ ಕುಲಕರ್ಣಿ, ಬಾಬುರಾವ ಜೋಳದಾಬಕಾ, ಶಂಕ್ರೆಪ್ಪ ಪಾರಾ, ಸತೀಶ ನನ್ನೂರೆ, ಶೇಷರಾವ ಕಣಜಿ, ಪ್ರಕಾಶ ಬಾವಗೆ, ಮಲ್ಲಿಕಾರ್ಜುನ್ ಬಿರಾದಾರ, ನಾಗಯ್ಯ ಸ್ವಾಮಿ, ಸುಭಾಷ ರಗಟೆ, ಉಮಾಕಾಂತ ತೋರಣಾ, ವಿಠಲರಾವ ಪಾಟೀಲ, ರೇವಣಸಿದ್ದಪ್ಪ ಎರಬಾಗ ಮತ್ತಿತರರು ಪಾಲ್ಗೊಂಡಿದ್ದರು.

## ಡಾ.ಸಿದ್ದಾರೆಡ್ಡಿ ಹೆಸರಿನಲ್ಲಿ ವಿಶೇಷ ಅಂಚೆ ಲಕೋಟೆ ಬಿಡುಗಡೆ





ಅಂಚೆ ಇಲಾಖೆಯು ಈ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿ ದಿವಂಗತ ಡಾ.ಸಿದ್ದಾರೆಡ್ಡಿಯವರಿಗೆ ಗೌರವ ಸಮರ್ಪಿಸಿದ್ದು ಅತೀವ ಸಂತಸ ತಂದಿದೆ. ಡಾ.ಸಿದ್ದಾರೆಡ್ಡಿಯವರ 10ನೇ ಸ್ಮರಣೋತ್ಸವ ಸಂದರ್ಭದಲ್ಲಿ ಈ ವಿಶೇಷ ಅಂಚೆ ಲಕೋಟೆ ಹೊರತಂದಿರುವುದು ಶ್ಲಾಘನಿಯ ಕಾರ್ಯ ಎಂದು ಮಹಿಳಾ ಟಾಸ್ಕ್ ಫೋರ್ಸ್ನ ಮಾಜಿ ಅಧ್ಯಕ್ಷೆ ಡಾ.ಗುರಮ್ಮ ಸಿದ್ದಾರೆಡ್ಡಿ ತಿಳಿಸಿದ್ದಾರೆ.

ಮಲ್ಲಮ ನುಡಿ ವಾರ್ತೆ

ಬೀದರ. ಜ. 14 : ಅಂಚೆ ಇಲಾಖೆಯಿಂದ ಜನೆವರಿ 8, 9 ಹಾಗೂ 10ರಂದು ಕುಂದಾನಗರಿ ಬೆಳಗಾವಿಯಲ್ಲಿ ನಡೆದ ಇಕ್ಷಪೆಕ್ಸ್-25 ವಿಭಾಗ ಮಟ್ಟದ ಅಂಚೆ ಚೀಟಿಗಳ ಪ್ರದರ್ಶನದ ಸಂದರ್ಭದಲ್ಲಿ ವೈದ್ಯ ಸಂತರೆಂದೆ ಖ್ಯಾತಿ ಗಳಿಸಿದ, ಬಡವರ ಡಾಕ್ಟರ್ ಆಗಿದ್ದ ದಿ.ಡಾ.ಎಸ್.ಎಸ್ ಸಿದ್ದಾರೆಡ್ಡಿ ಅವರ ಹೆಸರಿನಲ್ಲಿ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಲಾಯಿತು.

ಬೀದರ್‌ಗೆ ಪಾದಾರ್ಪಣೆ ಮಾಡಿದ ಚೊಚ್ಚಲ ಶಸ್ತ್ರ ಚಿಕಿತ್ಸೆಕರಾಗಿ ಸುಮರು 5 ದಶಕಗಳ ಕಾಲ ಆರೋಗ್ಯ, ಸಾಮಾಜಿಕ, ಕೃಷಿ, ಕುಟುಂಬ ಕಲ್ಯಾಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ನಿಸ್ವಾರ್ಥ ಸೇವೆ ಗುರುತಿಸಿ ಅಂಚೆ ಇಲಾಖೆ ಈ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಿದೆ. ಬೆಳಗಾವಿಯಲ್ಲಿ ಜರುಗಿದ ವಿಶೇಷ ಅಂಚೆ ಲಕೋಟೆ ಬಿಡುಗಡೆ ಸಮಾರಂಭದಲ್ಲಿ ಬೆಳಗಾವಿ ಕರಂಜಿ ಮಠದ ಪೂಜ್ಯ ಗುರುಸಿದ್ದ ಮಹಾಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಅಂಚೆ ಅಧಿಕ್ಷಕರಾದ ವಿ.ಎನ್ ಚಿತ-ಕೋಟೆ, ವಿಜಯ ವಾದೋನಿ, ವೆಂಕಟೇಶ ಬಾದಾಮಿ, ರಮೇಶ ಕಾಮಟೆ ಹಾಗೂ ಮಂಗಲಾ ಭಾಗವತ ಉಪಸ್ಥಿತರಿದ್ದರು.

## ಎಳ್ಳು ಸಕ್ಕರೆ ಹಂಚಿ ಸಂಕ್ರಾಂತಿ ಹಬ್ಬ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಜ.14:ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ಎಳ್ಳು ಸಕ್ಕರೆ ಹಂಚಿಕೊಂಡು ಸಂತೋಷದಿಂದ ಮಂಗಳವಾರ ಮಕರ ಸಂಕ್ರಾಂತಿ ಹಬ್ಬವನ್ನು ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ, ಮಲ್ಲಮ್ಮ ಬಿರಾದಾರ ಸಂಕ್ರಾಂತಿ ಹಬ್ಬದ ಎಳ್ಳು ಸಕ್ಕರೆ (ಬೆಲ್ಲ) ತಿಂದು ಒಳ್ಳೆ ಮಾತಾಡೋಣ. ಕಳೆದ ವರ್ಷದ ಎಲ್ಲಾ ಕಹಿಗಳನ್ನು ಮರೆತು ಸಿಹಿಯಾದ ಮಾತುಗಳ ಮೂಲಕ ಬಾಂಧವ್ಯವನ್ನು ವೃದ್ಧಿಸೋಣ ಎಂದು ಹೇಳಿದರು.

ತಾಲೂಕಿನ ಎಲ್ಲಾ ಹಳ್ಳಿಗಳಲ್ಲಿ ಮಕ್ಕಳು, ಯುವಕರು, ಹಿರಿಯರು ತಮ್ಮ ಪ್ರೀತಿ ಪಾತ್ರರಿಗೆ ಪರಸ್ಪರ ಎಳ್ಳು ಸಕ್ಕರೆ ಕೊಟ್ಟು ಸಂಭ್ರಮದಿಂದ ಹಬ್ಬವನ್ನು ಆಚರಣೆ ಮಾಡಿದರು.

ಈ ಸಂದರ್ಭದಲ್ಲಿ ನಿರ್ಮಲಾ ರಾಂಪುರೆ, ಮಲ್ಲಮ್ಮ ಬಿರಾದಾರ, ಲಕ್ಷ್ಮಿಬಾಯಿ ರಾಂಪುರೆ ಮಹಾನಂದ ರಾಂಪುರೆ, ಉಷಾ ಬಿರಾದಾರ , ಸೈಲಜಾ ಬಿರಾದಾರ ಸೇರಿದಂತೆ ಅನೇಕರು ಇದ್ದರು.

## ಜ.16ರಂದು ಜೇವರ್ಗಿ ಬಂದ್‌ಗೆ ಬೆಂಬಲ

ಮಲ್ಲಮ ನುಡಿ ವಾರ್ತೆ

ಕಲಬುರಗಿ:ಜ.14: ಜಿಲ್ಲೆಯ ಜೇವರ್ಗಿ ಪಟ್ಟಣದ ವಿದ್ಯಾರ್ಥಿನಿ ಮುಸ್ಲಿಂ ಯುವಕನ ಕಿರುಕುಳಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದು, ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಡೆಯಲಿದ್ದು, ಪ್ರಕರಣವನ್ನು ಖಂಡಿಸಿ ಇದೇ ಜ.16ರಂದು "ಜೇವರ್ಗಿ ಬಂದ್" ಕರೆ ನೀಡಲಾಗಿದೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಸೇನೆಯ ಜಿಲ್ಲಾ ಅಧ್ಯಕ್ಷ ಪ್ರಶಾಂತಗೌಡ ಮಾಲಿಪಾಟೀಲ್ ಅವರು ತಿಳಿಸಿದರು.

ಮಾಲಿಪಾಟೀಲ್ ಮಾತನಾಡಿದ ಅವರು, ವಿದ್ಯಾರ್ಥಿನಿಯ ಮೇಲೆ ಮುಸ್ಲಿಂ ಯುವಕ ಕೊಟ್ಟಿರುವ ಮಾನಸಿಕ ಕಿರುಕುಳದಿಂದ ಬೇಸತ್ತು ಕುಟುಂಬದ ಮಾನ ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಂಡಿದ್ದು ಇಡೀ ನಾಗರೀಕ ಸಮುದಾಯ ತಲೆ ತಗ್ಗಿಸುವ ವಿಷಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೃತ ವಿದ್ಯಾರ್ಥಿನಿಯ ಸಹೋದರನಿಗೆ ಸರ್ಕಾರಿ ಉದ್ಯೋಗ ಕಲ್ಪಿಸಬೇಕು ಹಾಗೂ 50 ಲಕ್ಷ ಪರಿಹಾರ ಘೋಷಣೆ ಮಾಡಬೇಕು.

ವಿದ್ಯಾರ್ಥಿನಿಯ ಕುಟುಂಬದವರಿಗೆ ಸೂಕ್ತ ಭದ್ರತೆ ಕೊಡಲು ಕ್ರಮ ಕೈಗೊಳ್ಳಬೇಕು. ಸರಕಾರ ತಕ್ಷಣವೇ ಪರಿಹಾರ ಒದಗಿಸಬೇಕು. ಈ ನಿಟ್ಟಿನಲ್ಲಿ ಇದೇ ಜ.16ರಂದು ಗುರುವಾರ ಜೇವರ್ಗಿ ಪಟ್ಟಣ ಸಂಪೂರ್ಣ ಬಂದ್ ಮಾಡಲಾಗುತ್ತದೆ ಎಂದು ಹೇಳಿದರು.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.